ಕನ್ನಡ ವಿಶ್ವವಿದ್ಯಾಲಯ –ಹಂಪಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ವಿದ್ಯಾರಣ್ಯ – 583276

ಕನ್ನಡ ವಿಶ್ವವಿದ್ಯಾಲಯಕ್ಕೆ

ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ನಿಬಂಧ – 2018–19

ವಿಷಯ: ಆಯ್ದ ಮಹಿಳಾ ಕನ್ನಡ ಕಥಾ ಸಾಹಿತ್ಯದಲ್ಲಿ ಶೋಷಿತ ಸಮುದಾಯದ ಸಂವೇದನೆ

(ಶಾರದಾ ವಿ ಮೂರ್ತಿ, ವಸುಂಧರಾ ಭೂಪತಿ, ಬಿ.ಟಿ. ಲಲಿತಾನಾಯಕ್ ಅವರ ಅನುಲಕ್ಷಿಸಿ)

ಸಂಶೋಧಕರು

ಸಿ.ಲಕ್ಷ್ಮಿ

ನೋಂದಣಿ ಸಂಖ್ಯೆ: 182001030038

ಮಾರ್ಗದರ್ಶಕರು

ಡಾ.ವೆಂಕಟಪ್ಪ (ಎಂ.ಎ., ಪಿಎಚ್.ಡಿ)

ಕನ್ನಡ ಪ್ರಾಧ್ಯಾಪಕರು

ಎಸ್.ಎಲ್.ಎನ್. ಪದವಿ ಕಾಲೇಜ್

ಕೋಟೆ, ಬೆಂಗಳೂರು – 560 002

ಮಾನ್ಯತಾ ಸಂಸ್ಥೆ

ಕನ್ನಡ ಸಾಹಿತ್ಯ ಪರಿಷತ್ತು ಸಂಶೋಧನಾ ಕೇಂದ್ರ

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ,

ಬೆಂಗಳೂರು – 560 018

ಕನ್ನಡ ವಿಶ್ವವಿದ್ಯಾಲಯ –ಹಂಪಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ವಿದ್ಯಾರಣ್ಯ – 583276

ಕನ್ನಡ ವಿಶ್ವವಿದ್ಯಾಲಯಕ್ಕೆ

ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ನಿಬಂಧ – 2018–19

ವಿಷಯ: ಆಯ್ದ ಮಹಿಳಾ ಕನ್ನಡ ಕಥಾ ಸಾಹಿತ್ಯದಲ್ಲಿ ಶೋಷಿತ ಸಮುದಾಯದ ಸಂವೇದನೆ

(ಶಾರದಾ ವಿ ಮೂರ್ತಿ, ವಸುಂಧರಾ ಭೂಪತಿ, ಬಿ.ಟಿ. ಲಲಿತಾನಾಯಕ್ ಅವರ ಅನುಲಕ್ಷಿಸಿ)

ಸಂಶೋಧಕರು

ಸಿ.ಲಕ್ಷ್ಮಿ

ನೋಂದಣಿ ಸಂಖ್ಯೆ: 182001030038

ಮಾರ್ಗದರ್ಶಕರು

ಡಾ.ವೆಂಕಟಪ್ಪ (ಎಂ.ಎ., ಪಿಎಚ್.ಡಿ)

ಕನ್ನಡ ಪ್ರಾಧ್ಯಾಪಕರು

ಎಸ್.ಎಲ್.ಎನ್. ಪದವಿ ಕಾಲೇಜ್

ಕೋಟೆ, ಬೆಂಗಳೂರು – 560 002

ಮಾನ್ಯತಾ ಸಂಸ್ಥೆ

ಕನ್ನಡ ಸಾಹಿತ್ಯ ಪರಿಷತ್ತು ಸಂಶೋಧನಾ ಕೇಂದ್ರ

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ,

ಬೆಂಗಳೂರು – 560 018

ಮಾರ್ಗದರ್ಶಕರ ದೃಢೀಕರಣ ಪತ್ರ

ಸಿ.ಲಕ್ಷ್ಮಿ ಅವರು, ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ "ಆಯ್ದ ಮಹಿಳಾ ಕನ್ನಡ ಕಥಾ ಸಾಹಿತ್ಯದಲ್ಲಿ ಶೋಷಿತ ಸಮುದಾಯದ ಸಂವೇದನೆ (ಶಾರದಾ ವಿ ಮೂರ್ತಿ, ವಸುಂಧರಾ ಭೂಪತಿ, ಬಿ.ಟಿ.ಲಲಿತಾನಾಯಕ್ ಅವರ ಅನುಲಕ್ಷಿಸಿ) ಎಂಬ ನಿಬಂಧವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದ ಮೂಲಕ ಸಿದ್ಧಪಡಿಸಿರುತ್ತಾರೆ. ಈ ನಿಬಂಧದ ವಿಷಯವನ್ನು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರೆ ಉದ್ದೇಶಗಳಿಗಾಗಲಿ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸಿರುತ್ತೇನೆ.

ದಿನಾಂಕ:
ಸ್ಥಳ:

ಡಾ॥ ವೆಂಕಟಪ್ಪ
ಮಾರ್ಗದರ್ಶಕರು

ಡಾ॥ ವೆಂಕಟಪ್ಪ, ಎಂ.ಎ., ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಎಸ್.ಎಲ್.ಎನ್. ಕಾಲೇಜು
ಕೋಟೆ, ಬೆಂಗಳೂರು-560 002.

ಸಂಶೋಧನಾ ವಿದ್ಯಾರ್ಥಿಯ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಪದವಿಗಾಗಿ ಬರೆದು ಪದವಿಗಾಗಿ ಸಲ್ಲಿಸುತ್ತಿರುವ "ಆಯ್ದ ಮಹಿಳಾ ಕನ್ನಡ ಕಥಾ ಸಾಹಿತ್ಯದಲ್ಲಿ ಶೋಷಿತ ಸಮುದಾಯದ ಸಂವೇದನೆ" (ಶಾರದಾ ವಿ ಮೂರ್ತಿ, ವಸುಂಧರಾ ಭೂಪತಿ, ಬಿ.ಟಿ.ಲಲಿತಾನಾಯಕ್ ಅವರ ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಈ ನಿಬಂಧವನ್ನು ಡಾ॥ ವೆಂಕಟಪ್ಪರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ. ಈ ನಿಬಂಧವನ್ನು ಈ ಮೊದಲು ಭಾಗಶ:ವಾಗಿಯಾಗಲಿ ಪೂರ್ಣವಾಗಿ ಆಗಲಿ ಬೇರೆ ಯಾವುದೇ ಪದವಿ ಹಾಗೂ ಇನ್ನಿತರ ಸ್ವಂತ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ:
ಸ್ಥಳ; ಬೆಂಗಳೂರು

ಸಂಶೋಧಕರು
ಸಿ.ಲಕ್ಷ್ಮಿ
ಎಂ.ಫಿಲ್.ವಿದ್ಯಾರ್ಥಿ
ಹಂಪಿ ಕನ್ನಡ ವಿಶ್ವವಿದ್ಯಾಲಯ,
ಬೆಂಗಳೂರು

ಕೃತಜ್ಞತೆಗಳು

ನನ್ನ ವಿಷಯಕ್ಕೆ ಆತ್ಮೀಯವಾಗಿ ಸ್ಪಂದಿಸಿ ಅತ್ಯುತ್ತಮವಾದ ಮಾರ್ಗದರ್ಶನ ಮಾಡಿ ಸೂಕ್ತ ಸಲಹೆಗಳನ್ನು ನೀಡಿ ಜೊತೆಗೆ "ಆಯ್ದ ಮಹಿಳಾ ಕನ್ನಡ ಕಥಾ ಸಾಹಿತ್ಯದಲ್ಲಿ ಶೋಷಿತ ಸಮುದಾಯದ ಸಂವೇದನೆ' ಎಂಬ ವಿಷಯವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಎಂ.ಫಿಲ್. ಪದವಿಗೆ ಆಯ್ಕೆ ಮಾಡಿಕೊಳ್ಳುವಂತೆ ಮಾಡಿದ ಮಾರ್ಗದರ್ಶಕರಾದಂತಹ ಡಾ॥ ವೆಂಕಟಪ್ಪ ಸಾರ್, ಎಸ್.ಎಲ್.ಎನ್. ಕನ್ನಡ ಸಹಾಯಕ ಪ್ರಾಧ್ಯಾಪಕರು ಇವರಿಗೆ ತುಂಬು ಹೃದಯದ ಕೃತಜ್ಞತೆಗಳು.

ಅಧಿಕೃತವಾಗಿ ಮಾರ್ಗದರ್ಶಕರಲ್ಲದಿದ್ದರೂ ಅಧ್ಯಯನಕ್ಕೆ ಸಂಬಂಧಿಸಿದ ಹಾಗೂ ಈ ಅಧ್ಯಯನಕ್ಕೆ ಒಳಪಡುವಂತೆ ಆಕರ ಗ್ರಂಥಗಳನ್ನು ನೀಡಿದ ಪ್ರೀತಿಯ ಡಾ॥ ವಸುಂಧರಾ ಭೂಪತಿ ಮೇಡಮ್, ಡಾ॥ ಬಿ.ಟಿ.ಲಲಿತಾ ನಾಯಕ್ ಮೇಡಮ್ ಮತ್ತು ಡಾ॥ ಶಾರದಾ ವಿ.ಮೂರ್ತಿಯವರಿಗೆ ನಾನು ಚಿರಋಣಿಯಾಗಿದ್ದೇನೆ. ಸದಾ ನನ್ನ ಏಳ್ಗೆಯನ್ನೇ ಬಯಸಿದ ತಾಯಿ ಪ್ರಭಾವತಮ್ಮ, ಅತ್ತೆ ರಾಮಲಕ್ಷ್ಮಮ್ಮ ರವರಿಗೂ ಹಾಗೂ ನನ್ನ ಜೀವನದ ಬಾಳ ಸಂಗಾತಿಯಾದ ಎಸ್.ಆನಂದ್ ಇವರಿಗೆ ಮತ್ತು ನನ್ನ ಪ್ರೀತಿಯ ಮಗಳಾದ ಅಪರ್ಣಾ.ಎ. ಇವರಿಗೂ ನನ್ನ ಹೃದಯಪೂರ್ವಕ ಕೃತಜ್ಞತೆಗಳು.

ಅಧ್ಯಯನದ ಸಂದರ್ಭದಲ್ಲಿ ಸಹಾಯ ಮಾಡಿದ ಲೇಖಕಿಯರ ಸಂಘದ ಅಧ್ಯಕ್ಷರಾದ ವನಮಾಲ ಸಂಪನ್ನ ಕುಮಾರ್ ಇವರಿಗೂ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಶಾಂತ ಮೇಡಮ್ ನವರಿಗೂ ನನ್ನ ಕೃತಜ್ಞತೆಗಳು ಮತ್ತು ನನ್ನ ಸಹೋದ್ಯೋಗಿಗಳಾದ ಲಕ್ಷ್ಮೀಶ್ ಮತ್ತು ಅಶೋಕ್ ರವರಿಗೂ ನನ್ನ ಕೃತಜ್ಞತೆಗಳು.

ದಿನಾಂಕ:

ಸ್ಥಳ: ಬೆಂಗಳೂರು ಸಿ.ಲಕ್ಷ್ಮಿ

ಪರಿವಿಡಿ

ಅಧ್ಯಾಯ–1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ-1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪೀಠಿಕೆ:

ಭಾರತೀಯ ಸಾಂಸ್ಕೃತಿಕ ಚರಿತ್ರೆ ಹೆಣ್ಣಿಗೊಂದು ವಿಶಿಷ್ಟ ಸ್ಥಾನ ನೀಡಿಕೊಂಡೇ ಬಂದಿದೆ ಇಲ್ಲಿ ವಿಶಿಷ್ಟ ಎಂದರೆ ಒಂದೆಡೆ ಪೂಜಾರ್ಹಳೂ ಆದ ಹೆಣ್ಣು ಮತ್ತೊಂದೆಡೆ ತುಳಿತಕ್ಕೂ ಒಳಗಾದಳು. ಆದರೆ ತನ್ನನ್ನು ಪುರುಷ ಪ್ರಧಾನ ಸಂಸ್ಕೃತಿ ತುಳಿಯುತ್ತಿದೆ ಎನ್ನುವ ಅರಿವು ಮೂಡಿದ್ದು ಇತ್ತೀಚೆಗೆ, ಆದರೆ ಹಿಂದೆ ಯಾರೂ ಪುರುಷ ಪ್ರಧಾನ ಸಂಸ್ಕೃತಿಯ ವಿರುದ್ಧ ಸೆಟೆದು ನಿಂತಿರಲಿಲ್ಲ ಎಂದು ಹೇಳಲಾಗದು.

ಪ್ರಸ್ತುತ ಸಂದರ್ಭದಲ್ಲಿ ಮಹಿಳಾ ವಿವೇಚನೆ ಬಹುಮುಖಿ ವಿಚಾರ ನೆಲೆಗಳಲ್ಲಿ ಕವಲೊಡೆಯುತ್ತದೆ. ಮಹಾ ಭಾರತದಲ್ಲಿ ದ್ರೌಪದಿಯಂತವಳು ಪತಿಯನ್ನು, ಸಭಾಸದರನ್ನು ರಾಜತ್ವವನ್ನೇ ಪ್ರಶ್ನಿಸಿದ್ದಳು ಗಾರ್ಗಿ, ಮೈತ್ರೇಯಿಯಂತಹ ಮೇಧಾವಿಗಳೂ ಕ್ರಿಸ್ತ. ಪೂರ್ವದಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದ್ದು. ವೇದ ಉಪನಿಷತ್ತುಗಳಲ್ಲಿ ಸ್ತ್ರೀಯನ್ನು ಶೋಷಿಸುವ ವಿಧಾನ ಪ್ರಾರಂಭವಾಯಿತೆನ್ನಬಹುದು.

"ಕಾರ್ಯೇಷುದಾಸಿ, ಕರುಣೇಶು ಮಂತ್ರಿ, ಭೋಜ್ಯೇಷು
ಮಾತಾ, ರೂಪೇಷು ಲಕ್ಷ್ಮೀ, ಶಯನೇಷು ರಂಭಾ
ಕ್ಷಮೆಯಾಧರಿತ್ರಿ"

ಅಧ್ಯಯನದ ಉದ್ದೇಶ

ಅಕ್ಷರ ಸಂಸ್ಕೃತಿ ಅನೇಕ ಸಂಘರ್ಷಗಳಿಗೆ ಎಡೆ ಮಾಡಿಕೊಟ್ಟಿದೆ. 'ಮಹಿಳಾ ಜಾಗೃತಿ' ಸ್ತ್ರೀ ಉತ್ಪನ್ನ, ಪ್ರಸ್ತುತ ಸಂದರ್ಭದಲ್ಲಿ ಮಹಿಳಾ ವಿವೇಚನೆ ಬಹುಮುಖಿ ವಿಚಾರ ನೆಲೆಗಳಲ್ಲಿ ಕವಲೊಡೆಯುತ್ತಿದೆ. 'ಸಾಹಿತ್ಯವನ್ನು ಓದುವ ಕ್ರಮವೂ ಅದನ್ನು ಒಪ್ಪಿಕೊಳ್ಳುವ ವಿಧಾನದಲ್ಲೂ ನಮ್ಮ ಗ್ರಹಿಕೆಯಲ್ಲಿನ ತಾತ್ವಿಕತೆಯನ್ನು ಪ್ರಚೋದಿಸುತ್ತದೆ' ಮಹಿಳೆ ತನ್ನತ್ತ ತಾನು ಆತ್ಮಗ್ರಹಿಕೆ ಮಾಡಿಕೊಳ್ಳುವ ಮತ್ತು ಇಡೀ ಸಮಾಜ ಅವಳನ್ನು ಪರಿಭಾವಿಸುವ ಕೋನಗಳನ್ನು ರೂಪಾಂತರಗೊಳಿಸಿದೆ. 'ಸ್ತ್ರೀ' ಸಾಧ್ಯತೆಗಳಿಗೆ ಪುರುಷ ಸಮಾಜ ಸಹಮತ ನೀಡಲೇಬೇಕಾದ ಒತ್ತಡವೊಂದು ಸೃಷ್ಟಿ ಆಗಿದೆ. ಸ್ತ್ರೀ ಸಾಹಿತ್ಯ ಮತ್ತು ಚಿಂತನೆ, ಸಾಹಿತ್ಯ ಲೋಕವನ್ನು ಪುನರ್ ಮೌಲ್ಯೀಕರಣ ಮಾಡುವ ಸನ್ನಿವೇಶವನ್ನು ಸೃಷ್ಟಿಸಿದೆ. ಕಾಲಾಂತರದಿಂದ ರಚಿತಗೊಳ್ಳುತ್ತಿರುವ ಅವಳ ಅಭಿವ್ಯಕ್ತಿಗಳಲ್ಲಿ ಭಿನ್ನ ಭಿನ್ನ ಸಂವೇದನೆಗಳು ಭಿನ್ನ ಕೋನಗಳಿಂದಲೇ ಅದನ್ನು ಅಧ್ಯಯನ ಮಾಡುವ ಕುತೂಹಲವನ್ನು ಮುಂದಿಟ್ಟಿದೆ. ಸ್ತ್ರೀ ಪರವಾದ / ಏಕಾಂತವಾದ ಬದಲುಗೊಂಡು ಬಹುರೂಪಿ ಸಿದ್ಧಾಂತಗಳನ್ನು ಸೃಷ್ಟಿಸುತ್ತಿದೆ. ಮುದ್ರಸ್ಥಾಯಿಯಲ್ಲೇ ಬದುಕಿನ ಸಂಕೀರ್ಣ ಪದರುಗಳನ್ನು ಬಚ್ಚಿಡುವ ಸ್ತ್ರೀವಾದಿ ಚಿಂತನೆ ಮತ್ತು ಅದರ ಬಗೆಗಿನ ಸೈದಾಂತಿಕ ಅಧ್ಯಯನ ಪ್ರಸ್ತುತ ವಿಮರ್ಶಾ ಪ್ರಪಂಚದಲ್ಲಿ ಭಿನ್ನ ಪರಿಕಲ್ಪನೆಗಳಾಗಿ ಮೂಡುತ್ತಿದೆ. ಸ್ತ್ರೀ ಸಾಹಿತ್ಯದ ನಿರಂತರ ಓದುವಿಕೆ ನನ್ನ ಬರೆಯುವಿಕೆಯಾಗಿ ಪ್ರೇರಣೆಯಾಯಿತು. ಸ್ತ್ರೀವಾದಿ ಸಂವೇದನೆಗಳಷ್ಟೇ ಆಗಿರದೆ ಸಮಾಜದ ಬಹುಮುಖಿ ಪ್ರಜ್ಞೆಯನ್ನು ಹುಡುಕುತ್ತಿರುವ ಎಷ್ಟೋ ಲೇಖಕಿಯರ ಕತೆಗಳು ನನ್ನ ಆಸಕ್ತಿಯ ಮೂಲಗಳು. ಪ್ರಸ್ತುತ ಆಧುನಿಕ ಸಂದರ್ಭದಲ್ಲಿ ಸ್ತ್ರೀಸಾಹಿತ್ಯದ ಮರುಚಿಂತನೆ ಅವಶ್ಯವಾಗಿದೆ.

ಲೋಕದ ಗಂಡಂದಿರನ್ನು ಅಲ್ಲಗಳೆಯುವ ಮೂಲಕ ಇಡೀ ಪುರುಷ ಸಮಾಜವನ್ನು ಧಿಕ್ಕರಿಸಿದ್ದಾಳೆ. ಅಕ್ಕ ಸಾವಿಲ್ಲದ ಗಂಡನನ್ನು ಹುಡುಕುವ ಆಕೆಯ ಹಂಬಲ ಪುರುಷ ನಿರ್ಮಿತ ಸಮಾಜದ ಚೌಕಟ್ಟನ್ನು ಮೀರುವುದಾಗಿದೆ. ಹೀಗಾಗಿ ಅಕ್ಕನ ಹುಟ್ಟಿನಲ್ಲಿ ಮಹಿಳೆಯ ಬಿಡುಗಡೆ ಕಾಣುವುದು ಮತ್ತು ಆಕೆಯ ನಿಲುವಿನಲ್ಲಿ ಸ್ತ್ರೀಪರ ಕಾಳಜಿ ಗುರುತಿಸುವುದು ಅಕ್ಕನನ್ನು ಮಹಿಳಾವಾದಿಯೆಂದು ಗುರುತಿಸಲು ಸಾಧ್ಯವಾಗಿರುವುದು.

ಆಯ್ದಕ್ಕಿ ಲಕ್ಕಮ್ಮ ಮುಕ್ತಾಯಕ್ಕ ಕದಿರ ರೆಮ್ಮವ್ವೆ, ಸೂಳೆ ಸಂಕವ್ವೆ ಗೊಗ್ಗೆವ್ವೆ ಮುಂತಾದವರ ವಚನಗಳು ಬೆಂಕಿಯ ಉಂಡೆಯಂತೆ ಪ್ರಖರಗೊಂಡಿವೆ.

ಅಕ್ಕಮಹಾದೇವಿ ನಂತರ ಕನ್ನಡದಲಿಟ್ಟ ಹೆಸರಿಸಬೇಕಾದ ಮತ್ತೊಬ್ಬ ಕವಯಿತ್ರಿ ಸಂಚಿಹೊನ್ನಮ್ಮ. ಅವಳ 'ಹದಿಬದೆಯ ಧರ್ಮ' ದಾಂಪತ್ಯ ಜೀವನವನ್ನು, ಹೆಣ್ಣಿನ ಹೊಣೆಗಾರಿಕೆಯನ್ನು, ಸ್ತ್ರೀ ಸ್ಥಾನಮಾನವನ್ನು ಅರ್ಥಪೂರ್ಣವಾಗಿ ಕಟ್ಟಿಕೊಡುವ ಗಮನಾರ್ಹ ಕೃತಿ. ಸಮಾಜದಲ್ಲಿ ಹೆಣ್ಣಿನ ಬಗ್ಗೆ ಇದ್ದ ತಪ್ಪು ಕಲ್ಪನೆಯನ್ನು ಹೋಗಲಾಡಿಸಿ ಆಕೆಗೆ ಗೌರವಯುತ ಮರ್ಯಾದೆಯನ್ನು ದೊರಕಿಸುವ ಯತ್ನ ಸಂಚಿ ಹೊನ್ನಮ್ಮನದು. ಮಹಿಳೆಯನ್ನು ಶೋಷಿಸುತ್ತಲೇ ಬಂದಿರುವ ಪುರುಷ ವರ್ಗದ ದೌರ್ಜನ್ಯ ನಮ್ಮ ಸಾಂಸ್ಕೃತಿಕ ಅಮಾನವೀಯ ಕೃತ್ಯವೆಂದೇ ಹೇಳಬೇಕು.

ಹೆಣ್ಣಿನ ವಿವಿಧ ಮುಖಗಳನ್ನು ಆದಿ ಹೆಣ್ಣುಗಳಿಂದ ದೇಶದ ಸಾಂಸ್ಕೃತಿಕ ಚರಿತೆ ಮುಂದೆ ಇದೇ ಹೆಣ್ಣನ್ನು ನಾಲ್ಕು ಗೋಡೆಯ ಮಧ್ಯೆ ಬಂಧಿಸಿದ್ದು, ವಿಪರ್ಯಾಸ. ಈ ಪುರುಷ ಪ್ರಧಾನ ಸಮಾಜ ಗಂಡಿಗೆ ಯಾವುದಾದರೂ ವಿಧಿ ವಿಧಾನಗಳನ್ನು ಹೇಳಿಲ್ಲ ಎನ್ನುವುದು ವಿಪರ್ಯಾಸವೇ ಸರಿ. ಅಕ್ಷರ ಕಲಿಕೆಯಿಂದ ದೂರವಿಸಿ ಅಡುಗೆ ಮನೆ ಹಾಗೂ ಗಂಡಿನ ಲೈಂಗಿಕ ತೃಷೆಯನ್ನು ತೀರಿಸಲು ಮಕ್ಕಳನ್ನು ಹೆತ್ತು ಪೋಷಿಸಲು ಅವಳ ಬದುಕನ್ನು ಸಂಕುಚಿತಗೊಳಿಸಲಾಯಿತು.

ಬ್ರಾಹ್ಮಣ ಮತ್ತು ಉಪನಿಷತ್ತುಗಳಿಂದ ವರ್ಣಾಶ್ರಮ ರೂಪುಗೊಂಡು ಬ್ರಾಹ್ಮಣರು ತಮ್ಮ ಹೊಟ್ಟೆ, ಬಟ್ಟೆಗಾಗಿ, ವರ್ಗ, ತಾರತಮ್ಯ ರೂಪಿಸಿಕೊಂಡು ಸ್ತ್ರೀಯರನ್ನು ಕೀಳಾಗಿ ಕಾಣುವ ಪ್ರವೃತ್ತಿ ಬೆಳೆಯಿತು. ಆದರೆ ಈ ತಾರತಮ್ಯ ಮೇಲ್ವರ್ಗದಲ್ಲಿ ಹೆಚ್ಚಿಗೆ ಇದ್ದಂತೆ ಕಂಡು ಬರುತ್ತದೆ.

ವೈದಿಕ ವ್ಯವಸ್ಥೆ ಹೆಣ್ಣನ್ನು ಅಡುಗೆ ಮನೆಯಲ್ಲಿಯೇ ಉಳಿಸಿ, ಕೊಳೆತು ನಾರುವಂತೆ, ಶ್ರೀಮಂತರ ಭೋಗದ ವಸ್ತುವಾಗಿ, ತನ್ನ ನೋವನ್ನು ತಾನೇ ನುಂಗಿ ಬದುಕುವಂತೆ ಮಾಡಿತ್ತು. ಮನುಸ್ಮೃತಿ ಹೆಣ್ಣು ಅಶುಭಳೆಂದು ಸ್ವಾತಂತ್ರ್ಯಕ್ಕೆ ಅರ್ಹಳಲ್ಲವೆಂದು ಆಕೆಗೆ ಪತಿ ಸೇವೆಯ ಮೂಲಕವೇ ಸ್ವರ್ಗ ಪ್ರಾಪ್ತಿಯೆಂದು ಹೇಳಿ ಅವಳನ್ನು ಅಧಿಕಾರ ವಂಚಿತಳನ್ನಾಗಿ ಮಾಡಿತ್ತು. ನಮ್ಮ ಸಂಸ್ಕೃತಿ, ಸಮಾಜವೂ ಕೂಡಾ ಹೆಣ್ಣಿನ ಬಗ್ಗೆ ಉದಾರ ನಿಲುವು ತೋರಿದಂತೆ ಎಲ್ಲೂ ಕಂಡು

ಬರುವುದಿಲ್ಲ. ಇಂತಹ ಸಂದರ್ಭದಲ್ಲಿ ಮೊಟ್ಟ ಮೊದಲ ಬಾರಿಗೆ ಸಾಹಿತ್ಯಕವಾಗಿ, ಸಾಮಾಜಿಕವಾಗಿ ಸಮಾಜದ ವಿರುದ್ಧ ದನಿ ಮೂಡಿಸಿದ್ದು, ಪ್ರತಿಭಟಿಸಿದ್ದು, 12ನೇ ಶತಮಾನದ ಅಕ್ಕ ಮಹಾದೇವಿ.

ಸ್ವರೂಪ

ಸ್ತ್ರೀ ಸ್ವಾತಂತ್ರ್ಯಕ್ಕೆ ಯೋಗ್ಯಳಲ್ಲ ಎಂಬುದನ್ನು ಸಾರುತ್ತಾ ಬಂದಿರುವ ಹಿಂದೂ ಧರ್ಮಕ್ಕೆ ಪ್ರತಿರೋಧ ಒಡ್ಡುತ್ತಾ ಬಂದ ಬೇರೆ ಧರ್ಮಗಳು ಮಹಿಳೆಗೆ ಸಂಪೂರ್ಣವಾಗಿ ಸ್ವಾತಂತ್ರ್ಯ ಕಲ್ಪಿಸುವ ಪ್ರಯತ್ನ ಮಾಡಿರಲಿಲ್ಲ ಯಜಮಾನ ಸಂಸ್ಕೃತಿಯ ವಿರುದ್ಧ ಮೊಟ್ಟ ಮೊದಲು ಪ್ರತಿಭಟಿಸಿದ ಶ್ರೇಯಸ್ಸು ವಚನಕಾರ್ತಿಯರಿಗೆ ಸಲ್ಲುತ್ತದೆ.

" ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು"

ಇಂದು ಈ ದೇಶದಲ್ಲಿ ಮಹಿಳೆಯರ ಮೇಲೆ ಎಂತೆಂತಹ ದೌರ್ಜನ್ಯಗಳು ನಡೆಯುತ್ತಿವೆ ಎಂಬುದರ ಕುರಿತು ವಿವರಿಸಬೇಕಾಗಿಲ್ಲ. ದೂರದರ್ಶನದ ಕೆಲವು ಚಾನೆಲ್‌ಗಳು ಇಂತಹ ಸತ್ಯ ಘಟನೆಗಳನ್ನೆತ್ತಿಕೊಂಡು ಕಿರುಚಿತ್ರದಂತೆ ಪ್ರಸಾರ ಮಾಡುತ್ತಿವೆ ಉತ್ತರ ಭಾರತದ ವಿದ್ಯಾವಂತ, ಶ್ರೀಮಂತ ಮಹಿಳೆಯರಲ್ಲಿ ಕೂಡಾ ಎಂತೆಂತಹಾ ಮೌಢ್ಯಗಳಿವೆ ಎಂಬುದು ಕೂಡಾ ಈ ಪ್ರಸಾರದಲ್ಲಿ ಕಾಣಿಸಿಕೊಂಡಿವೆ. ಮುಸ್ಲಿಂ ಮಹಿಳೆಯರ ನಿರಕ್ಷರತೆ ಮತ್ತು ಬಡತನ ಕೂಡಾ ಅವರನ್ನು ಎಂತೆಂತಹಾ ದೌರ್ಜನ್ಯಗಳಿಗೆ ಈಡು ಮಾಡುತ್ತವೆ ಎಂಬುದರ ಕೆಲವು ಚಿತ್ರಣಗಳೂ ಇಲ್ಲಿವೆ. ಇಂತಹ ಘಟನೆಗಳನ್ನೆತ್ತಿಕೊಂಡು ನಾನು ಈ ಕಥೆಗಳನ್ನು ರಚಿಸಿದ್ದೇನೆ. ಇವೆಲ್ಲವೂ ಸತ್ಯವಾದ ನಡೆದ ಘಟನೆಗಳಾಗಿವೆ.

ಇಂದು ಮಾರುಕಟ್ಟೆಗಳಲ್ಲಿ ಹೆಣ್ಣು ಬಹಳ ಬೆಲೆ ಬಾಳುವ ಸರಕಾಗಿದ್ದಾಳೆ ಗಂಡಂದಿರೇ ಹೆಂಡತಿಯರನ್ನು ಮಾರಾಟ ಮಾಡುವುದೂ ಇದೆ. ಅತ್ತೆಯಂದಿರು ಸೊಸೆಯಂದಿರ ಮೇಲೆ, ಸೊಸೆಯಂದಿರು ಅತ್ತೆಯಂದಿರ ಮೇಲೆ ಎಂತೆಂತಹ ದೌರ್ಜನ್ಯಗಳನ್ನೆಸಗುತ್ತಾರೆ ಎಂಬ ಸತ್ಯ

ಚಿತ್ರಣಗಳು ಈ ಚಾನೆಲ್‌ಗಳಲ್ಲಿ ಧಾರಾವಾಹಿಗಳ ರೀತಿ ಪ್ರಸಾರವಾಗುತ್ತವೆ. ಹೆಣ್ಣು ಭ್ರೂಣ ಹತ್ಯೆಗೆ ಕೆಲವು ಅತ್ತೆಯಂದಿರು ಸೊಸೆಯರನ್ನು ಹಿಂಸಿಸುವುದನ್ನು ನೋಡುವಾಗ ಸ್ತ್ರೀ ಸ್ವಾತಂತ್ರ್ಯ ಎಂಬ ಶಬ್ಧಕ್ಕೆ ಏನಾದರೂ ಅರ್ಥವಿದೆಯೇ ಎಂದೆನ್ನಿಸುತ್ತದೆ. ಮಕ್ಕಳ ಕಳ್ಳತನ, ಹೆಣ್ಣು ಮಕ್ಕಳ ಕಳ್ಳತನಗಳೆಲ್ಲವೂ ಅವ್ಯಾಹತವಾಗಿ ನಡೆಯುತ್ತಿವೆ.

ಪ್ರತಿದಿನ ಹಗಲು ಮತ್ತು ರಾತ್ರಿ ಹತ್ತು ಗಂಟೆಗೆ 'ಸಾವಧಾನ ಇಂಡಿಯಾ' ಎಂಬ ಒಂದು ಚಾನಲ್ ಈ ಬಗೆಯ ದೌರ್ಜನ್ಯದ ಚಿತ್ರಣಗಳನ್ನು ಪ್ರಸಾರ ಮಾಡುತ್ತವೆ. ಇಂತಹ ಕಿರುಚಿತ್ರಗಳನ್ನು ತಯಾರಿಸುವ ದೊಡ್ಡ ಟೀಂ ಇದೆ. ಅದರ ಸಂಪಾದಕರು ಒಮ್ಮೆ ಬಹಳ ಬೇಸರದಿಂದ ಹೀಗಂದಿದ್ದರು, ನಾವು ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲೆ ಹೀಗೆ ದೌರ್ಜನ್ಯವೆಸಗಿ ಹೆಣ್ಣುಗಳನ್ನು ನಾಶ ಮಾಡಿದರೆ ಹೇಗೆ? ನಮಗೆ ತಾಯಾಗಿ, ಸಹೋದರಿಯಾಗಿ ಮಗಳಾಗಿ ಹೆನ್ಣು ಮಗಳು ನಮ್ಮ ಬದುಕಿನ ಅಂಗವಾಗಿರುವವರು. ಅವರನ್ನು ನಾಶ ಮಾಡಿ ನಾವು ಎಂತಹ ಸಂತೋಷ ಪಡೆಯುತ್ತೇವೆ? ಅವರಿಲ್ಲದೆ ನಾವು ಬದುಕಲು ಸಾಧ್ಯವಾ? ಎಂದು ಬಹಳ ಕಳಕಳಿಯಿಂದ ನುಡಿದಿದ್ದರು. ಹೆಣ್ಣು ಗಂಡಿನ ಸಮಸ್ಯೆಗಳು ಮಾತ್ರವಲ್ಲ ಎಲ್ಲ ರೀತಿಯ ದೌರ್ಜನ್ಯ ಅನ್ಯಾಯ, ಮೋಸ, ವಂಚನೆ ಎಲ್ಲವನ್ನು ಈ ಚಾನೆಲ್ ಕಿರುಚಿತ್ರದ ರೂಪದಲ್ಲಿ ಪ್ರಸಾರ ಮಾಡುತ್ತವೆ.

ಈ ದೇಶದಲ್ಲಿ ಮುಸ್ಲಿಂ ಮಹಿಳೆಯರು ಎಂತಹ ಹೀನ ಸ್ಥಿತಿಯಲ್ಲಿದ್ದಾರೆ ಎಂಬುದರ ಕೆಲವು ಉದಾಹರಣೆಗಳು ನನಗೆ ಈ.ಟಿ.ವಿ. ಚಾನೆಲ್‌ಗಳ ಕಾರ್ಯಕ್ರಮಗಳಿಂದ ದೊರೆತಿವೆ. ಬಡತನ ಮಾತ್ರವಲ್ಲ ಅವರ ಅನಕ್ಷರತೆಯೂ ಅವರ ಈ ದುರ್ಗತಿಗೆ ಕಾರಣಾಗಿದೆ. ಮುಸ್ಲಿಂ ವಿರೋಧಿ ರಾಜಕಾರಣಿಗಳು ತಮ್ಮ ಭಾಷಣಗಳಲ್ಲಿ 'ರಾಜಕಾರಣಿಗಳು ಮುಸ್ಲಿಮರ ತುಷ್ಟೀಕರಣ ಮಾಡುತ್ತಾರೆ" ಎಂದು ಹೇಳುತ್ತಲೇ ಇರುತ್ತಾರೆ. ಆದರೆ ಯಾರದೇ ತುಷ್ಟೀಕರಣದಿಂದಲೂ ಈ ಮಹಿಳೆಯರ ಬದುಕಿನಲ್ಲಿ ಏನೂ ವ್ಯತ್ಯಾಸವಾಗಿಲ್ಲ ಎಂಬುದನ್ನು ನಾನು ಹೇಳುತ್ತಿದ್ದೇನೆ. ಮುಸ್ಲಿಂ ಮಹಿಳೆಯರ ಬದುಕು ಮಾತ್ರವಲ್ಲ ಈ ದೇಶದ ಎಲ್ಲ ಮಹಿಳೆಯರೂ ಇಂದು ಎಲ್ಲ ರೀತಿಯ ಬಡತನ, ದೌರ್ಜನ್ಯವನ್ನುಭವಿಸುತ್ತಲೇ ಇದ್ದಾರೆ. ಪುರುಷ ಪ್ರಧಾನ ವ್ಯವಸ್ಥೆಯ ಅಡಿಯಲ್ಲಿ ಯಾವ ಮಹಿಳೆಯೂ ಸುಖವಾಗಿ ಬದುಕಲು ಈ ದೇಶದಲ್ಲಿ ಸಾಧ್ಯವಾಗುತ್ತಿಲ್ಲ.

ವ್ಯಾಪ್ತಿ

ಈ ಅಧ್ಯಯನದ ವ್ಯಾಪ್ತಿಯಲ್ಲಿ ಮುಖ್ಯವಾಗಿ 7 ಅಧ್ಯಾಯಗಳನ್ನು ಮಾಡಿಕೊಂಡಿದ್ದು ನಮಗಿರುವ ಪರಿಮಿತ ಕಾಲಾವಧಿಯೊಳಗೆ ಕಥೆಗಾರ್ತಿಯರಾದ ಡಾ॥ ಬಿ.ಟಿ. ಲಲಿತಾನಾಯಕ್, ಡಾ॥ ವಸುಂಧರಾ ಭೂಪತಿ ಶಾರದಾ.ವಿ.ಮೂರ್ತಿಯವರ ಸಾಹಿತ್ಯಕ್ಕೆ ಹೊರತಾಗಿ ನನ್ನ ಅಧ್ಯಯನಕ್ಕೆ ಸಂಬಂಧಿಸಿದಂತೆ ಅನ್ವಯಿಸುವ ಮಹಿಳಾ ಸಾಹಿತ್ಯಗಳನ್ನು ಆಯ್ಕೆ ಮಾಡಿಕೊಂಡು ನನ್ನ ಅಧ್ಯಯನದ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದ್ದೇನೆ.

ಡಾ॥ ಲಲಿತಾ ನಾಯಕ್, ವಸುಂಧರಾ ಭೂಪತಿ ಮತ್ತು ಶಾರದಾ.ವಿ.ಮೂರ್ತಿಯವರ ಒಟ್ಟಾರೆ ಕತೆಗಳಲ್ಲಿ ಮಹಿಳೆಗೆ ಆಗಿರುವ ಅನ್ಯಾಯವನ್ನು ಶೋಷಣೆಯನ್ನು ಕ್ರೌರ್ಯವನ್ನು ಹೇಗೆ ಪ್ರತಿಬಿಂಬಿಸಿದ್ದಾರೆ ಮತ್ತು ಆ ಮೂಲಕ ತಮ್ಮ ನಿಲುವುಗಳನ್ನು ಹೇಗೆ ವ್ಯಕ್ತಪಡಿಸಿದ್ದಾರೆ ಹಾಗೂ ಕೌಟುಂಬಿಕವಾಗಿ ಸಾಂಪ್ರದಾಯಕವಾಗಿ, ಲಿಂಗಭೇದ, ಸ್ವಾತಂತ್ರ್ಯ ಈ ಎಲ್ಲಾ ದೃಷ್ಟಿಕೋನಗಳನ್ನು ಇಟ್ಟುಕೊಂಡು ಸೃಜನಾತ್ಮಕ ಕೃತಿಗಳನ್ನು ಆಧಾರವಾಗಿ ಇಟ್ಟುಕೊಂಡು ಡಾ॥ ಬಿ.ಟಿ. ಲಲಿತಾ ನಾಯಕ್, ಡಾ॥ ವಸುಂಧರಾ ಭೂಪತಿ ಮತ್ತು ಶಾರದಾ.ವಿ.ಮೂರ್ತಿಯವರ ಸಾಹಿತ್ಯದಲ್ಲಿ ಶೋಷಿತ ಸಮುದಾಯದ ಸಂವೇದನೆಗಳನ್ನು ಒಂದು ವಿಶ್ಲೇಷಣಾತ್ಮಕವಾಗಿ ಅಧ್ಯಯನಕ್ಕೆ ಒಳಪಡಿಸಿದ್ದೇನೆ.

ಅಧ್ಯಾಯ – 2

ಮಹಿಳಾ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಮತ್ತು ಸ್ತ್ರೀವಾದಿ ಚಿಂತಕಿಯರು

ಅಧ್ಯಾಯ – 2

ಮಹಿಳಾ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಮತ್ತು ಸ್ತ್ರೀವಾದಿ ಚಿಂತಕಿಯರು

ಸ್ತ್ರೀ ಸಂವೇದನೆ ಎಂಬ ಪದದ ಅರ್ಥ ಶರೀರದಷ್ಟೆ ಅವಳ ಭಾವನೆಗಳು ಸೂಕ್ಷ್ಮ ಆರ್ಹತೆ ಉಳ್ಳದ್ದು. ಸಹಿಷ್ಣುತೆ, ತಾಳ್ಮೆ ವಿನಯ, ದುಡಿತ, ಉಪಕಾರ, ಸೌಜನ್ಯ ಎಂಬ ನೊಗ ಕಟ್ಟಲಾಗಿದೆ. ಪಾರಂಪರಿಕ ಬೋಧನೆಯಲ್ಲದೆ ಆತ್ಮಗತವಾಗಿಯೇ ಸೇರಿ ಹೋಗಿದೆ. ಅವಳ ಭಾವನೆಗಳು ಅಸ್ಪಷ್ಟವಾಗಿ ಉಳಿಯುತ್ತದೆ. ಅತಿ ಸ್ಪಷ್ಟತೆ ಅವಳ ಸ್ವಭಾವಕ್ಕೆ ವಿರುದ್ಧವಾದುದು.

ಸ್ತ್ರೀ ಪ್ರಾಬಲ್ಯತೆ ಎಂಬ ಪದ ಅದರ ಅರ್ಥದಷ್ಟೆ ವಿಚಿತ್ರವಾದ ಮರೀಚಿಕೆ ಅದರ ಸನಿಹಕ್ಕೆ ಹೆಜ್ಜೆ ಇಟ್ಟಂತೆಲ್ಲಾ ಅದು ಹಿಂದಕ್ಕೆ ಸರಿಯುತ್ತದೆ. ಆದರೂ ಆ ದಯಾಹಚ್ಚಿದ ಆಶಾವಾದದಿಂದ ಮಹಿಳೆಯರಾದ ನಾವು ಪಡೆಯಲು ಓಡುತ್ತಲೇ ಇದ್ದೇವೆ.

ಸ್ತ್ರೀ ಸಂವೇದನೆಯು ಪುರುಷ ಸಂವೇದನೆಗಿಂತ ಭಿನ್ನ, ಅದು ಸಹಜ ಕೂಡ. ಇದಕ್ಕೆ ಸಾಂಸ್ಕೃತಿಕ ಕಾರಣಗಳಿವೆ. ಸಮಾನತೆಯ ಆಧಾರದ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣು – ಗಂಡಿನ ದೃಷ್ಟಿಕೋನ ಮತ್ತು ಅನುಭವಗಳ ನಡುವೆ ವಿಪರೀತ ಅಂತರವಿರುವುದಿಲ್ಲ ಎಂಬುದು ಸ್ತ್ರೀವಾದದ ನಿಲವು. ಹೆಣ್ಣುತನ – ಗಂಡುತನ ಕೇವಲ ವ್ಯತ್ಯಾಸಗಳನ್ನು ಸೂಚಿಸಲು ಮೀಸಲಾಗದೇ ಗಂಡು – ಹೆಣ್ಣಿನ ನಡುವೆ ವಿಭಜನೆಯ ರೇಖೆ ಹಾಕಿ ಅಸಮಾನತೆಯನ್ನು ಹುಟ್ಟು ಹಾಕಿ, ಮೇಲು, ಕೀಳುಗಳನ್ನು ಸೃಷ್ಟಿಸಿ ಒಂದು ವರ್ಗ ಮತ್ತೊಂದನ್ನು ಶೋಷಿಸಲು ದಾರಿಯಾಯಿತು. ಹಾಗೆಂದೇ ಒಂದು ಪರಿಸರದಲ್ಲಿ ಬೆಳೆದ ಹೆಣ್ಣು ಗಂಡಿನ ಅನುಭವದ ನಡುವೆ ಅಗಾಧ ವ್ಯತ್ಯಾಸವಿರುತ್ತದೆ. ಹೆಣ್ಣನ್ನು ಅಬಲೆಯಾಗಿಸುವ, ಮನೆಗೆಲಸಕ್ಕೆ ಹಚ್ಚುವ, ತಗ್ಗಿ – ಬಗ್ಗಿ ನಡೆಯುವ ವಿಧೇಯತೆಯನ್ನು ಕಲಿಸುವ, ವಿವಾಹಕ್ಕೆಂದೇ ತಯಾರಿಸುವ ಪರಿಯಲ್ಲಿ ಬಾಲ್ಯದಿಂದಲೇ ಆರಂಭವಾಗುವ ಗೃಹಿಣೀ ಪಾತ್ರದ ತರಬೇತಿ ಅವಳೊಡನೆ ಹುಟ್ಟಿ ಬೆಳೆದ ಗಂಡು ಮಗುವಿಗೆ ನೀಡುವ ಪ್ರೋತ್ಸಾಹ ಅವನ ಭವಿಷ್ಯವನ್ನು ರೂಪಿಸುವ ಪರಿಯೇ ಬೇರೆ ಇರುತ್ತದೆ. ಈ ಮೂಲ ಕಾರಣದಿಂದ ಸ್ತ್ರೀಯರ ಅನುಭವ, ಸಂವೇದನೆ ಬೇರೆಯಾಗುತ್ತದೆ. ಸ್ತ್ರೀವಾದಿಗಳೆಂದು ಪುರುಷ ಕೇಂದ್ರಿತ ಮಾದರಿಗಳನ್ನು ಉರುಳಿಸುವ ಮೂಲಕ ಸ್ತ್ರೀ ದೃಷ್ಟಿಕೋನ, ಸ್ತ್ರೀ ಅನುಭವಗಳನ್ನು ತೆರೆದಿಡುವ ಮೂಲಕ ಸ್ತ್ರೀಯನ್ನು ಮೂಕವಾಗಿಸಿದ ವ್ಯವಸ್ಥೆಯನ್ನು ಬದಲಿಸ ಹೊರಟಿದ್ದಾರೆ.

ವೇದ ಕಾಲದಲ್ಲಿದ್ದ ಸ್ತ್ರೀ ಸ್ವಾತಂತ್ರ್ಯ ಸ್ಮೃತಿ ಕಾಲಕ್ಕೆ ಬರುವುದರೊಳಗಾಗಿ ಮಸುಕಾಗಿ ಹೋಯಿತು. ಈ ಹಿನ್ನೆಲೆಯಲ್ಲಿ ಸುಪುತ್ರೋ ಕುಲದೀಪಕ ಎಂಬ ಭಾವನೆ ಶೋಷಿತ ಹೆಣ್ಣು ಮಗುವಿನ ವಿಷಯದಲ್ಲಿ ಮೌನ ತಾಳಿದೆ ಹೀಗಿದ್ದು ಚಂಡಯ್ಯ ಮಲ್ಲದೇವಿಯರು ತಮ್ಮ ಮಗಳು ಸೋಮವ್ವೆಯನ್ನು "ಸುಪುತ್ರಿ ಕುಲದೀಪಿಕೆ" ಎಂದು ಕರೆದದ್ದು ಹೆಣ್ಣಿಗೆ ದೊರೆತ ಗೌರವವನ್ನು ಸೂಚಿಸುವ ಗಮನಾರ್ಹ ಸಂಗತಿ ಎನಿಸಿದೆ.

ನಿಜವಾದ ಶ್ರಮ ಜೀವನ ಅನಾದಿಕಾಲದಿಂದಲೂ ಹೆಣ್ಣಿನದೇ ಆದರೂ ಹೆಣ್ಣಿನ ಪ್ರಜ್ಞೆಯನ್ನು ಸೀಮಿತ ಹೊಸ್ತಿಲೊಳಗೆ ಕಟ್ಟಿಹಾಕಿ ಅವಳ ಬದುಕಿನ ವಿಕಸನವನ್ನು ಹೊಸಕಿ ಹಾಕುವ ತಂತ್ರವು ಶಾಸನಗಳಲ್ಲಿ ಪ್ರಧಾನವಾಗಿದೆ. ಹೀಗಾಗಿ ಕೆಲವರನ್ನು ಬಿಟ್ಟು ಉಳಿಸಿ ಸಾಮಾನ್ಯ ಸ್ತ್ರೀ ಸಮುದಾಯವನ್ನು ಆಡಳಿತ, ಉದ್ಯೋಗ, ಶಿಕ್ಷಣ, ನೀತಿ, ಕಾನೂನು ಮುಂತಾದ ಪುರುಷ ವ್ಯವಸ್ಥೆಯಲ್ಲಿ ತುಳಿಯುತ್ತಲೆ ಬಂದಿದೆ.

ಕುಟುಂಬ ಎಂಬ ಪುಟ್ಟ ಅಂಗ ಸಂಸ್ಥೆಯಿಂದ ಹಿಡಿದು ಸಮಾಜದ ಎಲ್ಲಾ ಹಂತದಲ್ಲೂ ಸ್ತ್ರೀ ಶೋಷಣೆ ನಿರಂತರವಾಗಿದೆ. ಅವಳನ್ನು ಶರಣಾಗತ ಸ್ಥಿತಿಯಲ್ಲಿಡಲು ಅತ್ಯಾಚಾರ ಎಂಬ ಮಹಾಸ್ತ್ರ ಪ್ರಯೋಗವಾಗುತ್ತಿದೆ. ರಕ್ಷಕ ವ್ಯವಸ್ಥೆಯೆ ಶೋಷಣಾ ವ್ಯವಸ್ಥೆಯಾಗಿರುವುದು ವಿಪರ್ಯಾಸ ಇವೆಲ್ಲದರ ನಿರ್ಬಂಧ ಹೇರಲಾಗಿದೆ. ಅದನ್ನು ಭಾರತೀಯ ಪರಂಪರೆ, ಸಾಂಸ್ಕೃತಿಕ ಜವಾಬ್ದಾರಿಯ ನೈತಿಕ ಪ್ರಜ್ಞೆ ಎಂದು ಪ್ರತಿಬಿಂಬಿಸಲಾಗಿದೆ. ಆತ್ಮ ಪ್ರಜ್ಞೆಯನ್ನು ಮೀರಿ ಅಧೀನತೆಯನ್ನು ಪ್ರತ್ಯಕ್ಷದಲ್ಲಿ ಒಪ್ಪಿಕೊಂಡಿದ್ದಾಳೆ.

ಪಿತೃ ಪ್ರಧಾನ ಕುಟುಂಬ ಪದ್ಧತಿಯಲ್ಲಿಯೂ ಸ್ತ್ರೀ ಕುಟುಂಬದ ಹೊಣೆಗಾರಿಕೆಯೊಂದಿಗೆ ಸಮಾಜದ ಕಾರ್ಯಕಲಾಪಗಳಲ್ಲಿ ಭಾಗಿಯಾಗುತ್ತಿದ್ದುದ್ದು, ಒಂದು ಹೆಮ್ಮೆಯ ವಿಷಯವೇ ಸರಿ ದನಗರ ಕಂಚಿಕಚ್ಚಿ, ಮಣಿಗಾರ ಮಾದವ್ವ, ಹಾಡುವ ಕಲ್ಲವ್ವ ಪಾತ್ರದ ಸಿರಿಯವ್ವ ಎಣ್ಣೆಯನ್ನು ಮಾಡುವ ಕುಂಚಡ ಗಿತ್ತಿಯರು ಎಂಜಲು ತೆಗೆವ ಶೂದ್ರತಿಯರು, ಮುಂತಾದವರು ಶಾಸನಗಳಿಂದ ನಮಗೆ ದೊರೆಯುತ್ತಾರೆ.

ತದನಂತರದಲ್ಲಿ ವಚನಕಾರ್ತಿಯರು ಬರುವವರೆಗೆ ಕನ್ನಡದಲ್ಲಿ ಯಾವ ಸ್ತ್ರೀಯು ಬರೆದಿರುವಂತೆ ಕಾಣುವುದಿಲ್ಲ. 12ನೇ ಶತಮಾನಕ್ಕೆ ಸೇರಿದ ಕವಿ ನಾಗಚಂದ್ರನೊಡನೆ ಸಂವಾದ ಮಾಡಿದಳು ಎಂಬುದಾಗಿ 'ಕಂತಿ' ಎಂಬ ಕವಯಿತ್ರಿಯ ಹೆಸರು ಕೇಳಿ ಬರುತ್ತದೆ. 7ನೇ ಶತಮಾನಕ್ಕೆ ಸೇರಿದ ಎರಡನೇ ಪುಲಿಕೇಶಿಯ ಸೊಸೆ ವಿಜಯಾ ಮಹಾದೇವಿಯು ಸಂಸ್ಕೃತದ ಕಾವ್ಯ ರಚನೆ ಮಾಡಿ ತನ್ನನ್ನು ಕಪ್ಪು ಸರಸ್ವತಿಯೆಂದು ಕರೆದುಕೊಂಡಿದ್ದಾಳೆ ಎಂಬುದಾಗಿ ಕವಿ ರಾಜಶೇಖರ ಹೇಳುತ್ತಾನೆ.

ಮಧ್ಯಕಾಲೀನ ಸಂದರ್ಭಕ್ಕೆ ಆಗ ರಚಿತವಾದ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಗೆ ಅವಳ ಸ್ಥಾನಮಾನಕ್ಕೆ ಹೆಚ್ಚು ಮಾನ್ಯತೆ ದೊರೆಯಿತೆಂಬುದನ್ನು ನಾವು ಮನಗಾಣಬಹುದಾಗಿದೆ. ಮಾನವ ಶಾಸ್ತ್ರದಲ್ಲಿ ಯಾವ ಸಮಾಜದಲ್ಲಿ ಸ್ತ್ರೀಯರಿಗೆ ಉನ್ನತ ಸ್ಥಾನವಿದೆಯೋ ಆ ಸಮಾಜದ ಸಂಸ್ಕೃತಿ ಉನ್ನತ ಮಟ್ಟದ್ದಾಗಿರುತ್ತದೆ.

ತದನಂತರ ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಬಂದ ಶ್ಯಾಮಲಾದೇವಿ, ಕೊಡಗಿನ ಗೌರಮ್ಮ, ಸರಸ್ವತಿಬಾಯಿ ರಾಜವಾಡಯವರು ಸ್ತ್ರೀಯರ ಕೌಟುಂಬಿಕ ಸ್ಥಿತಿಯನ್ನು ಕುರಿತು ಸೂಕ್ಷ್ಮ ಸಂವೇದನೆಗಳೊಂದಿಗೆ ಬರೆಯುತ್ತಲೇ ಸಮಕಾಲೀನ ಸಾಮಾಜಿಕ ಸಂದರ್ಭಗಳ ಸಾಂಸ್ಕೃತಿಕ ಅಂಶಗಳನ್ನು ಚರ್ಚೆಗೆ ಗುರಿಪಡಿಸುವಂತಹ ಯತ್ನಗಳನ್ನು ವಿಶೇಷವಾಗಿ ಕಾಣಬಹುದಾಗಿದೆ.

ಪ್ರಗತಿಶೀಲ ಸಾಹಿತ್ಯಚಳುವಳಿಯ ಒಂದು ಭಾಗವಾಗಿ ಗುರುತಿಸಲ್ಪಡದಿದ್ದರೂ ಆ ಅವಧಿಯಲ್ಲಿ ಬರೆಯ ತೊಡಗಿದ ಹಲವಾರು ಲೇಖಕಿಯರಲ್ಲಿ ತೀವ್ರ ರೀತಿಯಲ್ಲಿ ತಮ್ಮ ಸಾಮಾಜಿಕ ಅರಿವನ್ನು ಪ್ರಕಟಿಸಿದ್ದಾರೆ. ಎಚ್.ವಿ.ಸಾವಿತ್ರಮ್ಮ, ತ್ರಿವೇಣಿ ಮತ್ತು ಡಾ. ಅನುಪಮಾ ನಿರಂಜನರ ಬರಹಗಳು ಸ್ತ್ರೀ ಪುರುಷ ಸಂಬಂಧಗಳು ಪುರುಷ ಪ್ರಧಾನ ವ್ಯವಸ್ಥೆಯೊಳಗೆ ತಳೆಯುವ ವಿಷಮ ಸ್ವರೂಪಗಳತ್ತ ಹೆಚ್ಚಿನ ಜಾಗೃತಿಯನ್ನು ಪ್ರಕಟಿಸುತ್ತವೆ.

ಶೋಷಣೆಯ ಸಮಗ್ರ ಪರಿಜ್ಞಾನವನ್ನು ಹೊಂದುವುದು ಅಂದರೆ ಸ್ತ್ರೀಯರು ಪುರುಷಶಾಹಿಯ ವಿರುದ್ಧ ಹೋರಾಟ ಮಾಡುವುದರ ಅವಶ್ಯಕತೆಯನ್ನು ಮನದಟ್ಟು ಮಾಡಿಕೊಡುವುದಷ್ಟೇ ಅಲ್ಲ ಸ್ತ್ರೀಯರ ಶೋಷಣೆಯನ್ನು ಪುರುಷರಿಂದ ಮಾಡಿಸುತ್ತಾ ಬಂದಿರುವ

ಹಾಗೂ ಪುರುಷರನ್ನೂ ಇನ್ನೊಂದು ಶ್ರೇಣಿಯಲ್ಲಿ ಶೋಷಣೆಗೊಳಪಡಿಸುವ ವರ್ಗ ವ್ಯವಸ್ಥೆಯನ್ನು ಸ್ತ್ರೀಯರು ಪುರುಷರೂ ಜಂಟಿಯಾಗಿ ಹಾಗೂ ಸಾಮೂಹಿಕವಾಗಿ ಪ್ರಶ್ನಿಸುವಂತೆ ಕೊನೆಯಲ್ಲಿ ಕಿತ್ತೊಗೆಯುವಂತೆ ಸರಿಯಾದ ಮಾರ್ಗದರ್ಶನ ಮಾಡುವುದು.

ಅಕ್ಷರ ಕ್ರಾಂತಿ ವೈಚಾರಿಕ ಕ್ರಾಂತಿಗೆ ಆಹ್ವಾನ ನೀಡಿರುವ ವೈದೇಹಿಯವರ ಅಡುಗೆ ಮನೆ ಹುಡುಗಿ ಕವಿತೆಯಲ್ಲಿ ಪ್ರಸ್ತುತತೆಯಿಂದ ಬಿಡಿಸಿಕೊಂಡು ಯಾವುದೋ ಲೋಕಕ್ಕೆ ಮುನ್ನುಗ್ಗುವ ತವಕವಿದೆ. ಸ್ವಾತಂತ್ರ್ಯ ಸಿಗುವುದಾದರೆ ರಾವಣಲೋಕವಾದರೂ ಸಂತೃಪ್ತಗೊಂಡ ಹೆಣ್ಣಿನ ಮನಸ್ಸಿನ ಸಂವೇದನೆಗಳನ್ನು ಅಡುಗೆ ಕೋಣೆಗಳಲ್ಲಿ ಅದುಮಿಡಲಾಗಿತ್ತು. ಜನಪದ ಸಾಹಿತ್ಯದಲ್ಲಿ ಮನೆತನದ ಮತ್ತು ಸಂಬಂಧಗಳ ನಿಭಾಯಿಸುವಿಕೆ ಇದ್ದರೂ ಹೆಣ್ಣಾಗಿ ಹುಟ್ಟೋಣಾಕ್ಕಿಂತ ಮಣ್ಣಾಗಿ ಹುಟ್ಟುವ ತೀವ್ರ ಪ್ರತಿಭಟನೆ ಇದೆ. ಸೀತೆ ರಾವಣನೊಂದಿಗೆ, ಸಾವಿತ್ರಿ ಯಮನೊಂದಿಗೆ ದ್ರೌಪದಿ ದುಶ್ಯಾಸನನೊಂದಿಗೆ, ಶಕುಂತಲೆ ದಮಯಂತಿಯರು ಪರಿಸ್ಥಿತಿಯೊಂದಿಗೆ ಪುರಾಣ ಕಾಲದಿಂದಲೂ ಪ್ರತಿಭಟಿಸುತ್ತಲೇ ಇದ್ದಾರೆ. ಒಲ್ಲದ ಗಂಡನನ್ನು ಧಿಕ್ಕರಿಸಿದ ಮಹಾದೇವಿ, ಅಕ್ಕ, ಸಹಗಮನವನ್ನು ಒಪ್ಪಿಕೊಂಡ ವೀರಸೈನಿಕರ ಮಡದಿಯರು ಎರಡು ಮನಸ್ಥಿತಿಯ ಸ್ತ್ರೀಯರಲ್ಲೂ ಮೂಲವಾಗಿ ಅಡಗಿರುವುದು ಪ್ರತಿಭಟನೆಯೇ. ಆಧುನಿಕ ಸಮಾಜದಲ್ಲಿ ಶಿಕ್ಷಣ ಮೀಸಲಾತಿ ಪ್ರಾತಿನಿಧ್ಯ ಹೊರತಾಗಿಯೂ ಮಹಿಳಾ ಸುರಕ್ಷತೆ ಬಾಕಿ ಉಳಿದಿದೆ ಎಂದು ಸ್ತ್ರೀವಾದಿ ಅನುಪಮಾ ನುಡಿದಿದ್ದಾರೆ.

ಪ್ರಕಟಿಸುವ ಪತ್ರಿಕೆಗಳೇ ಕಂಪಿಸುವಷ್ಟು ಅತ್ಯಾಚಾರ ಈ ದಿನಗಳಲ್ಲಿ ನಡೆದಿದೆ. ಅದು ಕೇವಲ ಸುದ್ದಿಗಳಾಗಿ ಮರೆಯಾಗುತ್ತಿವೆ. ಇದೇ ನಾಗರೀಕ ಸಮಾಜದ ಮುಖವಾಡ ಸ್ತ್ರೀಯರಿಗೆ ವಸ್ತ್ರ ಸಂಹಿತೆ ಭೋಧಿಸುತ್ತಿದೆ. ನಗ್ನ ಚಿತ್ರಗಳಿಗೆ ಪಾರಿತೋಷಕ ನೀಡುತ್ತದೆ. ಪ್ರಚಾರ ಮಾಧ್ಯಮಗಳಲ್ಲಿ ಸ್ತ್ರೀಯರನ್ನು ಅಶ್ಲೀಲವಾಗಿ ಬಿಂಬಿಸಲಾಗುತ್ತದೆ. ಪುರುಷ ಸಮಾಜದ ಹುನ್ನಾರಗಳು ಹೆಣ್ಣಿನ ಜನ್ಮದ ಹಕ್ಕನ್ನೂ ಕಸಿಯುತ್ತಿವೆ. ಹೆಣ್ಣು ಭ್ರೂಣಗಳು ಭೂಮಿಗೆ ಬರುವುದರಲ್ಲೇ ಜೀವಹತ್ಯೆ ನಡೆದಿದೆ. ವಿಜ್ಞಾನ ನೈತಿಕ ತಾಟಸ್ಥ್ಯ ತಳೆದಿದೆ. ಕಾನೂನು ಮೂರ್ಖರ ಕೈಗೊಂಬೆಯಾಗಿದೆ.

ಧರ್ಮ, ಕಾನೂನು ಆಡಳಿತ, ಅರ್ಥವ್ಯವಸ್ಥೆ ಸಮಾಜದ ಎಲ್ಲಾ ಕ್ಷೇತ್ರಗಳನ್ನು ಹಿಡಿದಿರುವವನು ಪುರುಷ. ಕಾನೂನುಗಳಷ್ಟೆ ಅಲಿಖಿತ ನೀತಿ ಸಂಹಿತೆಗಳೂ ಸ್ತ್ರೀ ಶೋಷಣೆಗೆ ಮುಖ್ಯ ಕಾರಣವಾಗಿದೆ.

ಉದ್ಯೋಗಸ್ಥ ಮಹಿಳೆಯರಿಗೂ ಆರ್ಥಿಕ ಸ್ವಾತಂತ್ರ್ಯ ದಕ್ಕದಂತೆ ಪುರುಷ ಯಜಮಾನಿಕ ನಡೆಸಿದೆ. ಆದಿವಾಸಿ ಜನಾಂಗಗಳ ಹಟ್ಟಿಯಲ್ಲಿ ಹೆಣ್ಣು ಮಕ್ಕಳಿಗೆ ಅವೈಜ್ಞಾನಿಕ ಅಮಾನವೀಯ ಆರೋಗ್ಯಕರ ಮೈಲಿಗೆ ಸಂಪ್ರದಾಯವನ್ನು ಹಾಕಿಕೊಡಲಾಗಿದೆ. ನೈಸರ್ಗಿಕ ಕ್ರಿಯೆಗಳಿಗೆ ಸಾಂಪ್ರದಾಯಕ ಕಟ್ಟುಪಾಡು ಕವಚ ನೀಡಿ ಉಪಚರಿಸಬೇಕಾದ ಹೆಣ್ಣು ಮಕ್ಕಳಿಗೆ ಹಟ್ಟಿಯಿಂದ ಹೊರದೂಡಲಾಗಿದೆ. ತಿಳುವಳಿಕೆ ಇದ್ದರೂ ಆಧುನಿಕ ಸಮಾಜ ಮೌನವಾಗಿದೆ. ಇಂತಹ ಮೌಢ್ಯಗಳಿಗೆ ಬಲಿಯಾಗುವವಳು ಮಹಿಳೆ. ಇಂತಹ ಸಾಮಾಜಿಕ ಅನ್ಯಾಯಗಳಿಂದ ಸ್ತ್ರೀಯರು ಪ್ರಾಣ ಕಳೆದುಕೊಳ್ಳುವಂತಾಗಿದೆ.

ಮಹಿಳೆಗೆ ಕುಟುಂಬದಲ್ಲಿ ಪ್ರೀತಿ, ಆಸ್ತಿ ಹಕ್ಕು ಎಲ್ಲಕ್ಕೂ ಕೊರತೆಯಾಗಿದೆ. ಸಮಾಜದಲ್ಲಿ ಸ್ಥಾನಮಾನಕ್ಕೆ ಒದ್ದಾಡುತ್ತಿರುವ ಮಹಿಳೆ, ಇಡೀ ಜೀವ ಸಂಕುಲವನ್ನು ಪೊರೆಯುವ ಸೃಷ್ಟಿ ಮಾತೆಯಾಗಿದ್ದಾಳೆ. ಮನೆಯಿಂದ ಶಾಲೆಯಿಂದ ಹಿಡಿದು ಕಛೇರಿಗಳಲ್ಲಿ ಕಡೆಗೆ ಮಹಿಳಾ ಜೈಲುಗಳಲ್ಲಿ ಮಹಿಳಾ ಆಶ್ರಮಗಳಲ್ಲಿ ಹಿಂಸಾಚಾರ ಅವಿರತವಾಗಿ ನಡೆದಿದೆ.

ಪ್ರಸ್ತುತ ಸಂದರ್ಭ ನವನಾಗರೀಕತೆ ಉನ್ನತ ಮಟ್ಟಕ್ಕೇರಿದ್ದರೂ ಲಿಂಗ ಅಸಮಾನತೆಯ ಅನಿಷ್ಟ ಸಮಸ್ಯೆ ರೋಗದಂತೆ ಕಾಡುತ್ತಿದೆ. ಸಾಹಿತ್ಯೇತರ ಸವಾಲುಗಳನ್ನು ಸಾಹಿತ್ಯದ ಮೂಲಕ ವಿವರಿಸುವ ಮಹಿಳೆ ತನ್ನ ಅಸ್ತಿತ್ವಕ್ಕಾಗಿ ಪ್ರಯತ್ನಿಸುತ್ತಿದ್ದಾಳೆ. ಮಹಿಳೆಗೆ ಅವಳ ಭಾವನೆಗೆ ಅಭಿಪ್ರಾಯಗಳಿಗೆ, ಸ್ಥಿತಿಗೆ, ಶ್ರಮಕ್ಕೆ ಬೆಲೆ ಕೊಡದೆ ಪುರುಷ, ಹೆಣ್ಣನ್ನು ಮೂಲೆಗುಂಪಾಗಿಸಿದ್ದಾನೆ. ಎಲ್ಲ ಕಾಲಕ್ಕೂ, ಎಲ್ಲ ದೇಶದಲ್ಲೂ ಶೋಷಿತಳಾದವಳು ಹೆಣ್ಣು. ಉಪ ಸೃಷ್ಟಿ ಮಾತ್ರ. ಪುರುಷನಿಗಾಗಿ ಸೃಷ್ಟಿಯಾದ ಉಪವಸ್ತು ಎಂದು ಕಡೆಗಣಿಸಲ್ಪಟ್ಟಿದ್ದಾಳೆ ಪುರುಷ ಬ್ರೈಡ್ ವಿನ್ನರ್, ಸ್ತ್ರೀ ಬ್ರೈಡ್ ಮೇಕರ್ ಮಾತ್ರ. ಹಬ್ಬ ಆಚರಣೆ, ಮದುವೆ ಮುಖ್ಯ ಸಂದರ್ಭಗಳಲ್ಲಿ ಉಪವಾಸ ವ್ರತಕ್ಕೆ ಪ್ರಚೋದಿಸಿ ಮೌನಕ್ಕೆ ತಳ್ಳುತ್ತಿದ್ದರು. ಅಸಮಾನತೆಯನ್ನು ಪ್ರಜ್ಞಾಪೂರ್ವಕವಾಗಿ

ಆಚರಿಸಲಾಗಿದೆ. ಮನುಧರ್ಮ ಕಾಲದಿಂದಲೂ ಪುರುಷನ ಆಶ್ರಮದಲ್ಲಿ ಬಂಧಿಸಲ್ಪಟ್ಟಿದ್ದಾಗಲೇ ಭ್ರಮಾತ್ಮಕ ಸನ್ನಿವೇಶ ನಿರ್ಮಿಸಿದ್ದಾನೆ.

ಈ ತಾರತಮ್ಯ ಪುರುಷ ಸೃಷ್ಟಿಯೇ ಹೊರತು ನಿಸರ್ಗ ಸೃಷ್ಟಿ ಅಲ್ಲ. ಬೇರೆ ಬೇರೆ ಯಾವ ಪ್ರಾಣಿ ಪಕ್ಷಿಗಳು ಈ ರೀತಿ ವರ್ತಿಸುತ್ತಿಲ್ಲ. ಪ್ರಪಂಚದ ಈವರೆಗಿನ ಎಲ್ಲ ವ್ಯಾಖ್ಯಾನಗಳಲ್ಲಿ ಸಿದ್ಧಾಂತಗಳಲ್ಲಿ ಶಾಸ್ತ್ರಗಳಲ್ಲಿ 'ಮಾನವ' ಮನುಷ್ಯ' ಎಂಬ ಹೇಳಿಕೆಗಳೇ ವರ್ಣಿತವಾಗಿದೆ. ಈ ಪದದಲ್ಲೇ ಸ್ತ್ರೀ ಅಗೋಚರವಾಗಿದ್ದಾಗಲೇ ಬೈಗುಳಗಳಿಗೆ ಅಪನಂಬಿಕೆ ಅಪಶಕುನಗಳಿಗೆ ಹೆಣ್ಣನ್ನು ಕೇಂದ್ರವಾಗಿಸಿಕೊಳ್ಳಲಾಗಿದೆ. ಪುರುಷ ವೀರತ್ವದ ಸಾಹಸದ, ಬುದ್ಧಿ ಲಕ್ಷಣಗಳನ್ನು ತಾನು ಧರಿಸಿ, ಲಜ್ಜೆ ಭಯಭೀತಿ, ಜಾಣತನ ಹೆಣ್ಣಿಗೆ ಆರೋಪಿಸಿದ್ದಾರೆ. ಇದು ಅದಲು ಬದಲಾದರೆ ದೋಷ ಎಂದಿದ್ದಾರೆ.

ಸ್ತ್ರೀ ಪರಿಕಲ್ಪನಾಧಾರಿತ ಇತ್ತೀಚೆಗೆ ಒಂದು ದಟ್ಟ ಅಲೆಯನ್ನೇ ಸೃಷ್ಟಿಸಿದೆ. ಸ್ತ್ರೀ ಪರ ಸೈದ್ಧಾಂತಿಕ ವಾದವನ್ನು ವಿಮರ್ಶಕರು ಪ್ರಯೋಗದಲ್ಲಿ ತೊಡಗಿಸಿಕೊಂಡಿದ್ದಾರೆ. ಸ್ತ್ರೀ ವಾದದ ಪ್ರಕಾರ ಮನುಷ್ಯ ದ್ವಿಲಿಂಗಿ ಸ್ತ್ರೀ – ಪುರುಷ ಲಿಂಗ ತಾರತಮ್ಯ ಸಲ್ಲದು. ಪುರುಷನಾದವನು ಹೆಣ್ಣನ್ನು ತನಗಿಂತ ಎಲ್ಲದರಲ್ಲೂ ಕೆಳಗಿನವಳು ಕೀಳಾದವಳು ಎಂದು ಭಾವಿಸಿದ್ದಾನೆ. ಶೇಕಡ 85% ರಷ್ಟು ಪುರುಷರಲ್ಲಿ ವಿದ್ಯಾವಂತ ಪುರುಷರಲ್ಲೂ ಅಡಗಿರುತ್ತದೆ. ಬಲಕ್ಕಿಂತ ಮನೋಬಲ ಮುಖ್ಯವೆಂದು ಅವರು ಭಾವಿಸಿಲ್ಲ.

ಪ್ರಪಂಚದ ಮಹಾ ಯುದ್ಧಗಳಂತೆ ಹೆಣ್ಣಿನ ಮನದ ಪುಟ್ಟ ಆಸ್ಫೋಟವೂ ಮುಖ್ಯ. ಲಿಂಗ ಅಸಮಾನತೆ – ಜ್ವಲಂತ ಸಾಮಾಜಿಕ ಸಮಸ್ಯೆ , ಸಂಸ್ಕೃತಿ ವಿಘಟನೆಯ ದುರಂತ, ನಾಗರೀಕತೆಯ ಸಂದರ್ಭದಲ್ಲಿ ಸ್ತ್ರೀ ಸಬಲೀಕರಣದ ಮಾತನ್ನಾಡುತ್ತಿರುವುದು ವೈಚಾರಿಕತೆಯ ಸೋಗು ಆಗಿದೆ.

ಪುರಾಣದಿಂದ ಚರಿತ್ರೆಯವರೆಗೆ, ಚರಿತ್ರೆಯಿಂದ ಪ್ರಸ್ತುತದೆಡೆಗೆ ಲಿಂಗ ತಾರತಮ್ಯ ಹೆಚ್ಚಾಗಿದೆಯೇ ಹೊರತು ಅದರ ಸಿಕ್ಕುಗಳನ್ನು ಬಿಡಿಸಿಕೊಳ್ಳಲಾಗಲಿಲ್ಲ. ಅನಾದಿಯಿಂದಲೂ ಸ್ತ್ರೀಯನ್ನು ಶರಣಾಗತ ಸ್ಥಿತಿಯಲ್ಲಿರಿಸಿದೆ. ಪುರಾಣ ಕಾಲದಿಂದಲೂ ಯುದ್ಧ ಕ್ರಾಂತಿ,

ನಾಗರೀಕತೆ, ಜಾಗತೀಕರಣ ಎಲ್ಲ ಸಂದರ್ಭದಲ್ಲೂ ಪುರುಷ ಪ್ರಧಾನ ಸಮಾಜ ಸ್ತ್ರೀಯನ್ನು ಬಳಸಿಕೊಂಡಿದೆ. ಮತ್ತು ಕಡೆಗಣಿಸಿದೆ. ಪುರುಷ ಯಜಮಾನಿಕೆಯೇ ಪುರಾಣ ಚರಿತ್ರೆಗಳಲ್ಲಿ ತುಂಬಿಹೋಗಿದೆ. ಸೀತೆ ದ್ರೌಪದಿಯ ಅವಮಾನ ಸಂಕಟಗಳನ್ನು ಚಿತ್ರಿಸಿರುವ ಮಹಾಕವಿಗಳ ಮಹಾ ಗ್ರಂಥಗಳಲ್ಲಿಯೂ ಪುರುಷ ಪ್ರಧಾನ ಪ್ರಾಧಾನ್ಯತೆಯೇ ಅಂತಿಮತೆ ಪಡೆದಿದೆ. ಹೆಣ್ಣನ್ನು ಚಿತ್ರಿಸಿರುವುದೂ ಗಂಡಿನ ಭಾಷೆ ಮತ್ತು ದೃಷ್ಟಿಯಲ್ಲಿಯೇ, ಸ್ತ್ರೀ ಕುಲಕ್ಕೆ ಸಂಕಟಗಳು ಅನಿವಾರ್ಯ ಎಂಬಂತೆಯೇ ಪುರಾಣ ಕತೆಗಳು, ಚರಿತ್ರೆಗಳು ತೀರ್ಮಾನಿಸಿ ಬಿಟ್ಟಿದೆ. ಯಯಾತಿ, ಶ್ರೀರಾಮ, ಕೃಷ್ಣ, ಗೌತಮ, ಹರಿಶ್ಚಂದ್ರ ಹೆಣ್ಣಿನ ಆತ್ಮನಾಶ ಮಾಡಿದರೂ ಲೋಕ ಮೆಚ್ಚುವ ಮಹಾತ್ಮರಾಗಿಯೇ ಉಳಿದಿದ್ದಾರೆ. ಪುರುಷನನ್ನುಬಿಟ್ಟು ಸ್ತ್ರೀಗೆ ಉಳಿಗಾಲವಿಲ್ಲ ಎಂಬಂತೆ ಬಿಂಬಿಸಿ ಹೆಣ್ಣನ್ನು ತನ್ನ ಅಧೀನವಾಗಿಯೇ ಉಳಿಸಿದ್ದಾನೆ. ದ್ರೌಪತಿಯ ಛಲ, ಅಂಬೆಯ ಹಠ, ಸೀತೆಯ ನಿಯತ್ತು ಪುರಾಣಗಳ ಪುರಾಣಕಂತೆ ಆಗಿವೆ. ಮಹಾಯುದ್ಧಗಳು ನಡೆದಿರುವುದು ಸ್ತ್ರೀಗಾಗಿ ಎಂಬ ಸನ್ನಿವೇಶ ಸೃಷ್ಟಿಸಿರುವುದೂ ಪುರುಷನೇ. ಗಂಡನನ್ನು ಎದುರು ಹಾಕಿಕೊಂಡ ಅಂಬೆ ಬಾಳಿನುದ್ದಕ್ಕೂ ವ್ಯಥೆಪಡುವ ಕತೆಯೇ ಆಗಿದೆ. ಅಗಸನ ಮಾತಿಗಿರುವ ಬೆಲೆ ಸೀತೆಯ ಮೇಲೆ ನಂಬಿಕೆ ರಾಮನಿಗಿಲ್ಲ. ಸುಂದರ ಹೆಣ್ಣು ತನ್ನ ಹಕ್ಕು ಎಂದು ರಾವಣ ಅಟ್ಟಹಾಸದಿಂದ ಮೆರೆದಿದ್ದಾನೆ. ಹೆಣ್ಣನ್ನು ಪಗಡೆಯ ಪಣಕ್ಕಿಡಲಾಗಿದೆ. ದಾಸಿಯಂತೆ ಅವಮಾನ ಮಾಡಲಾಗಿದೆ. ರಾಜಕೀಯ ಕುತಂತ್ರಗಳಿಗಾಗಿದೆ. ಐದು ಪುರುಷರನ್ನು ದ್ರೌಪತಿಯ ಕೊರಳಿಗೆ ಕಟ್ಟಲಾಗಿದೆ. ವ್ಯಾಸ, ವಾಲ್ಮೀಕಿಯರು ಸಾಮಾಜಿಕ ಕಟ್ಟಳೆಗಳಿಗೆ ಒಳಪಟ್ಟೇ, ರಾಮಾಯಣ, ಭಾರತವನ್ನು ರಚಿಸಿದ್ದಾರೆ. ಸ್ತ್ರೀ ಸಂವೇದನೆಗಾಗಿ ಅಲ್ಲ. ಹೆಣ್ಣಿನ ಕಷ್ಟಗಳನ್ನು ಚಿತ್ರಿಸಿದ್ದಾರೆಯೇ ಹೊರತು ಪರಿಹಾರ ಅಲ್ಲ. ಹೆಣ್ಣಿನ ಆತ್ಮಚರಿತ್ರೆಯನ್ನು ಯಾರೂ ಪುರಾಣವಾಗಿಸಿಲ್ಲ. ಪುರುಷನ ಪುಟ್ಟ ಸಂಗತಿಯೂ ದೊಡ್ಡ ಪುರಾಣಗಳಾಗಿ ಬಿಟ್ಟಿವೆ. ಸ್ತ್ರೀ ಸ್ವಂತಿಕೆಗಳನ್ನು ಬಚ್ಚಿಡಲಾಗಿದೆ. ಪವಿತ್ರತೆಯ ಹೆಸರಿನಲ್ಲಿ ಶೋಷಣೆಗಳು ನಡೆದಿವೆ.

ಪುರುಷ ಹೆಮ್ಮೆಯ ಸಂಕೇತ, ಅವನದು ವೀರಗುಣ. ಹೆಣ್ಣು ಕರುಣೆಯ ಸಂಕೇತ. ಸಹನೆ ವಿನಯ ಇದ್ದರಷ್ಟೇ ಹೆಣ್ಣು. ಇಲ್ಲವಾದಡೆ ಗಂಡು ಬೀರಿ ಎಂದು ಪುರುಷ ಶಾಸನಗಳಲ್ಲಿ ಕೆತ್ತಲ್ಪಟ್ಟಿದೆ. ಹೆಚ್ಚು ಮಾತಾಡದಂತೆ ಎಲ್ಲ ಹಕ್ಕುಗಳ ಜೊತೆ ಮಾತಿನ ಹಕ್ಕನ್ನು ಕಸಿಯಲಾಗಿದೆ ಹೆಣ್ಣು ತನಗಾಗಿ ಅಲ್ಲ. ಪರರಿಗಾಗಿ ಬದುಕುತ್ತಿದ್ದಾಳೆ. ಚರಿತ್ರೆಯ ಪುಟಗಳಲ್ಲಿ ರಾಜರಿಂದ ರಾಜರಿಗೆ ಕಪ್ಪಕಾಣಿಕೆಯಂತೆ ಹಸ್ತಾಂತರಗೊಂಡಿದ್ದಾಳೆ. ಸಹಗಮನದಂತಹ ವೀರಮರಣ

ಪಡೆದು ಮಾಸ್ತಿಗಲ್ಲುಗಳಲ್ಲಿ ಕಲ್ಲಾಗಿದ್ದಾಳೆ. ಹೆಣ್ಣಿನ ಖಾಸಗಿತನವನ್ನು ಕಸಿದುಕೊಳ್ಳಲಾಗಿದೆ. ಪರ ಪೂರೈಕೆಗಳಲ್ಲಿ ಸುಖಿಸುತ್ತಾ ಅದು ತನ್ನ ಜೀವನದ ಧನ್ಯತೆ ಎಂದು ನಂಬಿದ್ದಾಳೆ ಅಥವಾ ನಂಬಿಸಲಾಗಿದೆ.

ಅಕ್ಷರಕ್ರಾಂತಿ ಅನೇಕ ಪಲ್ಲಟಗಳಿಗೆ ಎಡೆ ಮಾಡಿತು. ಮಹಿಳಾ ಜಾಗೃತಿ ಎಂಬುದು ಸ್ತ್ರೀ ಶಿಕ್ಷಣದ ಪರಿಣಾಮ ಲಿಂಗ ತಾರತಮ್ಯದ ಭೀಕರತೆಯನ್ನು ಪ್ರಕೃತಿ ನಿಯಮ ಎಂಬ ಭಕ್ತಿ ಎಂದು ಸ್ತ್ರೀ ವರ್ಗವನ್ನು ನಂಬಿಸಲಾಗಿತ್ತು. ಕೇವಲ ಭಾಷಣ, ಲೇಖನಗಳಲ್ಲಿ ಮಾತ್ರ ಸ್ತ್ರೀ ಸಮಾನತೆಯ ಕೂಗು ಕೇಳಿ ಬರುತ್ತದೆ. ಪ್ರತ್ಯಕ್ಷವೇ ಬೇರೆ, ಕೌಟುಂಬಿಕವಾಗಿ ಮಹಿಳಾ ಸ್ಥಿತಿಗತಿಗಳು ಹಾಗೆ ಉಳಿದಿದೆ. ವಿಚಾರವಾಗಿ ಪುರುಷರೂ ಇದಕ್ಕೆ ಹೊರತಲ್ಲ. ವಿದ್ಯಾವಂತ ಉದ್ಯೋಗಶೀಲ ಮಹಿಳೆಯೂ ಕುಟುಂಬದ ಎಲ್ಲಾ ಕರ್ತವ್ಯಗಳನ್ನು ನಿರ್ವಿವಾದವಾಗಿ ಒಪ್ಪಿದ್ದಾಳೆ.

ಆಧುನಿಕ ಸಂದರ್ಭದಲ್ಲೂ, ನಾಗರೀಕ ಸಮಾಜವೂ ಇದಕ್ಕೆ ಹೊರತಲ್ಲ. ಕಾರ್ಮಿಕ ಸ್ತ್ರೀ ವರ್ಗ, ದಿನಗೂಲಿ ಸ್ತ್ರೀ ಪಾಡು ನಿತ್ಯ ಶೋಷಣೆಗೆ ಗುರಿಯಾಗಿಸಿ, ಹೆಣ್ಣಿನ ದೈಹಿಕ ದೌರ್ಬಲ್ಯತೆ, ಅಸಮಾನತೆಯ ಲಿಂಗ ತಾರತಮ್ಯದ ಗೋಡೆ ಎಬ್ಬಿಸಿದೆ. ಮನೆಯಿಂದ ಮೊದಲ್ಗೊಂಡು ಇಡೀ ಸಮಾಜವೆ ಸಿಂಪಲ್ ಇಂಪ್ರೆಷನ್ ಆಗಿಬಿಟ್ಟಿದೆ.

ಸ್ತ್ರೀ ಸಂವೇದನೆಯ ಅಭಿವ್ಯಕ್ತಿ ಮಾರ್ಗ ತಿರುವು ಪಡೆಯುತ್ತಿದೆ. ಶತಮಾನಗಳ ಹಿಂದೆ ಬಸವನ ಹುಳುವಿನಂತೆ ಮುಚ್ಚಿಟ್ಟುಕೊಳ್ಳುತ್ತಿದ್ದ ಸ್ತ್ರೀ ಮುಕ್ತವಾಗಿ ತನ್ನ ಮನಸ್ಸಿನ ಕೊರಕಲುಗಳನ್ನು ಅನಾವರಣಗೊಳಿಸುತ್ತಾ ಸ್ತ್ರೀ ಒಳಗನ್ನು ಪ್ರಪಂಚಕ್ಕೆ ದಿಟ್ಟವಾಗಿ ತೋರಿಸುತ್ತಿದ್ದಾಳೆ, ಮಹಿಳೆಯ ಅತರಂಗದ ತಲ್ಲಣಗಳು ಬಾಹ್ಯ ಬದುಕು ತದ್ದವಿರುದ್ಧವಾಗಿದೆ. ತನ್ನ ಭಾವನೆಗಳನ್ನು ಯಥಾವತ್ತಾಗಿ ಪರಿಪೂರ್ಣವಾಗಿ ಅಭಿವ್ಯಕ್ತಿಗೊಳಿಸುತ್ತಾಳೆಯೇ ? ಅರ್ಧಭಾಗ ಮುಚ್ಚಿಡುತ್ತಾಳೆ; ಉಳಿದರ್ಧ ಮಿಥ್ಯವನ್ನು ನುಡಿಯುತ್ತಾಳೆ. ಸತ್ಯವನ್ನು ಹೇಳುವಾಗ ಮೌನಿಯಾಗುತ್ತಾಳೆ, ಕೆಲವು ಭಾವನೆಗಳು ವರ್ತನೆಗಳಲ್ಲಿ ಅಪರೋಕ್ಷವಾಗಿ ತೋರಿಕೆ ಪಡೆಯುತ್ತದೆ. ಮಾತಿನಲ್ಲಿ ಬರಲಾಗದ ಭಾವಗಳು ಬರವಣಿಗೆಯಲ್ಲಿ ಅನಾವರಣಗೊಂಡವು.

ರೊಮ್ಯಾಂಟಿಕ್ ಆಗಿ ವರ್ಣಿಸುವ ಕಾಮಕ್ಕೂ, ಭೀಭತ್ಸ ಎನ್ನುವ ಅತ್ಯಾಚಾರಕ್ಕೂ ನಡುವಿನ ಗೆರೆ ತುಂಬ ತೆಳುವಾಗಿದೆ, ಆ ಗೆರೆ ಒಪ್ಪಿಗೆ ಎಂಬ ಮೋಸಗಾರ ಪದವನ್ನೊಳಗೊಂಡಿದೆ ಎಂದು ಅನುಪಮಾ ಹೇಳುತ್ತಾರೆ. ಲೈಂಗಿಕ ಕಾರ್ಯಕರ್ತೆಯರು ಎಂಬ ಸ್ತ್ರೀ ವರ್ಗವನ್ನೇ ಈ ಸಮಾಜ ಕಾನೂನುಬದ್ಧವಾಗಿಯೇ ಸೃಷ್ಟಿ ಮಾಡಿದೆ. ಅವರು ಅನುಭವಿಸುವ ನರಕ ಯಾತನೆಗೆ ಸಮಾಜ ಕುರುಡಾಗಿದೆ, ಸ್ತ್ರೀ ಶೋಷಣೆಗೆ ಇದಕ್ಕಿಂತ ಬೇರೆ ದೃಷ್ಟಾಂತ ಭೂಗೋಳದ ಇನ್ನಾವ ಜೀವ ಸಂಕುಲವೂ ತನ್ನ ಸ್ತ್ರೀ ಪ್ರಭೇದವನ್ನು ನಡೆಸಿಕೊಳ್ಳದಷ್ಟು ಹೀನವಾಗಿ ಮಾನವ ನಡೆದುಕೊಳ್ಳುತ್ತಿದ್ದಾನೆ.

ಲಿಂಗಸಮಾನತೆಯ ಪಾಠಗಳು ಕುಟುಂಬದಿಂದಲೇ ಪ್ರಾರಂಭವಾಗಬೇಕು. ದೇಹಕ್ಕೆ ಮೀರಿದ ಒಂದು ವ್ಯಕ್ತಿತ್ವವಿದೆ, ಅದುವೇ ನಿಜವಾದ ಅಸ್ತಿತ್ವ ಎಂಬ ಅರಿವು ಮೂಡುವಂತೆ ಆತ್ಮವಿಶ್ವಾಸದ ಶಿಕ್ಷಣ ನೀಡಬೇಕು. ಸಮಾಜಕ್ಕೆ ಮಹಿಳಾ ಪರ ಕಾಳಜಿ ಮೂಡಿಸಬೇಕಾಗಿದೆ.

ರಾಜಕೀಯ ಪಕ್ಷಗಳು ತಾಳಿಭಾಗ್ಯ, ಸೀರೆಭಾಗ್ಯ ನೀಡಿದರೆ ಸಾಲದು. ಸಮಾನತೆಯ ಸೌಭಾಗ್ಯ ಒದಗಿಸಬೇಕಾಗಿದೆ. ಧರ್ಮಗ್ರಂಥಗಳಲ್ಲಿ ಮಹಿಳೆಯನ್ನು ಶಕ್ತಿದೇವತೆ ಎಂದರೂ, ಸಹಗಮನ, ವಿಧವಾದದ್ದೇ? ವರದಕ್ಷಿಣೆ, ವಧುದಹನ ಸ್ತ್ರೀ ಭ್ರೂಣಹತ್ಯೆ, ದೈಹಿಕ ಹಿಂಸೆ, ದೌರ್ಜನ್ಯ ಬರ್ಬರ ಶೋಷಣೆ ನಡೆಯುತ್ತಲೇ ಇದೆ.

ಧರ್ಮ, ಕಾನೂನು, ಆಡಳಿತ, ಅರ್ಥ ವ್ಯವಸ್ಥೆ ಸಮಾಜದ ಎಲ್ಲ ಕ್ಷೇತ್ರಗಳನ್ನು ಹಿಡಿದಿರುವನು ಪುರುಷ, ಕಾನೂನುಗಳಷ್ಟೇ ಅಲಿಖಿತ ನೀತಿ ಸಂಹಿತೆಗಳೂ ಸ್ತ್ರೀ ಶೋಷಣೆಗೆ ಮುಖ್ಯ ಕಾರಣವಾಗಿದೆ.

ಆತ್ಮಗೌರವಕ್ಕಾಗಿ ಕೂಗುತ್ತಿರುವ ಸ್ತ್ರೀ ;
ಆಕ್ರಮಣ ಮಾಡುತ್ತಿರುವ ಪುರುಷ.

ಎರಡು ಸಮಾನಾಂತರ ರೇಖೆಗಳಂತೆ ಸಾಗುತ್ತಲೇ ಇದೆ. ದೈಹಿಕ ಬಲಿಷ್ಠತೆ ಹೊಂದಿರುವ ಪುರುಷ ಸೂಕ್ಷ್ಮ ಪ್ರವೃತ್ತಿಯ ಸ್ತ್ರೀಯರನ್ನು ಶೋಷಣೆಯ ವಸ್ತುವಾಗಿಸಿಕೊಂಡಿದ್ದಾರೆ.

ಶ್ರಮಿಕ ವರ್ಗದ ಸ್ತ್ರೀ, ಆದಿವಾಸಿ ಸ್ತ್ರೀ, ಗ್ರಾಮೀಣ ಸ್ತ್ರೀಯರು ಮುಸಲ್ಮಾನ ಮಹಿಳೆಯರು, ಬಡ ಕುಟುಂಬದವರು, ಉದ್ಯೋಗವಂತ ಸ್ತ್ರೀಯರು, ತಳಸಮುದಾಯದ ಸ್ತ್ರೀ ಇವರನ್ನೆಲ್ಲ ಕಾನೂನು, ಸಂವಿಧಾನ, ಪತ್ರಿಕೆ ಮತ್ತು ಧಾರ್ಮಿಕ ಸಂಹಿತೆಗಳು ಹಾಗೂ ರಕ್ಷಣಾ ವ್ಯವಸ್ಥೆ ಕಾಪಾಡುತ್ತದೆಯೇ ?

ಆಧುನಿಕ ಸಮಾಜ ಹೆಣ್ಣು ಮಕ್ಕಳಿಗೆ ಶಿಕ್ಷಣ, ಸ್ವಾತಂತ್ರ್ಯ, ಆಸ್ತಿಹಕ್ಕು, ವಿಚ್ಛೇದನ ಹಕ್ಕು, ಜೀವನಾಂಶ ರಕ್ಷಣೆ ನೀಡುತ್ತದೆಯೇ ? ಜಾತಿವಾದಿ ಮೂಲಭೂತವಾದಿಗಳ ಅಡಕತ್ತರಿನಲ್ಲಿ ಸ್ತ್ರೀ ಸಿಲುಕಿಕೊಂಡಿದ್ದಾಳೆ.

ನಿರಂತರ ಶೋಷಣೆಯಿಂದ ಸ್ತ್ರೀಯರು ಮಾನಸಿಕ ಖಿನ್ನತೆ ಆತ್ಮಹತ್ಯೆಗಳಿಗೆ ಗುರಿಯಾಗುತ್ತಿದ್ದಾಳೆ. ಶಿಕ್ಷಣ, ಉದ್ಯೋಗ, ಕ್ರೀಡಾ ಕ್ಷೇತ್ರಗಳಲ್ಲೂ ಸ್ತ್ರೀ ಶೋಷಣೆ ನಿರಂತರವಾಗಿ ನಡೆಯುತ್ತಲೇ ಇದೆ. ಗಾಂಧಿ, ಅಂಬೇಡ್ಕರ್, ಮಾರ್ಕ್ಸ್‌ವಾದಿಗಳು ಅಸಮಾನತೆಯನ್ನು ಹೋಗಲಾಡಿಸಲಾರರು. ವೈದ್ಯಕೀಯ ಸಂಶೋಧನೆಗಳು ಹೆಣ್ಣಿನ ನೈಸರ್ಗಿಕ ಸೂಕ್ಷ್ಮತೆಗಳಿಗೆ ಉತ್ತರಿಸಬಲ್ಲದೆ? ಮಾಸ್ತಿಕಲ್ಲುಗಳನ್ನು ಪೂಜಿಸುವ ಅರ್ಥವೇನು? ಆಧುನಿಕ ಜಗತ್ತು ಇದಕ್ಕೆ ಉತ್ತರಿಸಬೇಕಿದೆ. ಮಹಿಳಾ ಸ್ಥಾನಮಾನಗಳೇನು? ಮಹಿಳಾ ಬರವಣಿಗೆಗೆ ಒಂದು ಸಾಂಸ್ಕೃತಿಕ ಮಹತ್ವವಿದೆ. ಮಹಿಳಾ ಸಾಹಿತ್ಯ ಸ್ತ್ರೀ ಲೋಕದ ಸಂಕೇತಗಳಂತೆ ಅವರ ಅಂತಸ್ಥ ಚಿತ್ತಭಿತ್ತಿಗಳು ಅನಾವರಣಗೊಳ್ಳುತ್ತವೆ.

ಶ್ರಮಿಕ ಬದುಕಿನ ಸಾರಸಂಗತಿಗಳು ಧ್ವನಿತವಾಗಿ ವಚನ ಯುಗದಲ್ಲೂ ನುಸುಳಿತು. ವಚನಕಾರ್ತಿಯರ ಆಶಯಗಳು ವೃತ್ತಿ, ಭಕ್ತಿ, ಜ್ಞಾನ ಸಮನ್ವಯಗೊಂಡು ವಚನ ಸಾಹಿತ್ಯವಾಗಿ ಮೈತಳೆಯಿತು. ಸ್ತ್ರೀ ಸಮಾನತೆಯ ಮೊದಲ ಕಹಳೆ ಉದ್ಘೋಷ ಮಾಡಿದ ಕಾಲ ವಚನ ಯುಗ, ಸ್ತ್ರೀ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಪರಿಪೂರ್ಣವಾಗಿ ದಕ್ಕಿದ ಮಹಿಳಾ ಸಾಹಿತ್ಯ ವಚನ ಪರಂಪರೆಯಲ್ಲಿ ಬಹುಮುಖ್ಯ ಬೆಳವಣಿಗೆ ಪಡೆಯಿತು. ಹೆಣ್ಣಿನ ಸಾಮಾಜಿಕ ಸಮಸ್ಯೆಗಳನ್ನು ಬಿಡಿಸುವಲ್ಲಿ ಧನಿಯಾದರು, ಆತ್ಮಸಿದ್ಧಿ, ಕಾಯಕ ಸಿದ್ಧಿಯನ್ನು ಸಾಧಿಸಿದರು. ಹೆಣ್ಣನ್ನು ಮಾಯೆ ಎಂದ ಪುರುಷ ವಚನಕಾರರನ್ನು ಬಂಧಿಸಿ, ಸ್ತ್ರೀ ವಚನಕಾರ್ತಿಯರು ಹೆಣ್ಣು

ಸಾಧನೆಗೆ ಮೋಕ್ಷಕ್ಕೆ ಅರ್ಹಳು ಎಂದು ಭಕ್ತಿ ಮಾರ್ಗದಲ್ಲಿ ಪ್ರತಿಪಾದಿಸಿದರು. ಪುರುಷನಂತೆಯೇ ಆಸೆ, ಅರಿಷಡ್ವರ್ಗಗಳನ್ನು ಗೆದ್ದು ಆಧ್ಯಾತ್ಮ ಸಾಧನೆಯನ್ನು ದಕ್ಕಿಸಿಕೊಂಡರು.

ಅಮುಗೆ ರಾಯಮ್ಮ, ಆಯ್ದಕ್ಕಿ ಲಕ್ಕಮ್ಮ, ಮುಕ್ತಾಯಕ್ಕ, ಮಹದೇವಿಯಕ್ಕ, ನೀಲವ್ವೆ, ಸಂಕವ್ವೆ ವೃತ್ತಿ ಬದುಕಿನೊಂದಿಗೆ ಸಾಹಿತ್ಯ ಅಭಿವ್ಯಕ್ತಿ ಸಾಧಿಸಿದರು. ಆಧ್ಯಾತ್ಮಸಿದ್ಧಿ, ಅಂತರಂಗ ಶೋಧ, ಪಾರಮಾರ್ಥಿಕ ಹುಡುಕಾಟ ಕಂಡು ಬಂದರೂ ರೂಢಿಗತ ಸಾಂಪ್ರದಾಯಿಕ ಕಟ್ಟಳೆಗಳನ್ನು ಕಿತ್ತೊಗೆಯುವ ಧೋರಣೆ, ಪ್ರತಿಭಟನೆ ಸ್ಪಷ್ಟವಾಗಿ ಆಸ್ಫೋಟಗೊಂಡಿತು. ಅಕ್ಕಮಹಾದೇವಿಯ ವಚನಗಳಲ್ಲಿ ಸತಿಪತಿ ಭಾವ ವಿಚಿತ್ರ ಗತಿ ಪಡೆಯಿತು. 12ನೇ ಶತಮಾನಕ್ಕಾಗಲೇ ನಿರ್ಭೀತ ಭಾವದಿಂದ ಸಂಸಾರವನ್ನು ಧಿಕ್ಕರಿಸಿ, ಮಾನಸಿಕ ಪತಿಯನ್ನು ಸೇರುವ ದಿಟ್ಟ ತೀರ್ಮಾನ ಕೈಗೊಳ್ಳುತ್ತಾಳೆ. ಸಾಂಸಾರಿಕ ಬದುಕಿನಿಂದ ಅಲೌಕಿಕತೆಯ ಕಡೆ ಸಾಗುವ ಭಕ್ತಿಯ ನಿರ್ಭಯತೆ ಕಾಣಬಹುದು.

ಭಕ್ತಿಪಂಥದ ಮೌಲ್ಯಗಳನ್ನು ಸ್ವೀಕರಿಸಿದ ಸಂಚಿಹೊನ್ನಮ್ಮ, ಹೆಳವನಕಟ್ಟೆ ಗಿರಿಯಮ್ಮನವರ ಸಾಹಿತ್ಯದಲ್ಲಿ ದೈವಭಕ್ತಿ ಮೇಲುನೋಟಕ್ಕೆ ಕಂಡು ಬಂದರೂ, ಹೆಣ್ಣಿನ ಜೀವನದ ಒಳಗುದಿಗಳನ್ನು ಅಂತಸ್ಥವಾಗಿ ಸಾಹಿತ್ಯದಲ್ಲಿ ಬಿಂಬಿಸಿದ್ದಾರೆ. ಸ್ತ್ರೀ ಸಂಹಿತೆಗಳನ್ನು ಸ್ತ್ರೀಯರಿಗಾಗಿಯೇ ವಿಧಿಸಿದ ಕಟ್ಟಳೆಗಳನ್ನು ಮೌನವಾಗಿ ಒಪ್ಪಿಕೊಳ್ಳುವ ಧ್ವನಿ ಕಾಣುತ್ತೇವೆ. ತಾಯಿಯಾಗಿ, ಹೆಂಡತಿಯಾಗಿ, ಮಗಳಾಗಿ, ಹೆಣ್ಣು ನಿರ್ವಹಿಸಬೇಕಾಗಿರುವ ನೀತಿಸಂಹಿತೆಗಳು ವ್ಯಕ್ತವಾಗಿದೆ.ಸತಿಧರ್ಮದಲ್ಲಿ ಪತಿ ಮತ್ತು ಕುಟುಂಬ ನಿರ್ವಹಣೆಯ ಅನಿವಾರ್ಯತೆ ಈ ಯುಗದ ಸಾಹಿತ್ಯದ ಕೇಂದ್ರ ಪ್ರಶ್ನೆಯಾಗಿದೆ.

ಪ್ರಸ್ತುತ, ಸಂದರ್ಭದಲ್ಲಿ ಪ್ರಗತಿಪರ ಪರಿಧಿಯೊಳಗೆ ಸಮಾಜದ ವಿಸ್ತರಣೆಗಳನ್ನು ಹೊಸ ಮೌಲ್ಯಗಳನ್ನು ತನ್ನೊಳಗೆ ಸೇರಿಸಿಕೊಳ್ಳುತ್ತಾ, ಆಧುನಿಕ ಸಾಹಿತ್ಯ ' ಎಂಬ ಹೆಸರು ನೀಡಿತು. ಪಾಶ್ಚಾತ್ಯರ ಆಗಮನದಿಂದ ಭಾರತೀಯ ಸಂಸ್ಕೃತಿಯ ಮೇಲೆ ಉಂಟಾಗುತ್ತಿದ್ದ ಪ್ರಭಾವ ಸ್ಪಷ್ಟವಾಗಿ ಗೋಚರಿಸುತ್ತದೆ. ಸಂಸ್ಕೃತಿಯ ಪಲ್ಲಟಗಳು ಸಹಜವಾಗಿ ಸಾಹಿತ್ಯಿಕ ಪರಿವರ್ತನೆಗೆ ಕಾರಣವಾಯಿತು. ಆ ಘಟ್ಟದ ಕತೆಗಳಲ್ಲಿ ನಿರಾಶ್ರಿತರ ಅಸಹಾಯಕತೆ, ಬಾಲ್ಯ ವಿವಾಹದ ತೊಡಕು, ಸಾಂಪ್ರದಾಯಿಕ ಬೇರುಗಳ ಸಡಿಲಿಕೆ, ವಿಧವಾ ವಿವಾಹದ ಹಂಬಲ, ಸ್ತ್ರೀಯರ ನಿಸ್ಸಹಾಯಕತೆ,

ಪತಿಪ್ರೇಮದ ಆಕಾಂಕ್ಷೆ ಈ ರೀತಿ ಕೌಟುಂಬಿಕ ವಲಯದಲ್ಲಷ್ಟೇ ಒದಗುವ ಸಮಸ್ಯೆಯ ಚಿತ್ರಣ ಮತ್ತು ಅದರಿಂದ ಹೊರಬರುವ ಸಾಧ್ಯತೆಗಳ ಹಂಬಲಗಳ ಕಥಾವಸ್ತುವನ್ನು ಕಾಣಬಹುದು. ಶಿಕ್ಷಣದ ಕೊರತೆಯಿಂದ ಹೆಣ್ಣು ನಾಲ್ಕು ಗೋಡೆಗಳ ನಡುವೆ ಅಡುಗೆ ಮನೆಯ ಹುಡುಗಿ ಆಗಿದ್ದಳು. ಗಂಡನಿಂದ ತವರಿನಿಂದ, ಬಹಿಷ್ಕೃತಗೊಂಡ ಸ್ತ್ರೀಯರನ್ನು ಸಮಾಜ ನಿಕೃಷ್ಟವಾಗಿ ಕಾಣುತ್ತಿತ್ತು ಜೀವನೋಪಾಯಕ್ಕಾಗಿ ಯಾವುದೇ ಮಾರ್ಗ ತುಳಿಯಲ್ಪಟ್ಟ ಸ್ತ್ರೀಯರು ಅಪಾಯದ ಸ್ಥಿತಿಗೆ ಗುರಿಯಾಗುತ್ತಿದ್ದರು. ಮಥುರಾನಗರದ ಸ್ತ್ರೀಯರು ಅನುಭವಿಸುತ್ತಿರುವ ಧಾರುಣತೆ ಇದಕ್ಕೊಂದು ಸಾಕ್ಷಿ. ಇಂತಹ ಸಾಮಾಜಿಕ ಮತ್ತು ಸ್ತ್ರೀ ಸಮಸ್ಯೆಗಳೇ ಆ ಕಾಲದ ಕಥಾವಸ್ತು ಆಗಿದೆ. ಸ್ತ್ರೀಯರ ಮಾನಸಿಕ ಒಳತೋಟಿಯನ್ನು ಒಂದೆಡೆ ದಾಖಲಿಸುತ್ತಾ ಅದರಿಂದ ಬಿಡುಗಡೆ ಹೊಂದುವ ಪ್ರಯತ್ನವೂ ಅದರ ಆಶಯಗಳಲ್ಲಿ ಅಭಿವ್ಯಕ್ತವಾಗಿದೆ. ಪುರುಷರ ವಿರುದ್ಧ ಪ್ರತೀಕಾರದ ಹಂಬಲ ಹೊತ್ತ ಕೆಲವು ಕತೆಗಳೂ ಇವೆ.

ಎಚ್.ವಿ. ಸಾವಿತ್ರಮ್ಮನವರ ಕತೆಗಳಲ್ಲಿ ಕುಟುಂಬ ಪ್ರಾಧಾನ್ಯತೆ ಮೇಲುನೋಟಕ್ಕೆ ಕಂಡು ಬಂದರೂ ಆಂತರಿಕವಾಗಿ ಮರು ವಿವಾಹದಂತಹ ಕ್ರಾಂತಿಯ ಸೂಚನೆ ಆ ಕಾಲಕ್ಕಾಗಲೇ ಹೊಗೆಯಾಡುತ್ತಿತ್ತು. ಪ್ರಾಚೀನ ನವೀನ, ಪರಂಪರೆಯೆ ತಾಕಲಾಟ ಒಂದು ಬಗೆಯ ದ್ವಂದ್ವ ಮನಸ್ಥಿತಿ, ಕೆಲವು ಕತೆಗಳಲ್ಲಿ ವ್ಯಕ್ತವಾಗಿದೆ.

ತಿರುಮಲಾಂಬ: ಮಹಿಳಾ ಸಾಹಿತ್ಯ ಕ್ಷೇತ್ರದಲ್ಲಿ ಲೇಖಕಿಯಾಗಿ, ಸಂಶೋಧಕಿಯಾಗಿ, ಸಂಪಾದಕಿಯಾಗಿ, ಸ್ತ್ರೀವಾದಿ ಚಿಂತಕಿಯಾಗಿ ಮಹಿಳಾ ಚಲುವಳಿಯ ಹೋರಾಟಗಾರ್ತಿಯಾಗಿ, ಪ್ರಗತಿಪರ ಚಿಂತಕಿಯಾಗಿ ತಿರುಮಲಾಂಬ ಅವರು ವಹಿಸಿದ ಪಾತ್ರ ನಿರ್ವಹಿಸಿದ ಸಾಧನೆ ಹಿರಿದು. ವಿಧವೆಯರ ಪರಿತಾಪ ಸ್ಥಿತಿಗತಿಗಳನ್ನು ಗಮನಿಸಿ ವಿಧವಾತತ್ವ ಎಂಬ ಲೇಖನ, 'ನಭಾ' ಎಂಬ ಕಾದಂಬರಿ ರಚನೆ ಮಾತ್ರವಲ್ಲದೆ, ವಿಧವೆಯರ ಬಾಳಿಗೆ ಊರುಗೋಲಾಗಿ ನಿಂತು, ಜೀವನ ಮಾರ್ಗೋಪಾಯದ ರಹಸ್ಯವನ್ನು ತಿಳಿಸಿ, ಸಮಾಜ ಸುಧಾರಕಿಯಾಗಿ ಹೆಸರು ವಾಸಿಯಾಗಿದ್ದಾರೆ. ವಿರಾಗಿಣಿ, ವಿವೇಕೋದಯೆ, ಸಂದೇಶ, ಹಿತೈಷಿಣಿ ಇವರ ಕೃತಿಗಳು, ತ್ರಿವೇಣಿಯವರಕತೆಗಳಲ್ಲಿ ಮಧ್ಯಮವರ್ಗದ ಸ್ತ್ರೀಯರ ಸಮಸ್ಯೆಗಳೇ ಕಥಾ ವಸ್ತುವಾಗಿದೆ. ಹರಯದ ಹೆಂಗಳೆಯರ ಸಂದಿಗ್ಧತೆ, ಸೆಳೆತಕ್ಕೆ ಒಳಗಾಗುವ, ಬದಲಾವಣೆಗಾಗಿ ಕಾಯುವ ಸಮಾಜವನ್ನು ನಿಯಂತ್ರಿಸುವ ಸಂಪ್ರದಾಯ, ಇಂತಹ ಬಿಕ್ಕಟ್ಟುಗಳಿಗೆ ಬಲಿಯಾಗುವ ಸ್ತ್ರೀ ವರ್ಗ,

ಕೌಟುಂಬಿಕ ಘರ್ಷಣೆಗಳನ್ನು ಸ್ತ್ರೀ ನೆಲೆಯಲ್ಲಿ ಗ್ರಹೀತವಾಗುವಂತೆ ಚಿತ್ರಿಸಿದ್ದಾರೆ. ಸ್ವಾತಂತ್ರ್ಯದ ಆಸೆ, ಅದನ್ನು ಪಡೆಯದೆ ಜೀವನವನ್ನು ಮಾಗಿಸಿಕೊಳ್ಳುವ ಅಸಹಾಯಕತೆ ಬಿಂಬಿತವಾಗಿದೆ.

ಪ್ರಗತಿಶೀಲ ಘಟ್ಟದ ಕಾಲಕ್ಕಾಗಲೇ ಬರೆಯಲಾರಂಭಿಸಿದ್ದ ತ್ರಿವೇಣಿಯವರ ಕತೆಗಳಲ್ಲಿ ಸ್ತ್ರೀ ಪುರುಷ ಸಂಬಂಧಗಳು, ಪುರುಷ ಪ್ರಾಧಾನ್ಯತೆಯಿಂದ ಕೌಟುಂಬಿಕವಾಗಿ ಸ್ತ್ರೀಯರು ಅನುಭವಿಸುತ್ತಿದ್ದ ಮೂಕವೇದನೆಗಳು ವ್ಯಕ್ತವಾಗಿವೆ. ಇವರ ಕತೆಗಳಲ್ಲಿ ಈವರೆಗೂ ಇದ್ದ ಮಡಿವಂತಿಕೆ ಮಾಯವಾಗಿ ಸ್ತ್ರೀ ಮನೋವಿಶ್ಲೇಷಣಾತ್ಮಕ ಎಳೆಗಳನ್ನು ಕಾಣಬಹುದು. ಮರಾಠಿ ಭಾಷಿಕರಾಗಿದ್ದರೂ ಜಯದೇವಿತಾಯಿ ಲಿಗಾಡೆ ಕನ್ನಡ ಭಾಷಾ ಹೋರಾಟಕ್ಕಾಗಿ ಸಲ್ಲಿಸಿದ, ಸಾಧಿಸಿದ ಸೇವೆ ಅಪಾರವಾದದ್ದು ಅಲಂಕಾರ, ತಂತ್ರ ಇಲ್ಲವೇ ಹೇಳಬೇಕಾದ್ದನ್ನು ನೇರವಾಗಿ ಹೇಳಿರುವ ನೋವು ಅವಮಾನಗಳಿಗೆ ಕಾರಣವಾದ ಪುರುಷರನ್ನು ದ್ವೇಷಿಸುವುದಿಲ್ಲ. ಅವರನ್ನು ಯಥಾವತ್ತಾಗಿ ಬದಲಿಸುವ ಪ್ರಯತ್ನವಿದೆ. ಪ್ರಗತಿಶೀಲ ಬರಹಗಾರರಂತೆ ತೀವ್ರವಾಗಿ ಪರಿಣಾಮಕಾರಿಯಾಗಿ ಮೌಲ್ಯಗಳನ್ನು ದಾಖಲಿಸುತ್ತಾರೆ.

<u>ಸಾರಾ ಅಬೂಬಕ್ಕರ್</u> ಅವರ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು, ಕತೆಯಲ್ಲಿ ಸ್ತ್ರೀಯರ ಧಾರ್ಮಿಕ ನಿರ್ಬಂಧಗಳನ್ನು ಸ್ಪಷ್ಟವಾಗಿ ಬಿಡಿಬಿಡಿಯಾಗಿ ಚಿತ್ರಿಸುತ್ತಾ, ಅಷ್ಟೇ ಸ್ಪಷ್ಟವಾಗಿ ಅದನ್ನು ಪ್ರತಿಭಟಿಸುವ ಆಶಯ ವ್ಯಕ್ತಪಡಿಸುತ್ತಾರೆ. ಇವರ 'ನಿಯಮ ನಿಯಮಗಳ ನಡುವೆ' ಕತೆಯಲ್ಲಿ ಪ್ರಕೃತಿ ನಿಯಮಗಳ ವಿರುದ್ಧ ಧಾರ್ಮಿಕ ನಿಯಮಗಳನ್ನು ಸೃಷ್ಟಿಸಿರುವ ಪುರುಷ ಸಮಾಜ, ಸ್ತ್ರೀ ಶೋಷಣೆ – ಧಾರ್ಮಿಕ ಹಕ್ಕು ಎಂದು ಕ್ರೂರವಾಗಿ ಶಾಸನ ಬರೆಯಲ್ಪಟ್ಟಿದೆ. ಅದಕ್ಕೆ ಬಲಿಪಶು ಆಗುವವಳು 'ಸ್ತ್ರೀ' ಇಂತಹ ಧಾರ್ಮಿಕ ಉಪಾಯಗಳನ್ನು, ಸಂಚುಗಳನ್ನು ಸಾರಾ ಅವರು ಕತೆಗಳಲ್ಲಿ ಎತ್ತಿ ಹಿಡಿದು, ಪ್ರಶ್ನಿಸಿದ್ದಾರೆ. ಮಾನವೀಯತೆಯ ಕಳಚುವಿಕೆ, ಅಜ್ಞಾನ, ಮೂಢನಂಬಿಕೆ ಚರಿತ್ರೆಯ ಅಪರಾಧಗಳು ಅದನ್ನು ಸಡಿಲಿಸುವ ಪ್ರಯತ್ನ ಇವರ ಬರವಣಿಗೆಯ ಆಶಯವಾಗಿದೆ.

ಪ್ರಗತಿಶೀಲ ಘಟ್ಟದಲ್ಲಾಗಲೇ ಸ್ತ್ರೀ ಶಿಕ್ಷಣ, ಉದ್ಯೋಗದ ಅನಿವಾರ್ಯತೆಯನ್ನು ಧ್ವನಿಸಿದ್ದಾರೆ. ನವ್ಯ ಪರಂಪರೆಯಲ್ಲಿ ವಿಜಯಾ ದಬ್ಬೆ, ಹೆಚ್.ಎಸ್. ಶ್ರೀಮತಿ ಮಲ್ಲಿಕಾ ಘಂಟಿ,

ಎಂ.ಆರ್.ಕಮಲ, ಬಿ.ಎಸ್. ಸುಮಿತ್ರಾಬಾಯಿ, ಹೆಚ್.ಎಲ್. ಪುಷ್ಪಾ, ಲಲಿತಾ ಸಿದ್ಧಬಸವಯ್ಯ, ಸ್ತ್ರೀವಾದಿ ಲೇಖಕಿಯರನ್ನು ಗುರುತಿಸಬಹುದಾಗಿದೆ.

ರೂಢಿಗತವಾಗಿ ಬಂದ ಮಾದರಿಗಳು ಹೊರಳು ಮಾರ್ಗವನ್ನು ಹಿಡಿದು ಆಧುನಿಕ ಸಾಹಿತ್ಯ ಪಾಶ್ಚಾತ್ಯೀಕರಣದ ಪ್ರಭಾವವನ್ನು ಸ್ವೀಕರಿಸಿದರು. ಜಾನಪದ ಮಹಿಳೆಯರಿಗೆ ಕಾವ್ಯ ವಸ್ತು ಒಂದು ಸಮಸ್ಯೆಯೇ ಆಗಿರಲಿಲ್ಲ. ಆಧುನಿಕ ಸಾಹಿತಿಗೆ, ವಸ್ತುವಿನ ಆಯ್ಕೆ, ತರ್ಕಬದ್ಧ ಅಥವಾ ನೈತಿಕ ಸಾಮಾಜಿಕ ಜವಾಬ್ದಾರಿಯೇ ಆಗಿರುತ್ತದೆ. ಹೀಗಾಗಿ ಆಧುನಿಕ ಸಾಹಿತ್ಯ ವಸ್ತುನಿಷ್ಠ ಪ್ರಾಧಾನ್ಯತೆ ಪಡೆದಿದೆ. ಸಾಮಾಜಿಕ ಪ್ರಜ್ಞೆ ಹೊಂದಿರದ ಸಾಹಿತ್ಯ ಮಹತ್ತರವಾದ ಏನನ್ನೂ ಹೇಳಲಾರದು. ಸ್ತ್ರೀ ಭಾಷೆ ಅವಳು ಮುಚ್ಚಿಡ ಬಯಸುವಂತಹ ಎಲ್ಲವನ್ನೂ ಬೆಳಕಿಗೆ ತರುತ್ತದೆ. ಜಾನಪದ ಮಹಿಳೆಗೆ ವ್ಯಂಗ್ಯ ತರ್ಕ ತಿಳಿದಿರಲಿಲ್ಲ. ತಾನು ಕಂಡ ಬದುಕನ್ನು ಯಥಾವತ್ತಾಗಿ ವಿವರಿಸಿದಳು. ಆಧುನಿಕ ಮಹಿಳೆ, ಅಮೂರ್ತವಾದ ವಸ್ತು, ಚಿಂತನೆಗಳನ್ನು ವಿಸ್ತರಿಸುವ ವೈಚಾರಿಕ ಪ್ರಜ್ಞೆ ಹೊಂದಿದ್ದಾಳೆ.

ಮಹಿಳಾ ಸಾಹಿತ್ಯ, ಕಾವ್ಯಾತ್ಮಕತೆಯ ಜೊತೆಗೆ ತೀವ್ರತೆಯನ್ನೂ ಹೊಂದಿದೆ. ಉತ್ತಮ ಸಾಹಿತ್ಯ ಎಂದರೆ, ಅದರ ಬೆಳವಣಿಗೆಯೊಂದಿಗೆ ನಮ್ಮ ಬೆಳವಣಿಗೆಯನ್ನು ಒಳಗೊಂಡಿರುವುದು, ಹೇಮಾ ಪಟ್ಟಣಶೆಟ್ಟಿಯವರ ಈ ಮಾತು ಸಾಹಿತ್ಯ ಕೃಷಿ ಎಂದರೆ 'ಬೌದ್ಧಿಕ ಪ್ರಪಂಚದ ವಿಸ್ತರಣೆ' ಎಂಬ ಅರ್ಥವನ್ನು ಸ್ಪಷ್ಟೀಕರಿಸುತ್ತದೆ. ಅಂತಿಮವಾಗಿ ಸಾಹಿತ್ಯಲೋಕ ವಿವರಣೆಯಾಗುತ್ತಾ, ಮಾನವ ವಿಕಾಸದ ಮಾರ್ಗವೇ ಆಗಿದೆ. ಸ್ತ್ರೀ ಅಭಿವ್ಯಕ್ತಿಯಲ್ಲಿ ಬದುಕಿನ ಹೋರಾಟದೊಂದಿಗೆ, ಅನಂತರದ ಹುಡುಕಾಟವೂ ಇದೆ. "ಆಧುನಿಕ ಸಂದರ್ಭದಲ್ಲಿ ಸ್ತ್ರೀ ಸ್ವಕೇಂದ್ರಿತವಾದವಳು, ಪುರುಷ ನಿರ್ಮಿತಿ ಅಲ್ಲ ' ಎಂದು ಸ್ವಘೋಷಣೆ ಮೂಡಿಸಿದ್ದಾಳೆ, ಸಾಧಿಸಿದ್ದಾಳೆ.

ನಮ್ಮ ಸಮಾಜ ಮಹಿಳಾ ಸಬಲೀಕರಣದ ಬಗ್ಗೆ ಭಾಷಣ ಮಾಡುತ್ತಾ, ಅಂಕಣ ಬರೆಯುತ್ತಾ ಪುಸ್ತಕ ಓದುತ್ತಾ ಇರುತ್ತದೆ. ಮಹಿಳೆಯನ್ನು ದೇವತೆಗೆ ಹೋಲಿಸುತ್ತಾ ಅತ್ಯಾಚಾರ ಎಸಗುತ್ತಿರುವುದು ವಿಪರ್ಯಾಸ. ಪುರಾಣದ ಕತೆಗಳಲ್ಲಿ ಸ್ತ್ರೀ ವೇದನೆ ಹೆಪ್ಪುಗಟ್ಟಿದೆ. ಆ ಕತೆಗಳನ್ನು ಸಂಸ್ಕೃತಿ ಎಂದು ಪ್ರತಿಬಿಂಬಿಸಲಾಗಿದೆ. ಆಧುನಿಕ ಸಂದರ್ಭ, ಪೌರಾಣಿಕ ಮೌಲ್ಯಗಳನ್ನು ಮರುಚಿಂತನೆ ನಡೆಸಿ ಸಾಹಿತ್ಯದ ಪುನರ್ ನಿರ್ಮಾಣ ಕಾರ್ಯ ಕೈಗೆತ್ತಿಕೊಂಡಿದೆ.

ದುರಂತವೆಂದರೆ ಇಂತಹ ಹೊಸ ಮಾದರಿ ಮೌಲ್ಯಗಳು ಜನಜನಿತವಾಗದೇ ಉಳಿದು ಬಿಟ್ಟಿದೆ. ಸಾಮಾನ್ಯ ಮತ್ತು ಮಧ್ಯಮವರ್ಗದ ಕುಟುಂಬಗಳಲ್ಲಿ ನೈತಿಕ ಪಾಠಗಳನ್ನು ಎಳವೆಯಿಂದಲೇ ಹೆಣ್ಣು ಮಕ್ಕಳಿಗೆ ಹೊರಿಸಲಾಗುತ್ತಿದೆ. ಅಂಗಾಂಗಗಳಲ್ಲಿ ಶೀಲವನ್ನು ಕಾಪಾಡಿಕೊಳ್ಳುವುದೇ ಸ್ತ್ರೀ ಕರ್ತವ್ಯ ಎಂಬ ಮಹಾನ್ ಪಾಠವನ್ನು ಎಳವೆಯಿಂದಲೇ ಪರಿಚಯಿಸಲಾಗುತ್ತಿದೆ. ಕ್ರೂರ ಸಮಾಜದಲ್ಲಿ ತಿಹಲ್ಕಾದಂತಹಾ ಪತ್ರಿಕೆಯ ಸಂಪಾದಕ ಉನ್ನತ ವ್ಯಕ್ತಿಗಳೂ ಅತ್ಯಾಚಾರ ಎಸಗುವುದರಲ್ಲಿ ಹೇಸುವುದಿಲ್ಲ. ಶುಶ್ರೂಷಕಿ ಅರುಣಾ ಶಾನಬಾಗ್ ನಲವತ್ತೂ ವರ್ಷಗಳ ಕಾಲ ದುರಂತ ಸ್ಥಿತಿ ಅನುಭವಿಸಿದರೂ ದಯಾಮರಣ ಕೂಡ ದಯಪಾಲಿಸಲಿಲ್ಲ.

ಪ್ರಸ್ತುತ ಸಂದರ್ಭ ನವನಾಗರೀಕತೆ ಉನ್ನತ ಶೃಂಗಕೇರಿದ್ದರೂ ಲಿಂಗ ಅಸಮಾನತೆಯ ಅನಿಷ್ಟ ಸಮಸ್ಯೆ ರೋಗದಂತೆ ಕಾಡುತ್ತಿದೆ. ಸಾಹಿತ್ಯೇತರ ಸವಾಲುಗಳನ್ನು ಸಾಹಿತ್ಯದ ಮೂಲಕ ವಿವರಿಸುವ ಮಹಿಳೆ ತನ್ನ ಅಸ್ತಿತ್ವವಾಗಿ ಪ್ರಯತ್ನಿಸುತ್ತಿದ್ದಾಳೆ. ಮಹಿಳೆಗೆ ಅವಳ ಭಾವನೆಗೆ, ಅಭಿಪ್ರಾಯಗಳಿಗೆ, ಮಾತಿಗೆ, ಶ್ರಮಕ್ಕೆ ಬೆಲೆ ಕೊಡದ ಪುರುಷ, ಹೆಣ್ಣನ್ನು ಮೂಲೆ ಗುಂಪಾಗಿಸಿದ್ದಾನೆ. ಎಲ್ಲಾ ಕಾಲಕ್ಕೂ, ಎಲ್ಲ ದೇಶದಲ್ಲೂ ಶೋಷಿತಳಾದವಳು ಹೆಣ್ಣು, ಹೆಣ್ಣು ಉಪ ಸೃಷ್ಟಿ ಮಾತ್ರ. ಪುರುಷನಿಗಾಗಿ ಸೃಷ್ಟಿಯಾದ ಉಪ ವಸ್ತು ಎಂದು ಕಡೆಗಣಿಸಲ್ಪಟ್ಟಿದ್ದಾಳೆ. 'ಪುರುಷ ಬ್ರೈಡ್ ವಿನ್ನರ್ ಸ್ತ್ರೀ ಬ್ರೈಡ್ ಮೇಕರ್ ಮಾತ್ರ' ಹಬ್ಬ, ಆಚರಣೆ, ಮದುವೆ ಮುಖ್ಯ ಸಂದರ್ಭಗಳಲ್ಲಿ ಉಪವಾಸ ವ್ರತಕ್ಕೆ ಪ್ರಚೋದಿಸಿ ಮೌನಕ್ಕೆ ತಳ್ಳುತ್ತಿದ್ದರು. ಅಸಮಾನತೆಯನ್ನು ಪ್ರಜ್ಞಾಪೂರ್ವಕವಾಗಿ ಆಚರಿಸಲಗಿದೆ. ಮನುಧರ್ಮ ಕಾಲದಿಂದಲೂ ಪುರುಷನ ಆಶ್ರಯದಲ್ಲಿ ಬಂಧಿಸಲ್ಪಟ್ಟಿದ್ದಾಳೆ. ಭ್ರಮಾತ್ಮಕ ಸನ್ನಿವೇಶ ನಿರ್ಮಿಸಿದ್ದಾನೆ. ಈ ತಾರತಮ್ಯ ಪುರುಷ ಸೃಷ್ಟಿಯೇ ಹೊರತು ನಿಸರ್ಗ ಸೃಷ್ಟಿ ಅಲ್ಲ. ಬೇರೆ ಯಾವ ಪ್ರಾಣಿ ಪಕ್ಷಿಗಳೂ ಈ ರೀತಿ ಪ್ರಕೃತಿಯಲ್ಲಿ ವರ್ತಿಸುತಿಲ್ಲ. ಪ್ರಪಂಚದ ಈವರೆಗಿನ ಎಲ್ಲ ವ್ಯಾಖ್ಯಾನಗಳಲ್ಲಿ ಸಿದ್ಧಾಂತಗಳಲ್ಲಿ ಶಾಸ್ತ್ರಗಳಲ್ಲಿ 'ಮಾನವ – ಮನುಷ್ಯ' ಎಂಬ ಹೇಳಿಕೆಗಳೇ ವರ್ಣಿತವಾಗಿದೆ. ಈ ಪದದಲ್ಲೇ ಸ್ತ್ರೀ ಅಗೋಚರವಾಗಿದ್ದಾಳೆ. ಬೈಗುಳಗಳಿಗೆ, ಅಪನಂಬಿಕೆ, ಅಪಶಕುನಗಳಿಗೆ ಹೆಣ್ಣನ್ನು ಕೇಂದ್ರವಾಗಿಸಿಕೊಳ್ಳಲಾಗಿದೆ. ಪುರುಷ ವೀರತ್ವದ, ಸಾಹಸದ, ಬುದ್ಧಿ, ಲಕ್ಷಣಗಳನ್ನು ತಾನು ಧರಿಸಿ, ಲಜ್ಜೆ, ಭಯಭೀತೆ, ಜಾಳುತನ ಹೆಣ್ಣಿಗೆ ಆರೋಪಿಸಿದ್ದಾನೆ. ಇದು ಅದಲು ಬದಲಾದರೆ ದೋಷ ಎಂದಿದ್ದಾರೆ.

ಸ್ತ್ರೀ ಪರಿಕಲ್ಪನಾಧಾರಿತವಾದ ಇತ್ತೀಚೆಗೆ ಒಂದು ದೊಡ್ಡ ಕತೆಯನ್ನೇ ಸೃಷ್ಟಿಸಿದೆ. ಸ್ತ್ರೀ ಪರ ಸೈದ್ಧಾಂತಿಕ ವಾದವನ್ನು ವಿಮರ್ಶಕರು ಪ್ರಯೋಗದಲ್ಲಿ ತೊಡಗಿಸಿಕೊಂಡಿದ್ದಾರೆ. ಸ್ತ್ರೀ ವಾದದ ಪ್ರಕಾರ ಮನುಷ್ಯ 'ದ್ವಿಲಿಂಗಿ' ಸ್ತ್ರೀ – ಪುರುಷ ಲಿಂಗ ತಾರಮ್ಯ ಸಲ್ಲದು. ಪುರುಷನಾದವನು ಹೆಣ್ಣನ್ನು ತನಗಿಂತ ಎಲ್ಲದರಲ್ಲೂ ಕೆಳಗಿನವಳು ಕೀಳಾದವಳು ಎಂದು ಭಾವಿಸಿದ್ದಾನೆ. ಈ ಅಹಂ 85% ರಷ್ಟು ಪುರುಷರಲ್ಲಿ, ವಿದ್ಯಾವಂತ ಪುರುಷರಲ್ಲೂ ಅಡಗಿರುತ್ತದೆ. ಬಲಕ್ಕಿಂತ ಮನೋಬಲ ಮುಖ್ಯವೆಂದು ಅವರು ಭಾವಿಸಿಲ್ಲ.

ಸಿಮೋನ್ ದ ಬೋವಾ

ಸ್ತ್ರೀವಾದದ ಆದಿ ಚಿಂತಕಿಯರಲ್ಲಿ ಮುಖ್ಯವಾಗಿ ಗಮನಿಸಲೇಬೇಕಾದ ಹೆಸರು ಸಿಮೋನ್ ದ ಬೋವಾ. ಆಕೆ ರಚಿಸಿದ ಕೃತಿಯು ಸ್ತ್ರೀವಾದಿ ವಿಶ್ಲೇಷಣೆಯಲ್ಲೇ ಗಮನಾರ್ಹವಾದುದು. ಈ ಕೃತಿಯಲ್ಲಿ ಆಕೆ ಪ್ರತಿಪಾದಿಸಿದ ಅನೇಕ ವಿಚಾರಗಳು ಮುಂದಿನ ಅನೇಕ ಸ್ತ್ರೀವಾದಿ ವಿಚಾರಗಳ ಹುಟ್ಟಿಗೆ ಪ್ರೇರಣೆ ನೀಡಿವೆ. 'ಮಹಿಳೆ ಎನ್ನುವುದು ಜೀವಶಾಸ್ತ್ರೀಯ ಘಟಕ, ನಿವಾರಿಸಲು ಸಾಧ್ಯವಿಲ್ಲದ ಒಂದು ಜೈವಿಕ ವಾಸ್ತವಾಂಶ – ಅದು ಚಾರಿತ್ರಿಕ ಅಂಶವಲ್ಲ. ಈ ವಾಸ್ತವದಿಂದಾಗಿ ಹಿಂದಿನ ಯಾವ ಚಾರಿತ್ರಿಕ ಘಟ್ಟದಲ್ಲೂ ಅರಿವಿಗೆ ಬರದಿದ್ದ ವಿಶಿಷ್ಟ ರೀತಿಯ ದಬ್ಬಾಳಿಕೆಗೆ ಆಕೆ ಒಳಗಾಗುತ್ತಾಳೆ. ಭಿನ್ನವಾದ ಭೂತಕಾಲವಿಲ್ಲದ ಮೇಲೆ ಭವಿಷ್ಯತಾನೆ ಹೇಗೆ ಭಿನ್ನವಾಗಲು ಸಾಧ್ಯ? ಎನ್ನುವ ಬೋವಾ 'ಶರೀರವೇ ವಿಧಿ' ಎಂಬುದನ್ನು ಪ್ರತಿಪಾದಿಸಿದಳು.

ಸಿಮೋನ್ ದ ಬೋವಾ ಚಾರಿತ್ರಿಕ ಭೌತಿಕವಾದ, ಮನೋವಿಶ್ಲೇಷಣೆ ಮತ್ತು ಅಸ್ತಿತ್ವದ ಆಧಾರದ ಮೇಲೆ ಮಹಿಳೆಯರ ಮೇಲಾಗುತ್ತಿರುವ ಶೋಷಣೆಯ ಸಿದ್ಧಾಂತವನ್ನು ನಿರ್ಮಿಸಲು ಪ್ರಯತ್ನಿಸುತ್ತಾಳೆ. " ಚಂಚಲತೆ ಮಹಿಳೆಯ ವ್ಯಕ್ತಿತ್ವದ ಮುಖ್ಯ ಸ್ವಭಾವವಾಗಿದೆ. ಆದ್ದರಿಂದ ಆಕೆ ಸಾಮಾನ್ಯವಾಗಿ ಶೀಘ್ರ ಕೋಪಿಯೂ ಧೈರ್ಯಹೀನಳೂ ಆಗಿ ವರ್ತಿಸುತ್ತಾಳೆ. ಮಹಿಳೆಯ ಜೈವಿಕ ವಿಶಿಷ್ಟತೆ ಅವಳ ಬದುಕಿನಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಮಹಿಳೆ ತನ್ನ ಬದುಕಿನಲ್ಲಿ ಪಡೆಯುವ ಸ್ಥಾನಮಾನ ಅವಳಲ್ಲಿ ಆಂತರಂಗಿಕವಾಗಿರುವ ಜೈವಿಕ ಅಂಶದ ಪಾತ್ರಕ್ಕೆ ಅನುಸಾರವಾಗಿಯೇ ಇರುತ್ತದೆ ಎನ್ನುವುದು ಸಿಮೋನ್‌ಳ ಅಭಿಪ್ರಾಯ. ಆದರೂ ಮಹಿಳೆಯ ಸ್ಥಾನಮಾನ ಕುರಿತಂತೆ ಅವಳ ಶಾರೀರಕ ಅಂಶವೇ ಏಕೈಕ ನಿರ್ಣಾಯಕ ಅಂಶವೆಂದು ಬೋನಾ ಹೇಳುವುದಿಲ್ಲ. ಅವಳದು ತಾತ್ವಿಕ, ಆರ್ಥಿಕ, ಸಾಮಾಜಿಕ ಹಾಗೂ ಮನೋವೈಜ್ಞಾನಿಕ ಸಂಗತಿಗಳ

ಬೆಳಕಿನಲ್ಲಿ ಜೈವಿಕ ಅಂಶಗಳನ್ನು ಪರೀಕ್ಷಿಸುವ ಒಂದು ಪ್ರಯತ್ನವಾಗಿದೆ. ಮಹಿಳೆಯ ಸ್ಥಾನಮಾನವು ಈ ಎಲ್ಲಾ ಅಂಶಗಳ ಪರಸ್ಪರ ಕ್ರಿಯೆಯಿಂದ ಮಾತ್ರ ಆಗಿದೆಯೆಂಬುದನ್ನು ಚರಿತ್ರೆಯುದ್ಧಕ್ಕೂ ಕಾಣಬಹುದಾಗಿದೆ. ಹಾಗೆಯೇ ದ ಬೋವಾ ನೀಡುವ ಕೆಲವು ಉದಾಹರಣೆಗಳು ಕುತೂಹಲಕಾರಿಯಾದವು ' ಮನೆಗೆಲಸ ಮಹಿಳೆಯರ ಪಾಲಿಗೆ ಮೀಸಲಾಗಿರಲು ಕಾರಣವೇನೆಂದರೆ, ಅದಕ್ಕೆ ತಾಯ್ತನದ ತಾಳ್ಮೆ, ಕಾಳಜಿ ಮತ್ತು ಜಾಗರೂಕತೆಯ ಅವಶ್ಯಕತೆಯಿರುತ್ತದೆ. ಮನೆಗೆಲಸದ ಅವಶ್ಯಕತೆಗೂ ಅವಳ ಜೈವಿಕ ವಿಶಿಷ್ಟತೆಗೂ ಹೊಂದಾಣಿಕೆಯಾಯಿತು " ಭೋವಾ ಒತ್ತಿ ಹೇಳುವ ಮಹಿಳೆಯ ಜೈವಿಕ ವಿಶಿಷ್ಠತೆಗಳು ಸದಾಕಾಲಕ್ಕೂ ಅವಳನ್ನು ಮನೆಗೆಲಸಗಳಿಗೆ ಗಂಟು ಹಾಕಬೇಕೆಂಬ ಮಾತು ಒಪ್ಪಲಾಗುವುದಿಲ್ಲ.

ಮಹಿಳೆಯರ ಸ್ಥಾನಮಾನ ನಿರ್ಧರಿಸುವಲ್ಲಿ ತಾಯ್ತನದ ಅಂಶವನ್ನು ಕುರಿತು ಸಿಮೋನ್ ದ ಬೋವಾ ಹೇಳುವ ಮಾತುಗಳು ಸ್ತ್ರೀವಾದಕ್ಕೆ ಹೆಚ್ಚು ಉಪಯುಕ್ತವಾದವು. ಪುರುಷ ಒಂದು ವೈಜ್ಞಾನಿಕ ತತ್ವದ ಶೋಧನೆಯಿಂದ ಅಥವಾ ಒಂದು ಅನುಕರಣೆಯ ಹೊಸ ನಿರ್ಮಾಣದಿಂದ ಪಡೆಯುವಂಥ ತೃಪ್ತಿಯನ್ನು ಮಹಿಳೆ ಮಕ್ಕಳನ್ನು ಹೆರುವ ಮೂಲಕ ಪಡೆಯಬಲ್ಲಳು ಎಂಬ ಕೆಲವರ ವಾದಕ್ಕೆ ಪ್ರತಿಯಾಗಿ ಬೋನಾಳ ವಾದ ಹೀಗಿದೆ. ಮಗುವನ್ನು ಹೆರುವುದು ಮತ್ತು ಅದಕ್ಕೆ ಮೊಲೆಯುಣಿಸುವುದು, ಇವು ಸಾಮಾಜಿಕ ಚಟುವಟಿಕೆಗಳಲ್ಲಿ, ಬದಲಿಗೆ ಅವು ನಿಸರ್ಗ ಸಹಜ ವಿದ್ಯಾಮಾನವಾಗಿದೆ. ಏಕೆಂದರೆ ಈ ವಿದ್ಯಾಮಾನಗಳ ಹಿಂದೇ ಯಾವುದೇ ಯೋಜನೆಗಳಿರುವುದಿಲ್ಲ. ಆದ್ದರಿಂದ ಈ ವಿದ್ಯಮಾನಗಳ ಸಕ್ರಿಯ ಅಂಗವಾಗಿ ಮಹಿಳೆ ತೊಡಗಿದರೂ ಅವು ಮಹಿಳೆಯ ಅಸ್ತಿತ್ವಕ್ಕೆ ಸಾಮಾಜಿಕವಾಗಿ ಉನ್ನತ ಸ್ಥಾನ ದೊರಕಿಸಿಕೊಡುವ ಸಾಧ್ಯತೆಗಳಿಲ್ಲ.

ಮಾನವನ ಸ್ವಭಾವದಲ್ಲಿ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬ ಅದಕ್ಕೆ ಒಡೆಯನಾಗಬೇಕೆಂಬ ಬಯಕೆಯನ್ನು ಗುರುತಿಸುವ ಬೋವಾ ಅದನ್ನೊಂದು ಮೂಲಪ್ರವೃತ್ತಿ ಎಂದು ಪರಿಗಣಿಸುತ್ತಾಳೆ ಸಿಮೋನ್ ಬೋವಾಳ ವಿಚಾರ ಸರಣಿಯಲ್ಲಿ ಎಲ್ಲೋ ಒಂದೆಡೆ ವೈರುಧ್ಯವಿದೆ. ಅವಳು ಹೇಳುವಂತೆ ಸಾಮ್ರಾಜ್ಯಶಾಹಿ ಪ್ರಜ್ಞೆಯೆನ್ನುವುದು ಪುರುಷರು ಬದುಕುವ ಸಾಮಾಜಿಕ, ಆರ್ಥಿಕ ಪರಿಸರದಿಂದ ಸ್ವಂತವಾಗಿ ಮನುಷ್ಯನಲ್ಲಿ ಅಂತರ್ಗತವಾಗಿದ್ದರೆ, ಅವನ ಸ್ವಭಾವವನ್ನು ನಿರ್ಧರಿಸುವಲ್ಲಿ ಸಾಮಾಜಿಕ ವ್ಯವಸ್ಥೆ ಯಾವ ಪಾತ್ರವನ್ನು ವಹಿಸುವುದಿಲ್ಲ

ಎಂದಾಗುತ್ತದೆ. ಆದರೆ ನಿಜವಾದ ವಿಮೋಚನೆ ಸಾಧ್ಯವಾಗಬೇಕಾದರೆ, ಶೋಷಣೆಗೆ ಅವಕಾಶ ಮಾಡಿಕೊಂಡು."ಭೌತ" ವ್ಯವಸ್ಥೆಯ ಮೂಲೋತ್ಪಾಟನೆಯಾಗಬೇಕು ಎಂದು ಹೇಳುವ ಬೋವಾ ತಾನೇ ಪ್ರತಿವಾದಿಸುವ ಪುರುಷ ವಿಶಿಷ್ಟ ಪ್ರಜ್ಞೆಯ ಸಿದ್ಧಾಂತವನ್ನು ವಿರೋಧಿಸುತ್ತಾಳೆ.

ವರ್ಜೀನಿಯಾ ವುಲ್ಫ್

ವರ್ಜೀನಿಯಾ ವುಲ್ಫಳ ಬರವಣಿಗೆಯ ಮುಖ್ಯ ಕೇಂದ್ರ " ಮಹಿಳೆ" ಅವಳು ತನ್ನ ಬರವಣಿಗೆಗಳಲ್ಲೂ ಹಲವು ರೀತಿಯ ರಾಜಕೀಯ ಟೀಟಿಕೆಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಮುಂದಿಡುತ್ತಾಳೆ. "ತಾಯಿಯರಿಗೆ ವೇತನ' ವೆಂಬ ಹೊಸರೀತಿಯ ಹಕ್ಕೊತ್ತಾಯ, ವಿವಾಹ ವಿಚ್ಛೇದನದ ಕಾನೂನಿನಲ್ಲಿ ಸುಧಾರಣೆ, ವಿದ್ಯಾಭ್ಯಾಸ ಮತ್ತು ಇಚ್ಛಿಸುವ ಉದ್ಯೋಗದ ಆಯ್ಕೆಗಾಗಿ ಮಹಿಳೆಯರ ಹಕ್ಕುಗಳ ಸಮರ್ಥನೆ ಮುಂತಾದವು ಕಾಡುವ ಸಂಗತಿಗಳು, ಅಧ್ಯಯನದ ಶಿಸ್ತುಗಳಲ್ಲಿ ಉದಾಹರಣೆಗೆ ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರಿಗೆ ಸಂಬಂಧಪಟ್ಟಂತೆ ಬದಲಾವಣೆಗಳಾಗಬೇಕು. ಮಹಿಳೆಯರಿಗೆ ಪತ್ರಿಕೆ, ಮಹಿಳಾ ಕಾಲೇಜು, ಮಹಿಳೆಯರ ರಾಜಕೀಯ ಪಕ್ಷ ಮತ್ತು ಮಹಿಳೆಯರಿಗೆ ಕನಿಷ್ಠ ಕೂಲಿ ಮತ್ತು ಪಿಂಚಣಿ ಬೇಕು ಎಂಬುದು ಅವಳು ಎತ್ತುವ ಪ್ರಶ್ನೆಗಳು.

ವುಲ್ಫ್ ಸ್ತ್ರೀವಾದಕ್ಕೆ ನೀಡಿರುವ ಗಮನಾರ್ಹ ಕೊಡುಗೆಯೆಂದರೆ, ಲಿಂಗ ಪ್ರಭೇದವು ಸಮಾಜದಲ್ಲಿ ಸಾಂಸ್ಕೃತಿಕವಾಗಿ ರೂಪಿಸಿದ ಅಂಶವಾಗಿದೆ. ಅದನ್ನು ಪ್ರಶ್ನಿಸಬಹುದು. ಬದಲಾಯಿಸಿಬಹುದು ಎಂಬುದು ಲಿಂಗ ತಾರತಮ್ಯವು ಪಿತೃಪ್ರಧಾನ ಕುಟುಂಬಗಳಲ್ಲಿ ಬಹುಬೇಗ ಆರಂಭವಾಗುತ್ತದೆ. ಅವಳ ಬಹು ಜನಪ್ರಿಯ ಕೃತಿ ಎ ರೋಮ್ ಆನ್ ಒನ್ಸ್ ವೋನ್ ನಲ್ಲಿ ವುಲ್ಫ್ ಪುರುಷರು ಹೇಗೆ ಸಾಮಾಜಿಕವಾಗಿ ಮತ್ತು ಮಾನಸಿಕವಾಗಿ ಮಹಿಳೆಯರ ಮೇಲೆ ಆಧಿಪತ್ಯ ಸ್ಥಾಪಿಸುತ್ತಾರೆ ಎಂಬುದನ್ನು ವಿವರಿಸುತ್ತಾಳೆ. ಮಹಿಳೆಯರು ' ಕನ್ನಡಕ' ವಿದ್ದಂತೆ, ಪುರುಷರು ಮಹಿಳೆಯರನ್ನು 'ಬೇರೆ ' ಯವರಂತೆ ಭಾವಿಸುತ್ತಾರೆ ಮತ್ತು ಪುರುಷರು ತಮ್ಮನ್ನು ಹೇಗೆ ಕಾಣಬೇಕೆಂದು ಬಯಸುತ್ತಾರೋ, ಆ ರೀತಿ ಪ್ರತಿಬಿಂಬಿಸುತ್ತಾರೆ ಎ.ರೋಮ್ ಆಫ್ ಒನ್ಸ್ ವೋನ್ ನಲ್ಲಿ ಮಹಿಳೆಯರು ಹೇಗೆ ತಮಗೆ ತಾವೆ ಬಲಿಪಶುಗಳಾಗುತ್ತಾರೆ ಮತ್ತು ಪುರುಷನಿಗೆ ಕನ್ನಡಿಗಳಾಗಿ ಸಮಾಜವನ್ನು ಮತ್ತೆ ನಿಲ್ಲಿಸುತ್ತಾರೆ. ಮಹಿಳೆಯರ ಕೌಟುಂಬಿಕ, ಭೌತಿಕ ಮತ್ತು ಸೈದ್ಧಾಂತಿಕ ಆಧಿಪತ್ಯವಾಗಿದೆ ಎಂಬುದನ್ನು ಸೂಚಿಸಲಾಗಿದೆ.

ಅಧ್ಯಾಯ –3
ಕನ್ನಡ ಮಹಿಳಾ ಕತೆಗಾರ್ತಿಯರ ಒಂದು ಪಕ್ಷಿನೋಟ

ಅಧ್ಯಾಯ-3

ಕನ್ನಡ ಮಹಿಳಾ ಕತೆಗಾರ್ತಿಯರ ಒಂದು ಪಕ್ಷಿನೋಟ

ಕನ್ನಡ ಸಾಹಿತ್ಯದುದ್ದಕ್ಕೂ ಕಣ್ಣು ಹಾಯಿಸಿದಾಗ ಹನ್ನೆರಡನೆಯ ಶತಮಾನದಷ್ಟು ಹಿಂದಿನಿಂದಲೇ ಮಹಿಳೆಯರು ಸಾಹಿತ್ಯ ರಚನೆಯಲ್ಲಿ ತೊಡಗಿದ್ದುದು ಕಂಡು ಬರುತ್ತದೆ. ಇತ್ತೀಚಿನ ವರ್ಷಗಳಲ್ಲಿಯೂ ಮಹಿಳಾ ಸಾಹಿತ್ಯ ನಿಂತ ನೀರಾಗಿಲ್ಲ. ಅದು ಸಮೃದ್ಧವೂ, ವೈವಿಧ್ಯ ಪೂರ್ಣವೂ ಆಗಿದೆಯಲ್ಲದೆ ಪರಿಮಿತಿಗಳ ಕೊರತೆಯನ್ನು ದಾಟಿ ಬೆಳೆದಿದೆ. ಈ ಸಾಧನೆಯ ಹಿಂದೆ ನಿರಂತರ ಪರಿಶ್ರಮವಿದೆ.

ಕನ್ನಡ ಸಾಹಿತ್ಯಕ್ಕೆ 1500 ವರ್ಷಗಳಿಗೂ ಮೀರಿದ ಅವಿಚ್ಛಿನ್ನ ಇತಿಹಾಸವಿದೆ. ಕನ್ನಡ ಸಾಹಿತ್ಯ ಪರಂಪರೆಯ ಸಮೃದ್ಧಿಗೆ ಲೇಖಕಿಯರ ಕೊಡುಗೆಯೂ ಇದೆ. ಭಾರತೀಯ ಪರಂಪರೆಯಲ್ಲಿ ಕಥೆಗೆ ನಾಟಕಕ್ಕಿಂತ ದೈವೀ ನೆಲೆಯನ್ನು ಕಲ್ಪಿಸಲಾಗಿದೆ. ಹೀಗಿದ್ದರೂ ಒಂದು ಗಂಭೀರ ಸಾಹಿತ್ಯ ಪ್ರಕಾರವೆಂದು ಕಥೆ ಕನ್ನಡದಲ್ಲಿ ನೆಲೆಗೊಂಡಿದ್ದು, ಇಪ್ಪತ್ತನೆಯ ಶತಮಾನದಲ್ಲಿಯೇ ಎನ್ನುವುದು ನಿರ್ವಿವಾದ ಸಂಗತಿಯಾಗಿದೆ.

'ಹೆಣ್ಣಿನ ಒಡಲು ಕಥೆಗಳ ಕಡಲು' ಎನ್ನುವ ಉಕ್ತಿಯೊಂದಿದೆ, ಸ್ವಭಾವತ: ಸಹಜವಾಗಿ ಮಹಿಳೆ ಮಕ್ಕಳಿಗೆ ಕಥೆ ಹೇಳುವುದನ್ನು ರೂಢಿಸಿಕೊಂಡು ಬಂದಿದ್ದಾಳೆ. ಹೀಗಾಗಿ ಹೊಸಗನ್ನಡ ಸಣ್ಣ ಕಥೆಯ ಪ್ರಕಾರ ಬಹುಬೇಗನೆ ಅವಳನ್ನು ಆಕರ್ಷಿಸಿತು. ಮಹಿಳೆಯಲ್ಲಿ ಸೀಮಿತವಾಗಿ ಹೇಳುವುದಾದರೆ ಸಣ್ಣ ಕಥೆಯು ಪ್ರಾರಂಭವಾದದ್ದು, ಈ ಶತಮಾನದ ಮೂರನೆಯ ದಶಕದಲ್ಲಿ. ಉತ್ತರ ಕರ್ನಾಟಕದಲ್ಲಿ ಶ್ಯಾಮಲಾದೇವಿ ಬೆಳಗಾಂಕರ, ಕೊಡಗಿನ ಗೌರಮ್ಮ ಹಾಗೂ ದಕ್ಷಿಣ ಕನ್ನಡದ ಸರಸ್ವತಿಬಾಯಿ ರಾಜವಾಡೆ ಇವರನ್ನು ಮಹಿಳಾ ಸಣ್ಣ ಕಥೆಯ ಆದ್ಯರು ಎಂದು ಗುರುತಿಸಲಾಗುತ್ತದೆ. ಕಳೆದ ಆರು ದಶಕಗಳಲ್ಲಿ ಮಹಿಳಾ ಕಥಾ ಸಾಹಿತ್ಯಕ್ಕೂ ಒಂದು ಪರಂಪರೆ ನಿರ್ಮಿತವಾಗಿದೆ. ಈ ಕಥಾ ಸಾಹಿತ್ಯದ ಅವಲೋಕನವನ್ನು ಹೀಗೆ ವಿಭಾಗಿಸಿಕೊಳ್ಳಬಹುದು.

1900 – 1950 ರ ಅವಧಿಯಲ್ಲಿನ ಲೇಖಕಿಯರು ಮೊದಲ ತಲೆಮಾರಿನವರು ಎಂದು ಗುರುತಿಸಿಕೊಂಡರೆ, 1950–70ರ ಅವಧಿಯಲ್ಲಿ ಬರೆಯುತ್ತಿದ್ದ ಲೇಖಕಿಯರು ಎರಡನೇ

ತಲೆಮಾರಿನವರು ಎಂದು ಗುರುತಿಸಿಕೊಳ್ಳಬಹುದು. ಇನ್ನು 1970 ರಿಂದ ಇತ್ತೀಚಿನ ಲೇಖಕಿಯರನ್ನು ಮೂರನೇ ತಲೆಮಾರಿನವರೆಂದು ಸ್ಥೂಲವಾಗಿ ಗುರುತಿಸಿಕೊಳ್ಳಬಹುದು.

ಮೊದಲ ತಲೆಮಾರಿನ ಸ್ವಾತಂತ್ರ್ಯ ಪೂರ್ವದ ಬರಹಗಾರ್ತಿಯರಲ್ಲಿ ಅದರಲ್ಲೂ ಕತೆಗಾರ್ತಿಯರಲ್ಲಿ ದಿ. ಕೊಡಗಿನ ಗೌರಮ್ಮನವರ ಹೆಸರು ಎದ್ದು ಕಾಣುವಂಥದ್ದು 1921 ರಿಂದಲೇ ಗೌರಮ್ಮನವರು ಕಥೆಗಳನ್ನು ಬರೆಯಲು ಪ್ರಾರಂಭಿಸಿದರು. 'ಕಂಬನಿ' 'ಚಿಗುರು' ಇವು ಅವರ ಕಥಾ ಸಂಕಲನಗಳು, ಗೌರಮ್ಮನವರು ತಮ್ಮ ಕಥೆಗಳಲ್ಲಿ ದಾಂಪತ್ಯ ಜೀವನದ ಸುಖ – ದು:ಖಗಳನ್ನು ಸ್ತ್ರೀಯ ಕೋಮಲವಾದ ಭಾವನೆಗಳನ್ನು ನವಿರಾಗಿ, ಸರಳವಾಗಿ ಬಿಡಿಸಿದ್ದಾರೆ . ಇವರು ಒಳ್ಳೆಯ ಕತೆಗಾರ್ತಿ ಎಂದು ತಮ್ಮ ಬರವಣಿಗೆಯೆ ಪ್ರಾರಂಭದ ಹಂತದಲ್ಲಿಯೇ ಹೆಸರು ಗಳಿಸಿದ್ದರು.

ಗೌರಮ್ಮನವರ ನಂತರದಲ್ಲಿ ಕಂಡು ಬರುವ ಶ್ರೀಮತಿ ಜಯಲಕ್ಷ್ಮೀ ಶ್ರೀನಿವಾಸನ್ ಅವರ 'ಮೊಗ್ಗು' ಎಂಬ ಕಥಾ ಸಂಕಲನ ಸರಸ್ವತಿ ಬಾಯಿ ರಾಜವಾಡೆಯವರ 'ಆಹುತಿ ಇತ್ಯಾದಿ ಕತೆಗಳು', 'ಕದಂಬ' ' ಪ್ರೇಮವಿವಾಹ' ಸಂಬಂಧ ಕಥಾ ಸಂಕಲನ ಶಾಂತಾದೇವಿ ಮಾಳವಾಡರವರ 'ಮೊಗ್ಗೆಯ ಮಾಲೆ' ಕಥಾ ಸಂಕಲನವನ್ನು ಹಾಗೆಯೇ ಮತ್ತೊಬ್ಬ ಲೇಖಕಿ ವಾಣಿಯವರ 'ಕಸ್ತೂರಿ' ಎಂಬ ಕಥಾ ಸಂಕಲನ ಮತ್ತೊಬ್ಬ ಲೇಖಕಿ ವಾಣಿಯವರ 'ಕಸ್ತೂರಿ' ಎಂಬ ಕಥಾ ಸಂಕಲನ ಇನ್ನೂ ಅನೇಕ ಲೇಖಕಿಯರ ಕಥೆಗಳನ್ನು ನಾವು ಮೊದಲನೆಯ ತಲೆಮಾರಿನಲ್ಲಿ ಗುರುತಿಸಬಹುದಾಗಿದೆ.

ಹೀಗೆ ಮೊದಲನೆಯ ಪೀಳಿಗೆಯಲ್ಲಿ ಪ್ರಮುಖವಾಗಿ ಎದ್ದು ಕಾಣುವ ಕೊಡಗಿನ ಗೌರಮ್ಮ , ಜಯಲಕ್ಷ್ಮಿ, ಸರಸ್ವತಿ ಬಾಯಿ ರಾಜವಾಡೆ, ಶ್ಯಾಮಲದೇವಿ, ಮಾಳವಾಡ ಮೊದಲಾದ ಲೇಖಕಿಯರು ಎದುರಿಸಿದ ಮುಖ್ಯ ಪ್ರಶ್ನೆಯ ಸ್ವರೂಪ ಸಾಮಾಜಿಕವಾದದ್ದು, ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀ ಒಬ್ಬ ವ್ಯಕ್ತಿಯಾಗಿ ಗುರುತಿಸಲ್ಪಡದೆ, ಪುಟ್ಟ ವಿಧವೆ, ವೇಶ್ಯೆ ಹೀಗೆ ಪುರುಷ ಸಂಬಂಧದಲ್ಲಿಯೇ ಗುರುತಿಸಲ್ಪಟ್ಟದ್ದರಿಂದ ಅವಳಿಗೆ ಸ್ವತಂತ್ರವಾದ ಅಸ್ತಿತ್ವವಾಗಲಿ, ಅದರ ಪರಿಕಲ್ಪನೆಯಾಗಲೀ ಇರಲಿಲ್ಲ. ಇವರ ಕಥೆಗಳಲ್ಲಿ ಬರುವ ಸ್ತ್ರೀ ಪ್ರತಿಮೆಗಳಲ್ಲಿ ಈ ವ್ಯವಸ್ಥೆಯ ಸಂಕೇತಗಳಾಗಿ ಬರುತ್ತವೆ. ಈ ಸಂಕೇತಗಳನ್ನು ಭಾಷೆಯಲ್ಲಿ ಸೃಷ್ಟಿಸುವ ಕೃತಿಯ ಸ್ವರೂಪವೇ

ಮೂಲತಃ ಪ್ರತಿಭಟನಾತ್ಮಕವಾದದ್ದು, ಇವು ಸಮಾಜದಲ್ಲಿ ಕಂಡು ಅನುಭವಿಸಿದ ಚಿತ್ರಗಳನ್ನು ಈ ಲೇಖಕಿಯರು ಕೊಡುತ್ತಿದ್ದುದ್ದರಿಂದ ವಾಸ್ತವ ಮಾರ್ಗದ ಅನುಕರಣೆ ಅವರಿಗೆ ಅವಶ್ಯಕವೆನಿಸಿತು. ಮಾಧ್ಯಮಗಳ ಸಾಧ್ಯತೆಗಳ ಬಗ್ಗೆ ಅವರು ವಿಶೇಷತೆ ಸಾಧಿಸಿದ ಉದಾಹರಣೆಗಳು ಸಹ ಕಡಿಮೆ ಎಂದೇ ಹೇಳಬಹುದು.

ಎರಡನೆಯ ತಲೆಮಾರಿನವರು ಎಂದು ಗುರುತಿಸಿಕೊಳ್ಳುವ ಲೇಖಕಿಯರು ಆ ಅವಧಿಗಾಗಲೇ ಆಧುನಿಕ ಶಿಕ್ಷಣ ಪಡೆದ ಮಹಿಳೆಯರಾಗಿದ್ದು, ಆ ಮೂಲಕ ಬದುಕಿನಲ್ಲಿ ಉಂಟಾದ ಸಂಕೀರ್ಣತೆಯ ಕಡೆಗೆ ಗಮನ ಹರಿಸಿದ್ದರು. ಈ ಪೀಳಿಗೆಯ ಲೇಖಕಿಯರಲ್ಲಿ ತ್ರಿವೇಣಿ ಅತ್ಯಂತ ಪ್ರಮುಖರು ಹೆಂಡತಿಯ ಹೆಸರು, 'ಸಮಸ್ಯೆಯ ಮಗು' ಇವರ ಮಹತ್ವದ ಕಥಾ ಸಂಕಲನಗಳಾಗಿವೆ. ಮತ್ತೊಬ್ಬ ಪ್ರಮುಖ ಲೇಖಕಿಯೆಂದರೆ ಅನುಪಮಾ ನಿರಂಜನ, ಇವರ ಪ್ರಸಿದ್ಧ ಕಥಾ ಸಂಕಲನಗಳೆಂದರೆ 'ಕಣ್ಮಣಿ' 'ರೂವಾರಿಯ ಲಕ್ಷ್ಮಿ' ನೀರಿಗೆ ನೈದಿಲೆ ಶೃಂಗಾರ' 'ಏಳು ಸುತ್ತಿನ ಮಲ್ಲಿಗೆ' ಇತ್ಯಾದಿ ಗೀತಾ ಕುಲಕುರ್ಣಿ, ಆರ್ಯಾಂಭ ಪಟ್ಟಾಭಿ ಮೊದಲಾದ ಕತೆಗಾರ್ತಿಯರನ್ನು ಈ ತಲೆಮಾರಿನಲ್ಲಿಯೇ ಕಾಣಬಹುದಾಗಿದೆ.

ಈ ಪೀಳಿಗೆಯಲ್ಲಿ ಕಂಡು ಬರುವ ಮಹಿಳೆಯರಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಇರದೇ ಹೋದರು, ಅವರಲ್ಲಿ ತಮ್ಮ ಅರಿವು ಜಾಗೃತವಾಗಿದ್ದುದರಿಂದ ವ್ಯವಸ್ಥೆಯೆ ವಿರುದ್ಧ ಧ್ವನಿ ಎತ್ತುವುದು, ಪ್ರತಿಭಟನೆಯನ್ನು ಕೃತಿಗಿಳಿಸುವುದು ಅವಶ್ಯವೆನ್ನಿಸಿತು. ಈ ಕಾಲಘಟ್ಟದ ಪ್ರಮುಖ ಲೇಖಕಿಯರಾದ ಅನುಪಮಾ ನಿರಂಜನ, ತ್ರಿವೇಣಿಯವರಂತಹ ಕತೆಗಾರ್ತಿಯರಲ್ಲಿ ಈ ಬೆಳವಣಿಗೆಯನ್ನು ಕಾಣಬಹುದು. ವೈಜ್ಞಾನಿಕ ತಿಳಿವು ಹಾಗೂ ಮನೋವೈಜ್ಞಾನಿಕ ಒಳನೋಟಗಳನ್ನು ಈ ಬೆಳವಣಿಗೆಯಲ್ಲಿ ಕಾಣಬಹುದು.

ವೈಜ್ಞಾನಿಕ ತಿಳಿವು ಹಾಗೂ ಮನೋವೈಜ್ಞಾನಿಕ ಒಳನೋಟಗಳನ್ನು ಹೊಂದಿದ ಈ ಲೇಖಕಿಯರು ಸಣ್ಣಕಥೆಯ ಮಾಧ್ಯಮಕ್ಕೆ ಆಳ ವಿಸ್ತಾರಗಳನ್ನು ಒದಗಿಸಿದರು. ಸ್ತ್ರೀಯರು ಕೇವಲ ಬಲಿಪಶುವನ್ನಾಗಿ ಕಾಣದೆ ಅವಳಲ್ಲಿ ಕರ್ತವ್ಯಶಕ್ತಿಯನ್ನು ಗುರುತಿಸುವ ಮೂಲಕ ಅವಳ ಹೊಸ ಪ್ರತಿಮೆಗಳನ್ನು ಸೃಷ್ಟಿಸುವಲ್ಲಿಯೂ ಅವರು ಶಕ್ತರಾದರು. ಅವರ ಕಥೆಗಳಲ್ಲಿ ಆಶಾವಾದವೂ ಸೀಮಿತವಾಗಿ ಕಾಣಿಸಿಕೊಂಡಿತು.

ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಬರೆಯ ತೊಡಗಿದ ಲೇಖಕಿಯರು ಬಲವಾದ ಶಾತ್ವಿಕ ಆಸೆಗಳನ್ನು ಬೆಳೆಸಿಕೊಂಡು ಬದುಕಿನ ಸಂಕೀರ್ಣತೆಯನ್ನು ತಮ್ಮ ಕಥೆಗಳಲ್ಲಿ ಮೂಡಿಸುವಲ್ಲಿ ಆಸಕ್ತಿ ತೋರಿಸಿದರು.

ಈ ತಲೆಮಾರಿನ ಲೇಖಕಿಯರಲ್ಲಿ ಪ್ರಮುಖರಾದ ರಾಜಲಕ್ಷ್ಮಿ ಎಸ್.ರಾವ್ ಹಾಗೂ ವೀಣಾಶಾಂತೇಶ್ವರರ ಕಥೆಗಳಲ್ಲಿ ನಾವು ನೋಡುವ ಅಂತರ್ಮುಖತೆ, ಆತ್ಮಪ್ರಜ್ಞೆ ದ್ವಂದ್ವಗಳ ಅರಿವು ನಮ್ಮ ಮನೋಧರ್ಮದ ಆವಿಷ್ಕಾರಗಳನ್ನು ಪ್ರತಿನಿಧಿಸುತ್ತದೆ. ಕತೆಗಳನ್ನು ಕೇವಲ ಮನೋರಂಜನೆಗಾಗಲಿ , ಸಾಮಾಜಿಕ ಜಾಗೃತಿಗಾಗಲಿ ಬಳಸದೆ ಅದನ್ನು ಸತ್ಯಶೋಧ ಗಂಭೀರ ಪ್ರಯತ್ನಗಳಲ್ಲಿ ತೊಡಗಿಸಿದವರು ಹಾಗೂ ಅದನ್ನು ಒಂದು ಪ್ರಬುದ್ಧ ಸಾಹಿತ್ಯ ಮಾಧ್ಯಮವನ್ನಾಗಿ ಬಳಸಿಕೊಂಡರು.

ಲೇಖಕಿಯರು ಒಂದಿಲ್ಲೊಂದು ರೀತಿಯಿಂದ ಜಾಗತಿಕ ಸ್ವರೂಪದ ಸ್ತ್ರೀ ಮುಕ್ತಿ ಚಳುವಳಿಗಳಿಂದ ಪ್ರಭಾವಿತರಾದವರು. ಇವರು ಬರೆಯುತ್ತಿರುವ ವೇಳೆಗೆ ಸಮಾಜದಲ್ಲಿಯೂ ಸಾಕಷ್ಟು ಸ್ಥಿತ್ಯಂತರಗಳಿದ್ದವು. ಮಹಿಳೆಗೆ ಇಂದು ಎಲ್ಲ ಕಾರ್ಯಕ್ಷೇತ್ರಗಳೂ ಮುಕ್ತವಾಗಿವೆಯಲ್ಲದೆ ಶಿಕ್ಷಣದ ಎಲ್ಲ ಪ್ರಕಾರಗಳೂ ಲಭ್ಯವಿವೆ. ಹೀಗಾಗಿ ಅವಳ ಅನುಭವ ಹಿಂದೆ ಎಂದೂ ಇಲ್ಲದ ವ್ಯಾಪ್ತಿ ವೈವಿಧ್ಯಗಳನ್ನು ಹೊಂದಿದೆ. ಅದರ ಜೊತೆಗೆ ಸಮಾನತೆ, ಸ್ವಾತಂತ್ರ್ಯಗಳು ಹೊಸ ಸಮಸ್ಯೆಗಳಿಗೆ ಎಡೆ ಮಾಡಿಕೊಟ್ಟಿವೆ.

ಗಂಡು ಹೆಣ್ಣಿನ ಸಂಬಂಧಗಳಲ್ಲಿಯೂ ಬಿಕ್ಕಟ್ಟು ತಲೆದೋರಿದೆ. ಪುರುಷ ಕೇಂದ್ರೀಯ ವ್ಯವಸ್ಥೆಯ ಅಂಗಗಳಾದ ಅವಿಭಕ್ತ ಕುಟುಂಬ ಹಾಗೂ ವಿವಾಹಗಳಿಂದ ಸಂಸ್ಥೆಗಳು ತಮ್ಮ ಶಕ್ತಿಯನ್ನು ಕಳೆದುಕೊಳ್ಳುತ್ತವೆ. ಆದರೆ ಸಾಮಾಜಿಕ ಧೋರಣೆಗಳಲ್ಲಿ ಬದಲಾವಣೆಯಾಗಿದ್ದರೂ ಮನೋಧರ್ಮಗಳಲ್ಲಿ ಸಾಂಪ್ರದಾಯಕ ಜಾಡ್ಯ ಇನ್ನೂ ಉಳಿದುಕೊಂಡಿರುವುದರಿಂದ ಘರ್ಷಣೆಗಳು ನಡೆಯುತ್ತಲೇ ಇವೆ. ವೈದೇಹಿ. ಸಾರಾ ಅಬೂಬಕ್ಕರ್ ಗೀತಾ ನಾಗಭೂಷಣ, ದೇಸಾಯಿ, ಬಿ.ಟಿ. ಲಲಿತಾನಾಯಕ್, ಭಾನು ಮುಸ್ತಾಕ್ ನೇಮಿಚಂದ್ರರಂತಹಾ ಹೊಸ ತಲೆಮಾರಿನ ಲೇಖಕಿಯರಿಗೆ ತಮ್ಮ ಪರಿಸರದ ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಸ್ವರೂಪದ ಅರಿವು

ಇರುವುದರಿಂದ ಅವರು ಬರೆಯುತ್ತಿರುವ ಕತೆಗಳು ಮೊದಲಿನವರ ಕಥೆಗಳಿಗಿಂತ ಭಿನ್ನವಾಗಿವೆ. ಈ ಕಾಲದಲ್ಲಿ ಸಾಂಪ್ರದಾಯಿಕ ಕಥನ ಕ್ರಮಕ್ಕಿಂತ ಭಿನ್ನವಾಗಿ ಸಂಕೇತ ಪ್ರತಿಮೆಗಳನ್ನು ಲೇಖಕಿಯರು ದುಡಿಸಿಕೊಂಡಿದ್ದಾರೆ. ಹೆಣ್ಣಿನ ಅಗೋಚರ ಲೋಕವು ಕಥೆಗಳಲ್ಲಿ ತೆರೆದುಕೊಂಡಿದೆ. ಕುಟುಂಬವೇ ಅಂತಿಮವೆಂದು ಭಾವಿಸಿದ್ದ ನಿಲುವು ಹೋಗಿ ಹೆಣ್ಣಿನ ವ್ಯಕ್ತಿತ್ವದ ಹುಡುಕಾಟದತ್ತ ಸಾಗಿದೆ. ಆಯಾ ಸಮಾಜಗಳ ನಂಬಿಕೆ, ಸಂಪ್ರದಾಯಗಳ ಹಿನ್ನೆಲೆಯಲ್ಲಿ ಆಗುವ ಶೋಷಣೆಗಳನ್ನು ಬಯಲಿಗೆಳೆದು, ಪ್ರತಿಭಟಿಸುವ ಗುಣ ಕಾಣಿಸುತ್ತದೆ. ಕುಟುಂಬದೊಳಗಿನ ಹೆಣ್ಣಿನ ನೋವು ನಲಿವುಗಳ ಚಿತ್ರಣಗಳೊಂದಿಗೆ ಯಜಮಾನ ಸಂಸ್ಕೃತಿಯ ದೋಷಗಳು, ಉದ್ಯೋಗಸ್ಥ ಹೆಣ್ಣಿನ ಸ್ಥಿತಿ-ಗತಿ ಮುಂತಾದವು ಕಥೆಯ ವಸ್ತುಗಳಾಗಿವೆ.

ಪೋಷಕ ವಿಮರ್ಶೆಯ ಅಭಾವ ಮಹಿಳಾ ಸಾಹಿತ್ಯದ ಆರೋಗ್ಯಕರ ಬೆಳವಣಿಗೆಗೆ ಮಾರಕವಾಗಿದೆ ಎಂಬ ಮಾತೊಂದಿದೆ. ಮಹಿಳೆಯರು ಬರೆದ ಕಥೆಗಳು ಗಂಭೀರವಾದ ವಿಮರ್ಶೆಗೆ ಒಳಗಾಗಿಲ್ಲ ಎನ್ನುವುದನ್ನು ಒಪ್ಪಿಕೊಳ್ಳಬೇಕು. ಆದರೆ ಮೊದಲಿನಿಂದಲೂ ಉದಯೋನ್ಮುಖ ಕತೆಗಾರ್ತಿಯರಿಗೆ ಹಿರಿಯ ಸಾಹಿತಿಗಳಿಂದ ಪ್ರೋತ್ಸಾಹ ಹಾಗೂ ತಕ್ಕಮಟ್ಟಿನ ಮಾರ್ಗದರ್ಶನ ದೊರೆಯುತ್ತಲೇ ಬಂದಿದೆ ಎನ್ನುವ ಮಾತು ಅಷ್ಟೇ ನಿಜವಾದದ್ದು. ಒಂದೆರಡು ಉದಾಹರಣೆಗಳಿಂದ ಈ ಮಾತನ್ನು ಕೆಳಗಿನಂತೆ ಸ್ಪಷ್ಟಪಡಿಸಬಹುದು.

ಮೊಟ್ಟಮೊದಲ ಮಹಿಳಾ ಕಥಾ ಸಂಗ್ರಹ 'ರಂಗವಲ್ಲಿ'ಗೆ ಬಂದ ಪ್ರತಿಕ್ರಿಯೆ ಗೌರಮ್ಮ ಅವರ ನಿರಾಶೆಗೆ ಕಾರಣವಾಗಿತ್ತು. ಇದು ಹೆಣ್ಣುಮಕ್ಕಳ ಕೃತಿ ಎಂಬ ಪೊಳ್ಳು ಸಹಾನುಭೂತಿಯ ಹೊರೆಯನ್ನು ನಾವೆಷ್ಟು ದಿನ ಹೊತ್ತಿರಬೇಕು ? ಇದರಿಂದ ಗಂಡಸರು ನಮ್ಮ ಸಾಹಿತ್ಯವನ್ನು ತೃಪ್ತಿದಾಯಕವಾಗಿ ಒಪ್ಪಿದಂತಾಯಿತೆ? ಅವರು ನಮ್ಮ ಸಾಹಿತ್ಯವನ್ನು ಗಂಡಸರು ಬರೆಯುವ ಸಾಹಿತ್ಯವನ್ನು ನೋಡುವ ದೃಷ್ಟಿಯಲ್ಲಿ ಒಮ್ಮೆ ನೋಡಲಿ, ಇಲ್ಲಿ ನೋಡಲಾರರು ಎಂಬ ತಮ್ಮ ಅಭಿಪ್ರಾಯವನ್ನು ಬಿಚ್ಚು ಮನಸ್ಸಿನಿಂದ ಹೇಳಿಕೊಂಡಿದ್ದಾರೆ. ನಿರ್ಭಾಗ್ಯ ' ರಂಗವಲ್ಲಿ'ಯ ಅದೃಷ್ಟಕ್ಕೆ ಒಂದು ಸರಿಯಾದ ವಿಮರ್ಶೆ ಬರೆಯುವ ಪುಣ್ಯಾತ್ಮರು ಅವರ ಪಾಲಿಗೆ ಇಲ್ಲವಾದರು ದುರ್ದೈವದಿಂದ ಅವರ ಪ್ರಥಮ ಕಥಾಸಂಕಲನ ' ಕಂಬನಿ' ಹೊರಬರುವ ಮೊದಲೇ ಅವರು ತೀರಿ ಹೋದುದರಿಂದ ಈ ಪುಸ್ತಕಕ್ಕೆ ದ.ರಾ.ಬೇಂದ್ರೆಯವರು ಬರೆದ ಉತ್ಕೃಷ್ಟ ಮುನ್ನುಡಿಯನ್ನು ನೋಡುವ ಸಂತೋಷದಿಂದ ಅವರು ವಂಚಿತರಾದರು.

ಗೌರಮ್ಮ ಹಾಗೂ ಶ್ಯಾಮಲಾದೇವಿಯರ ನಂತರದ ಪೀಳಿಗೆಯ ಮುಂಚೂಣಿಯಲ್ಲಿದ್ದ ಅನುಪಮಾ ಅವರಿಗೂ ಇದೇ ರೀತಿಯ ವಿಮಾರ್ಶಾತ್ಮಕ ಪ್ರೋತ್ಸಾಹ ಚದುರಂಗರಿಂದ ದೊರೆಯಿತು.

ಈ ರೀತಿಯಾಗಿ ಕಾಲಕಾಲಕ್ಕೆ ಮಹಿಳಾ ಕಥಾ ಸಾಹಿತ್ಯಕ್ಕೆ ಹೊಸ ತಿರುವು ದೊರೆತು ಇತ್ತೀಚಿನ ದಶಕಗಳಲ್ಲಿ ಅವು ಉನ್ನತ ಮಟ್ಟಕ್ಕೇರಿದೆ ಎಂದು ಗುರುತಿಸಬಹುದಾಗಿದೆ.

ಹೀಗೆ ಆರಂಭ ಕಾಲದ ಕೊಡಗಿನ ಗೌರಮ್ಮನವರಿಂದ ಇಂದಿನ ಯುವ ಪೀಳಿಗೆಯ ಬರಹಗಾರ್ತಿಯರಾದ ನೇಮಿಚಂದ್ರರವರೆಗೆ ಅನೇಕ ಮಹಿಳೆಯರು ವೈವಿಧ್ಯಮಯವಾದ ವಸ್ತು, ವಿಷಯ ಸಂಗತಿಗಳನ್ನಿಟ್ಟುಕೊಂಡು ಕಥೆ ಬರೆದಿದ್ದಾರೆ. ನವೋದಯದಿಂದ ಪ್ರಾರಂಭಿಸಿ ಇಂದಿನ ದಲಿತ ಬಂಡಾಯದವರೆಗೂ ಸಾಗಿ ಬಂದಿದ್ದಾರೆ. ಒಟ್ಟಿನಲ್ಲಿ ಇಂದು ಮಹಿಳಾ ಕಥಾ ಸಾಹಿತ್ಯ ಎಲ್ಲ ವರ್ಗದ ಮಹಿಳೆಯರನ್ನು ಒಳಗೊಂಡ ಗಂಭೀರವಾದ ಕಲಾ ಮಾಧ್ಯಮವಾಗಿ ರೂಪುಗೊಂಡಿದೆ.

ಅಧ್ಯಾಯ–4

ಶಾರದಾ ವಿ.ಮೂರ್ತಿರವರ ಕಥೆಗಳಲ್ಲಿ ದಮನಿತ ಸಮುದಾಯದ ರೂಪುರೇಷೆಗಳು

ಅಧ್ಯಾಯ-4

ಶಾರದಾ ವಿ.ಮೂರ್ತಿರವರ ಕಥೆಗಳಲ್ಲಿ ದಮನಿತ ಸಮುದಾಯದ ರೂಪುರೇಷೆಗಳು

ಪುರುಷ ಅಹಮಿಕೆಯಲ್ಲಿ ಸ್ತ್ರೀ ಸಹಜತೆಗಳು ಕಳೆದು ಹೋಗಿದೆ. ಅಲಿಖಿತ ನೀತಿ ಸಂಹಿತೆಗಳ ಒತ್ತಡಕ್ಕೆ ಸಿಲುಕಿ ತನ್ನತನ, ತನ್ನ ಮನಸ್ಸಿನ ಮೂಲ ಆಶಯಗಳನ್ನು ಸುಪ್ತತೆಗೆ ತಳ್ಳಿ ಬಿಡುತ್ತಿದ್ದಾಳೆ. ಅದುಮಿಟ್ಟ ಮೂಲಭಾವಗಳು ಎಲ್ಲೋ ಹೆಡೆಯಾಡುತ್ತಲೇ ಇರುತ್ತದೆ. ವರ್ತನಶೀಲ ಬದುಕಿನಲ್ಲಿ ಸಾಧ್ಯವಾಗದೆ ಆಶಯಗಳು ಸೃಜನಶೀಲ ಸಾಹಿತ್ಯದಲ್ಲಿ ಅನಾವರಣಗೊಳ್ಳುತ್ತದೆ.

ಹೆಣ್ಣಿನ ಗುಣ, ಮಾತು ಸ್ವಭಾವ, ಕೆಲಸ, ಆಸೆ, ಕಡೆಗೆ ಅವಳ ಭಾವನೆಗಳನ್ನೂ ನಿಗಧಿತಗೊಳಿಸಲಾಗಿದೆ. ಇಂತಹ ಒತ್ತಡಗಳಿಂದ ಬಿಡುಗಡೆ ಬಯಸುವ ಸ್ತ್ರೀ ಸಂವೇದನೆಗಳು ಆಧುನಿಕ ಸಂದರ್ಭದಲ್ಲಿ ವಿಶಿಷ್ಟ ಮಾರ್ಗಗಳನ್ನು ಕಂಡುಕೊಂಡಿವೆ.

ಮಂಗಳಿಗೊಂದು ಮನೆ

ಮಂಗಳಿ ಹುಟ್ಟಿದ್ದು ಬೆಳೆದದ್ದು ಈಗ ಬೆಳೆಯುತ್ತಿರುವುದೆಲ್ಲಾ ಗಾರೆ, ಸಿಮೆಂಟು , ಇಟ್ಟಿಗೆ, ಮರಳು, ಜಲ್ಲಿಯ ಸಾಮ್ರಾಜ್ಯದಲ್ಲಿಯೇ. ತೀರಾ ಸಣಕಲು ಶರೀರದ ಹುಡುಗಿಯೇ ಆದರೂ ಧೂಳು ಆಲರ್ಜಿಯೋ ಮತ್ತೊಂದೋ ಖಾಯಿಲೆ ಕಂಡವಳಲ್ಲ. ಏಳು ವರ್ಷ ತುಂಬಿದ ಹುಡುಗಿ ಅಮ್ಮನ ಕೈಗೆ ಬಂದಿದ್ದಾಳೆ. ತಮ್ಮ ಈರಭದ್ರನನ್ನು ಬೆಳಗಿನಿಂದ ಸಂಜೆಯವರೆಗೂ ನೋಡಿಕೊಳ್ಳುವ ಅವಳು ದೊಡ್ಡ ಹುಡುಗಿಯೇ.

ಅಮ್ಮ ಅಪ್ಪ ಕೆಲಸಕ್ಕೆ ಹೊರಡಬೇಕಾದರೆ, ಮಂಗಳಿಯ ತಮ್ಮನಾದಂತಹ ಈರಭದ್ರನನ್ನು ಅವಳಿಗೆ ಒಪ್ಪಿಸಿ ಜೋಪಾನವಾಗಿ ನೋಡಿಕೋ ಮಣ್ಣಿನಲ್ಲಿ ಆಡಕ್ಕೆ ಹೋಗಬೇಡ ಎಂದು ಹೇಳಿ ಕೆಲಸಕ್ಕೆ ಹೋಗುತ್ತಾರೆ. ಅಮ್ಮನ ಕೆಲಸ ಮುಗಿಯುವ ತನಕ ತಮ್ಮನ ಜವಾಬ್ದಾರಿಯೆಲ್ಲಾ ಮಂಗಳಿಯದೇ. ಅವಳಿಗೆ ಈರಭದ್ರನನ್ನು ಎತ್ತಿಕೊಂಡು ಸೊಂಟ ನೋಯುತ್ತಿದ್ದಂತೆ ಅಲ್ಲಿಯೇ ಬೀದಿ ಮರದ ಕೆಳಗೆ ಬಟ್ಟೆಯ ತುಂಡೊಂದನ್ನು ಹಾಕಿ ಕುಳ್ಳಿರಿಸುತ್ತಿದ್ದಳು.

ಮಂಗಳಿಗೆ ದೂರದಲ್ಲಿ ಸುರಿದಿದ್ದ ಮರಳ ರಾಶಿಯನ್ನು ನೋಡಿ ಪುಟ್ಟ ಮನೆ ಕಟ್ಟುವ ಆಸೆ ಬರುತ್ತದೆ. ಆಗ ಈರಭದ್ರನನ್ನು ಅಲ್ಲೇ ಕೂರಿಸಿ ಆಡಕ್ಕೆ ಹೊರಟುಹೋಗುತ್ತಾಳೆ. ತಮ್ಮನು ತಪ್ಪು ಹೆಜ್ಜೆ ಹಾಕುತ್ತಾ ರಸ್ತೆಯ ಆಚೆಯ ತುದಿಗೆಹೋಗಿ ಮುಗ್ಗರಿಸಿ ಬಿದ್ದುಬಿಟ್ಟಿದ್ದಾನೆ. ಮಂಗಳಿ ಓಡುವಷ್ಟರಲ್ಲಿಯೇ ಅವರ ಅಮ್ಮ 'ಮಾಂಕಾಳಿ ರೂಪ ಧರಿಸಿ ಅಲ್ಲಿಗೆ ಬಂದು ಬಿಟ್ಟಿದ್ದಳು. ಮಗುವನ್ನು ಇಲ್ಲಿ ಬಿಟ್ಟು ಏನು ಮಾಡುತ್ತಿದ್ದೆ ಎಂದು ಮೈಮೇಲೆಲ್ಲಾ ಚೆನ್ನಾಗಿ ಬೆತ್ತದಿಂದ ಸೇವೆ ಮಾಡುತ್ತಾಳೆ.

ಅಪ್ಪ ಅಮ್ಮ ಗಾರೆ ಕೆಲಸ ಮಾಡುವವರಾಗಿರುವುದರಿಂದ ಎಲ್ಲಿ ಮನೆ ಕಟ್ಟುವ ಕೆಲಸ ಇದೆ ಅಂದರೆ ಅಲ್ಲಿಗೆ ಹೋಗಿ ಇವರು ಒಂದು ಶೆಡ್‌ನ್ನು ಹಾಕಿಕೊಂಡು ಅಲ್ಲಿ ಇರುತ್ತಿದ್ದರು. ಈಗ ಬೇರೆ ಕಡೆ ಹೋಗುವ ಸಮಯ ಬಂದಿದೆ. ಆಗ ಮಂಗಳಿಗೆ ತುಂಬಾ ಸಂತೋಷವಾಯಿತು. ಮನೆ ಬಿಡಿ ಮನೆ ಬಿಡಿ, ಎಂದು ಒಂದೇ ಸಮನೆ, ಪೀಡಿಸುತ್ತಿದ್ದ ಮನೆ ಯೊಡೆಯನ ಕಿರುಕುಳ ತಪ್ಪಿತು ಎಂದು ನಿಟ್ಟುಸಿರು ಬಿಟ್ಟಳು.

ಇನ್ನೊಂದು ಕಡೆ ಹೋದಾಗ ಆ ಮನೆಯ ಒಡೆಯ ಮನೆಯಲ್ಲಿರುವಾಗ ಮಂಗಳಿ ಮತ್ತು ಈರಭದ್ರ ಹತ್ತಿರವೆಲ್ಲೂ ಹೋಗುವ ಹಾಗಿಲ್ಲ. 'ಏಯ್ ಆಚೆ ಹೋಗು ... ದಾರಿಗಡ್ಡ ನಿಲ್ಲಬೇಡ' ಎಂದು ಮುಖ ಗಂಟು ಹಾಕಿಕೊಂಡು ಮಾತನಾಡುತ್ತಾರೆ' ಒಲೆ – ಗಿಲೆ ಒಳಗೆ ಹಚ್ಚಿ ಮನೆ ಹಾಳು ಮಾಡ್ಬೇಡ, ಮಕ್ಕಳನ್ನು ಒಳಗೆ ಬಿಡಬೇಡ' ಎಂದು ಅಮ್ಮನನ್ನು ಬೈಯ್ಯುತ್ತಾನೆ.

ಆಗ ಮಂಗಳಿ ಎಷ್ಟೊಂದು ಮನೆಗಳನ್ನು ಕಟ್ಟಿದರೇನು! ತಮಗೊಂದು ಸ್ಥಿರವಾದ ನೆಲೆಯಿದೆಯೇ ? ಹಕ್ಕಿ –ಪಕ್ಷಿಗಳಿಗಾದರೂ ತಮ್ಮದೇ ಗೂಡು ಎಂಬುದಿದೆ. ತಮಗೆ ಅದೂ ಇಲ್ಲ ಎನ್ನುತ್ತಾಳೆ.

ಇರುವುದಕ್ಕೆ ಒಂದು ಸ್ವಂತವಾಗಿ ಮನೆ ಬೇಕು ಎಂಬ ಆತುರತೆಯನ್ನು ವ್ಯಕ್ತಪಡಿಸುವ ಒಂದು ಮನೆಗಾಗಿ ಆ ಚಿಕ್ಕ ಮಗು ಪಡೆಯುವ ನೋವನ್ನು ಈ ಕಥೆಯಿಂದ ತಿಳಿದುಕೊಳ್ಳಬಹುದು.

ಇಲ್ಲಿ ಒಂದು ಚಿಕ್ಕ ಮಗುವಿಗೆ ಮನೆಯ ಜವಾಬ್ದಾರಿ ಮತ್ತು ಮಗುವಿನ ಜವಾಬ್ದಾರಿ ಇದೆ. ಆದರೆ ಮಂಗಳಿಯ ಮನಸ್ಸಿನಲ್ಲಿ ತಂದೆ ತಾಯಿ ಇಷ್ಟು ಕಷ್ಟಪಟ್ಟು ದುಡಿದರೂ ಸಹ ಸ್ವಂತವಾಗಿ ಒಂದು ಮನೆಯನ್ನು ಕಟ್ಟುವುದಕ್ಕೆ ಆಗಲಿಲ್ಲವಲ್ಲ ಅಂದರೆ ಬಡವರ ಆಸೆಗಳು ಯಾವತ್ತಿಗೂ ತೀರದೆ ಹೋಗುತ್ತದೆಯೇ ಇಲ್ಲಿ ದೊಡ್ಡ ಬಂಗಲೆ ಇರುವಂತಹ ಶ್ರೀಮಂತ ವ್ಯಕ್ತಿಯು ಬಡವನನ್ನು ಯಾವ ರೀತಿಯಾಗಿ ಕೀಳಾಗಿ ನೋಡುತ್ತಾನೆ. ಆ ಮನೆಯ ಹೆಣ್ಣು ಮಕ್ಕಳು ಯಾವ ರೀತಿಯಾಗಿ ಶೋಷಣೆಗೆ ಒಳಪಟ್ಟಿದ್ದಾರೆ ಎಂಬ ಅಂಶಗಳನ್ನು ನೀಡಿದ್ದಾರೆ.

ಗೋಸುಂಬೆಗಳು

ಶಾಲಿನಿಯ ಮನೆ ಪಕ್ಕಕ್ಕೆ ಒಬ್ಬ ವೃದ್ಧೆ ಯುವಕ ಮತ್ತು ಯುವತಿ ಬಾಡಿಗೆಗೆ ಬಂದರು.ಅವರು ತುಂಬಾ ಶ್ರೀಮಂತರಾಗಿದ್ದರು. ಆ ಯುವತಿ ಹೆಸರು ಸುಶೀಲಾ. ಯಾವಾಗಲಾದರೂ ಒಂದು ಸಲ ಶಾಲಿನಿಯ ಮನೆಗೆ ಬಂದು ಓದುವುದಕ್ಕೆ ಪುಸ್ತಕವನ್ನು ತೆಗೆದುಕೊಂಡು ಬೇಗ ಹೊರಟು ಹೋಗುತ್ತಿದ್ದಳು. ಅವರು ಯಾರ ಜೊತೆಯೂ ಜಾಸ್ತಿ ಮಾತನಾಡುತ್ತಿರಲಿಲ್ಲ , ಅತ್ತೆ, ಗಂಡ ಎಲ್ಲರ ಎದುರಿನಲ್ಲಿ ಚೆನ್ನಾಗಿ ನೋಡಿಕೊಳ್ಳುವ ನಾಟಕವನ್ನು ಮಾಡುತ್ತಿದ್ದರು. ಒಂದು ಸಲ ಸುಶೀಲಾ, ಶಾಲಿನಿಯವರ ಮನೆಯಲ್ಲಿ ನಿರಾಕರಣ ಎನ್ನುವ ಒಂದುಪುಸ್ತಕವನ್ನು ವಾಪಸ್ಸು ಕೊಡುತ್ತಾ ನಿರಾಕರಣ ಪುಸ್ತಕವನ್ನು ಕೊಡುತ್ತಿದ್ದೇನೆ ನೋಡಿಕೊಳ್ಳಿ ಎಂದು ಹೇಳಿ ಹೋದ ರಾತ್ರಿ ವಿದ್ಯುತ್ ಶಾಖ್‌ನಿಂದ ಅಸುನೀಗಿರುತ್ತಾಳೆ. ಅತ್ತೆ, ಗಂಡ ತುಂಬಾ ಅತ್ತುಕೊಂಡು ಮನೆ ಖಾಲಿ ಮಾಡಿ ಬೇರೆ ಮನೆಗೆ ಹೊರಟು ಹೋಗುತ್ತಾರೆ. ಶಾಲಿನಿ ಒಂದು ದಿನ ಆ ಪುಸ್ತಕವನ್ನು ತೆಗೆದು ನೋಡಿದಾಗ ಅದರಲ್ಲಿ ಒಂದು ಪತ್ರ ಇರುತ್ತದೆ. ಅದರಲ್ಲಿ ನಮ್ಮ ಅತ್ತೆ, ಗಂಡನ ಪ್ರೀತಿಯಲ್ಲಿ ನಾಟಕವಿದೆ. ನನಗೇನಾದರು ಆಪತ್ತು ನಡೆದರೆ ಅದಕ್ಕೆ ಇವರೇ ಕಾರಣ ಎಂದು ಬರೆದಿತ್ತು. ಶಾಲಿನಿ ಒಂದು ಸಲ ತನ್ನ ತಂಗಿಗೆ ನಿಶ್ಚಿತಾರ್ಥ ಎಂದು ಹೋದಾಗ ಅಲ್ಲಿ ಸುಶೀಲಾ ಅವರ ಗಂಡನಿಗೆ ಮದುವೆ ಮಾಡುವುದಕ್ಕೆ ತಯಾರು ಮಾಡಿರುತ್ತಾರೆ . ಸುಶೀಲನನ್ನು ನೋಡಿ ಅಲ್ಲಿಂದ ಹೊರಟು ಹೋಗುತ್ತಾರೆ. ಇಲ್ಲಿ ಸೊಸೆಯನ್ನು ಎಲ್ಲರ ಎದುರುಗಡೆ ಚೆನ್ನಾಗಿ ನೋಡಿಕೊಳ್ಳುವ ರೀತಿ ನಾಟಕ ಮಾಡಿ ಕೊನೆಗೆ ಅವರೇ ಸುಶೀಲನ ಪ್ರಾಣ ತೆಗೆದಿದ್ದಾರೆ. ಮಹಿಳೆಯ ಸಮಸ್ಯೆ ಹಾಗೂ ವಿಮೋಚನೆಯ ಹಾದಿಯನ್ನು ಐತಿಹಾಸಿಕವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಕಂಡುಕೊಳ್ಳುವ ಪ್ರಾಮಾಣಿಕ ಯತ್ನವನ್ನು ಮಾಡಿದ್ದಾರೆ.

ಹೆಣ್ಣನ್ನು ಶಬ್ಧಾಡಂಬರದಲ್ಲಿ ಆರಾಧಿಸಿ, ದೈವತ್ವಕ್ಕೆ ಏರಿಸುತ್ತಿದ್ದ ಸಂಸ್ಕೃತಿ ವಾಸ್ತವದಲ್ಲಿ ಅವಳಿಗೆ ಸಂಕೋಲೆಯನ್ನು ಬಿಗಿದು ದನಿಯೆತ್ತದಂತೆ ಮಾಡಿ ತುಳಿದಿಟ್ಟಿದೆ.

ನ್ಯಾಯ

ಶಶಿಕಾಂತನು ಅವರ ಅಮ್ಮನನ್ನು ಅನ್ನುವ ರೀತಿ, ಈ ಅಮ್ಮನಿಗಂತೂ ಸಾಯುವ ವಯಸ್ಸಾದರೂ ಬುದ್ಧಿ ಬರಲಿಲ್ಲ. ನಾನೇನು ಎಳೆ ಮಗುವೆ ಬುದ್ಧಿ ಹೇಳಿ ತಿದ್ದಲು, ಅಷ್ಟಕ್ಕೂ ನಾನು ಮಾಡುತ್ತಿರುವ ತಪ್ಪಾದರೂ ಎಂತದ್ದು ಏನೋ ಮಗ ಈಗಲಾದರೂ ಒಂದು ಸ್ಥಿತಿಯಲ್ಲಿದ್ದಾನಲ್ಲಾ ನಾವಂತೂ ಆಸ್ತಿ ಪಾಸ್ತಿ ಕಾಣಿಲ್ಲ, ಮೆರೀಲಿಲ್ಲ. ಇವನಾದರೂ ಸುಖವಾಗಿ ಬಾಳಲಿ ಎಂಬ ಹಾರೈಕೆ, ಅಪೇಕ್ಷೆ, ಆಕಾಂಕ್ಷೆ ಯಾವುದೂ ಬೇಡವೆ? ಎಲ್ಲದಕ್ಕೂ ಹೇಗೆ ಬಂತು ಎಲ್ಲಿಂದ ಬಂತು ಎಂದು ತನಿಖೆ ಆರಂಭಿಸುತ್ತಾಳೆ. ನೀತಿ ನಿಯತ್ತುಗಳ ಭಾಷಣ ಬಿಗಿಯುತ್ತಾಳೆ. ಈ ಕಾಲದಲ್ಲಿ ಅದೆಲ್ಲಾ ಹೇಳಲಿಕ್ಕೆ ಚೆಂದ. ಆಚರಣೆಗಳಲ್ಲಿ ಎಂದು ಈ ಅಮ್ಮನಿಗೆ ಯಾಕಾದರೂ ತಿಳಿಯುವುದಿಲ್ಲವೋ ! ಇನ್ನೂ ಬೇಕಾದರೆ ಅಪ್ಪ ಪಟ್ಟ ಕಷ್ಟಗಳ ಸರಮಾಲೆಯನ್ನು ವರ್ಣಿಸಿ ಅಂತಹ ಸ್ಥಿತಿಯಲ್ಲಿಯೂ ತಾವು ಒಬ್ಬರಿಗೂ ಮೋಸ ವಂಚನೆ ಮಾಡಿದ್ದಿಲ್ಲವೆಂದು ಅಭಿಮಾನಪಟ್ಟುಕೊಳ್ಳುತ್ತಾಳೆ.

ಕಂಡವರು ಶಾಪ ಹಾಕಿ ಕೊಟ್ಟ ಹಣದಿಂದ ನಿನ್ನ ಉದ್ಧಾರವಾಗೊಲ್ಲ ಶಶಿ, ನಾವು ದುಡಿದದ್ದೇ ನಮಗೆ ಗಟ್ಟಿ ಅವರಿವರ ಕಣ್ಣೀರಿನ ಕಾಸು ನಮಗೆ ಖಂಡಿತ ಬೇಡವೇ ಬೇಡ.

" ನಾನು ಏನು ಮಾಡ್ಬೇಕು, ಏನು ಮಾಡಬಾರದು ಅಂತ ನಿನಗಿಂತ ನನಗೇ ಚೆನ್ನಾಗಿ ಗೊತ್ತು, ನೀನು ಅನುಭವಿಸದೇ ಇರೋ ಸುಖ ನನಗಿದೆಯೆಲ್ಲಾ ಅಂತ ನಿನಗೆ ಹೊಟ್ಟೆಯುರಿ' ಅಪಾದನೆಯನ್ನು ಹೊರೆಸಲೂ ಹಿಂದೆಗೆಯಲಿಲ್ಲ ಅಮ್ಮನ ಮೇಲೆ.

"ಆಗ ಅಮ್ಮ ಹೆತ್ತ ತಾಯಿಗೆ ಒಳ್ಳೇ ಬಿರುದು ಕೊಟ್ಟೆಯಪ್ಪ ನಿನ್ನಂತಹ ಮಗನನ್ನು ಕುಲಪುತ್ರ ಎಂದು ಮೆರೆದನಲ್ಲಾ, ನನ್ನ ಬುದ್ಧಿಯನ್ನು ಕೊಂಡಾಡಬೇಕು. ನೀನು ಹುಟ್ಟದೇ ಇದ್ದಿದ್ರೇ ನಿರಾಳವಾಗುತ್ತಿತ್ತೇನೋ !" ಎಂದು ತನ್ನ ತಾಯಿ ತನ್ನ ಹುಟ್ಟಿನ ಬಗ್ಗೆಯೇ ಅಸಹ್ಯ

ವ್ಯಕ್ತಪಡಿಸಿದಾಗ ದೂರ್ವಾಸನಂತೆ ಸಿಡುಕಿ ದುರ್ದಾನ ತೆಗೆದುಕೊಂಡವನಂತೆ ಮನೆಯಿಂದ ಹೊರ ಬಂದಿದ್ದ.

ಮತ್ತೆ ಮನೆಗೆ ವಾಪಸ್ಸು ಬಂದಾಗ ಅಲ್ಲಿಯೇ ಸಿಟ್ಟಿನಿಂದ ತನ್ನ ಹೆಂಡತಿಯಾದ ಸವಿತಾ ಕೆಂಪಾದ ಮುಖದಿಂದ ಧುಮುಗುಟ್ಟುಸುತ್ತಾ ನಿಂತಿದ್ದಾಳೆ. ಮನೆಯ ಮುಂದಿನ ಸಿಟ್‌ಔಟ್‌ನ ಕಂಬಕ್ಕೆ ಹತ್ತು ಹನ್ನೆರಡು ವರ್ಷದ ಹುಡುಗನನ್ನು ಕಟ್ಟಿ ಹಾಕಿದ್ದಾರೆ. ಇದನ್ನೇ ಕಾಯುತ್ತಿದ್ದವಳಂತೆ " ನೋಡಿ ಶಶಿ, ಈ ಹುಡುಗ ನಮ್ಮ ಶೈಲೇಂದ್ರನ ಷರ್ಟ್ ಮತ್ತು ಪ್ಯಾಂಟನ್ನು ಬ್ಯಾಗಿಗೆ ತುಂಬಿಕೊಳ್ಳುತ್ತಿದ್ದ. ಅಷ್ಟರಲ್ಲೇ ನಾನು ಕೂಗಿಕೊಂಡೆ ಭಯದಿಂದಲೋ, ಮತ್ತೇನೋ ಎರಡೇ ಬಟ್ಟೆ ತೆಗ್ದಿದ್ದ. ಅವಕಾಶ ಸಿಕ್ಕಿದ್ರೆ ಹೊಂಚು ಹಾಕಿ ಅಷ್ಟು ಎಗರಿಸ್ತಾ ಇದ್ದನೇನೋ, ನಾನು ಕೂಗಿದ್ದು ಕೇಳಿ ಮಾಲಿ ಓಡಿ ಹೋಗಿ ಹಿಡಿದು ಕಟ್ಟಿ ಹಾಕಿದ. ಎರಡು ಹೊಡೆದದ್ದು ಆಯಿತು. ಅಷ್ಟಕ್ಕೇ ಆಕಾಶ, ಭೂಮಿ ಒಂದಾಗೋ ಹಾಗೆ ರಂಪಾಟ ನಡೆಸಿದ್ದಾನೆ ಎಂದಳು.

ಆಗ ಶಶಿಯ ತಾಯಿ ಬಂದು ಮೊದಲು ಆ ಕಟ್ಟುಗಳನ್ನು ಬಿಚ್ಚಿ ಎಂದು ಬಿಚ್ಚಿಸಿದರು. ಆಗ ಶಶಿ ಇದೇನಮ್ಮ ನಿನ್ನ ಹುಚ್ಚಾಟ, ಕಳ್ಳನಿಗೆ ಆತಿಥ್ಯ ಮಾಡುತ್ತಾ ಇದ್ದೀಯೆ. ಅತಿಯಾಯಿತು ನಿನ್ನದು. ಒಳಗೆ ದೇವರ ಪೂಜೆ ಮಾಡಿಕೊಂಡು ಹಾಯಾಗಿ ನಿನ್ನ ಪಾಡಿಗೆ ನೀನಿರು ಹೋಗು" ಎಂದು ಅಬ್ಬರಿಸಿದ.

ನಾನೋ ಹುಡುಗ, ಬಡತನದ ಫಲ, ಹೊಸ ಬಟ್ಟೆಯ ಆಸೆಯಿಂದ ನ್ಯಾಯ ಅನ್ಯಾಯಗಳ ವಿವೇಚನೆಯಿಲ್ಲದೆ ಕೇವಲ ತನಗಾಗುವ ಬಟ್ಟೆಯನ್ನು ಮಾತ್ರ ತೆಗೆದುಕೊಂಡಿದ್ದಾನೆ. ಬೇರೇನನ್ನೂ ಮುಟ್ಟಿಲ್ಲ. ಆತ್ರ ಆದ್ರೆ ಇಷ್ಟೆಲ್ಲಾ ವಿದ್ಯೆ, ಬುದ್ಧಿ, ಐಶ್ವರ್ಯ ಇದ್ದರೂ ಬಡವರ ರಕ್ತಹೀರಿ ನೀನು ಮಾಡ್ತಾ ಇರೋದು ಯಾವ ಹಗಲು ದರೋಡೆಗೆ ಕಡಿಮೆ ? ಇದಕ್ಕೇನು ಶಿಕ್ಷೆ? ವಿಧಿಸುವವರಾರು? ನೀನೇ ದೊಡ್ಡ ಅಪರಾಧಿಯಾಗಿ ಒಂದು ಕ್ಷುಲ್ಲಕ ತಪ್ಪಿಗಾಗಿ ಆಯಕಶ್ಚಿತ ಬಾಲಕನನ್ನು ಶಿಕ್ಷಿಸೋ ಅಧಿಕಾರ ನಾನು ಖಂಡಿತ ಕೊಡೋದಿಲ್ಲ. ಮೊದಲು ನಿನ್ನನ್ನು ನೀನು ಸರಿಪಡಿಸಿಕೋ, ತಪ್ಪು, ಒಪ್ಪುಗಳ ವಿಮರ್ಶೆ ಮಾಡಿಕೋ" ಭಾವೋದ್ವೇಗದಿಂದ ಹೇಳಿದರು?

ಇಲ್ಲಿ ಶ್ರೀಮಂತರು ಮಾಡಿದರೆ ಅದು ನ್ಯಾಯ ಬಡವರು ಮಾಡಿದರೆ ಅದು ಅನ್ಯಾಯ. ಶ್ರೀಮಂತರು ಬಡವರ ರಕ್ತವನ್ನು ಹೀರುತ್ತಾರೆ. ಆದರೆ ಬಡವರು ಕಷ್ಟಪಟ್ಟು ದುಡಿದರೂ ಅವರಿಗೆ ಕಾಲವಿಲ್ಲ. ಕೆಲಸದ ಸಮಯದಲ್ಲಿ ತಾಯಿ ತನ್ನ ಮಗುವಿಗೆ ಹಾಲನ್ನು ಕುಡಿಸಿದ್ದಕ್ಕೆ ಆ ಸಮಯ ವ್ಯರ್ಥವಾಯಿತು ಅದಕ್ಕೆ ನಿನ್ನ ಕೂಲಿನಲ್ಲಿ 1 ರೂ ಹಿಡಿದುಕೊಳ್ಳುತ್ತೇನೆ ಎಂದು ಶಶಿ ರೇಗುತ್ತಾನೆ. ಆದರೆ ತಾನು ಬೇರೆಯವರ ಹತ್ತಿರ ಬೇಕಾದಷ್ಟು ಹಣವನ್ನು ಕಿತ್ತುಕೊಳ್ಳುತ್ತಾನೆ ಇಲ್ಲಿ ಒಂದು ಚಿಕ್ಕ ಮಗು ಬಟ್ಟೆಯನ್ನು ಎತ್ತಿಕೊಂಡಿದ್ದಕ್ಕೆ ಅವನಿಗೆ ಶಿಕ್ಷೆಯನ್ನು ಕೊಟ್ಟರು. ಆದರೆ ಶಶಿ ಮಾಡುತ್ತಿರುವ ಕೆಲಸಗಳಿಗೆ ಶಿಕ್ಷೆಯನ್ನು ಕೊಡಬೇಕು. ದುಡ್ಡಿದ್ದರೆ. ಹೆತ್ತ ತಾಯಿಯು ಸಹ ಕಣ್ಣಿಗೆ ಕಾಣಿಸುವುದಿಲ್ಲ. ತನಗೆ ತಾಯಿಯು ಸಹ ಬೇಡವಾಗದೆ ಹೋಯಿತು. ತಾಯಿಯನ್ನು ಮರ್ಯಾದೆ ಇಲ್ಲದೆ ಮಾತನಾಡ ತೊಡಗಿದ. ಈ ಕಾಲದಲ್ಲಿ ದುಡ್ಡಿರುವವರೇ ದೊಡ್ಡವರು ಎಂದು ತಿಳಿದುಕೊಂಡು ಜೀವನ ಮಾಡುತ್ತಿದ್ದಾರೆ ನಮ್ಮ ಜನ.

ಹೊಸ ಹೊಳಪು

ಅನುರಾಧ ತನ್ನನ್ನು ತಾನು ನಿಂದಿಸಿಕೊಳ್ಳುತ್ತಾಳೆ. ಬದುಕನ್ನು ಎಷ್ಟೊಂದು ಪ್ರೀತಿಸುತ್ತಿದ್ದೆ. ನಾನು ಸೃಷ್ಟಿಯ ಸಕಲ ಜೀವಿಗಳಲ್ಲಿಯೂ ಒಳ್ಳೆಯತನವನ್ನೇ ಅರಸುತ್ತಿದ್ದೆ. ಆದರೆ ಈಗ ಬದುಕೇ ಬೇಡವೆನ್ನುವಷ್ಟರ ಮಟ್ಟಿಗೆ ರೋಸಿ ಹೋಗಿದೆ. ಇದಕ್ಕೆ ಯಾರು ಕಾರಣ? ನಾನು ಹೆಣ್ಣಾಗಿ ಹುಟ್ಟಿದ್ದೇ ಅಲ್ಲವೆ.

ಮನಸ್ಸು ಯೋಚನೆಯ ಗುಂಗಿನಲ್ಲಿ ಸಿಲುಕಿ ನರಳಾಡುತ್ತದೆ. ಬಿ.ಕಾಂ ಫಸ್ಟ್‌ಕ್ಲಾಸ್ ಕಂಪ್ಯೂಟರ್ , ಶಾರ್ಟ್ ಹ್ಯಾಂಡ್. ಏನೆಲ್ಲಾ ಸರ್ಟಿಫಿಕೇಟುಗಳು, ಆ ಇಂಟರ್‌ವ್ಯೂಗಳೋ, ರಿಟನ್ ಟೆಸ್ಟ್‌ಗಳೋ, ಲೆಕ್ಕವಿದೆಯೇ... ಇರಬಹುದಾದ ನೌಕರಿಗೂ ಮಾಡುವ ಇಂಟರ್‌ವ್ಯೂಗೂ ಎಳ್ಳಿನ ಮೊನೆಯಷ್ಟಾದರೂ ಸಂಬಂಧ ವಿಧೆಯೇ... ಕೆಲಸ ಇಂದು ಸಿಕ್ಕೀತು... ನಾಳೆ ಸಿಕ್ಕೀತು... ಎಂದು ಕಾದಿದ್ದೇ ಬಂತು. ಅಣ್ಣನೇನೋ ಸಾಂತ್ವನವನ್ನೇ ನುಡಿಯುತ್ತಿದ್ದ. ಆದರೆ ಅತ್ತಿಗೆಯ ಕೂರಂಬಿನಂತಹ ನೋಟ ಎದೆಯನ್ನು ಸೀಳುವಂತೆ.. ನನ್ನನ್ನೇ ತತ್ತರಿಸುವಂತೆ ಮಾಡುತ್ತಿರಲಿಲ್ಲವೇ?

ನಾನು ಸತ್ತರೆ ಅಣ್ಣ ಅತ್ತಿಗೆ , ಅಮ್ಮ ಎಲ್ಲರೂ ನನ್ನ ಬಗ್ಗೆ ಏನೆಂದುಕೊಳ್ಳಬಹುದು ? ನಾಲ್ಕಾರು ದಿನ ದು:ಖಿಸಬಹುದು. ನಂತರ ಕಾಲವೇ ಎಲ್ಲವನ್ನೂ ಮರೆಸುತ್ತದೆ. ಅಣ್ಣನಿಗೆ ಏನಿಲ್ಲವೆಂದರೂ ಕಡೆಯಪಕ್ಷ ಐವತ್ತು ಸಾವಿರವಾದರೂ ಉಳಿಯುತ್ತದೆ. ಇರುವ ಸೈಟಿನಲ್ಲಿ ಮನೆ ಕಟ್ಟಿಕೊಳ್ಳಲು ಸ್ವಲ್ಪ ಸಹಾಯವಾಗುತ್ತದೆ. ಅಮ್ಮನಿಗೂ ಬೆಳೆದ ಮಗಳ ಚಿಂತೆ ತಪ್ಪುತ್ತದೆ.

ನನಗೊಂದು ಸರಿಯಾದ ಕೆಲಸವಿದ್ದಿದ್ದರೆ ತಾಳಿಯ ಭಾಗ್ಯವೂ ಇಷ್ಟರಲ್ಲೇ ಒದಗಿ ಬರುತ್ತಿತ್ತೇನೋ ! ತಿಂಗಳಿಗೆ ಸಾವಿರಾರು ರೂಪಾಯಿಗಳನ್ನು ಎಣಿಸುವಂತಹ ವಧು ತಾನೆ ಎಲ್ಲರಿಗೂ ಬೇಕು? ಇನ್ನೂ ಆಸೆ, ಪ್ರತೀಕ್ಷೆ, ನಿರೀಕ್ಷೆಗಳಲ್ಲೇ ದಿನ ದೂಡುತ್ತಿದ್ದರೆ.... ಎಲ್ಲರ ತಿರಸ್ಕಾರಕ್ಕೆ ಗುರಿಯಾಗುವ ದಿನ ದೂರವಿಲ್ಲ.

ನನ್ನ ಸಾವಿಗೆ ಯಾರೂ ಕಾರಣರಲ್ಲ, ಎಲ್ಲರಿಗೂ ಭಾರವಾಗಿ ಬದುಕಿರುವ ಮನಸ್ಸಿಲ್ಲ. ಎಲ್ಲರಿಗೂ ನನ್ನ ಕೊನೆಯ ನಮಸ್ಕಾರಗಳು, ದಯವಿಟ್ಟು ನನ್ನನ್ನು ಕ್ಷಮಿಸಿಬಿಡಿ, ಇನ್ನೊಂದು ಜನ್ಮದಲ್ಲಿಯಾದರೂ ನಿಮ್ಮ ಋಣ ತೀರಿಸುವಂತಾಗಲಿ ಇಂತಿ ನಿಮ್ಮ ಅನುರಾಧ" ಎಂದು ಪತ್ರವನ್ನು ಬರೆದಿಟ್ಟಳು.

ಆ ಸಮಯಕ್ಕೆ ಸರಿಯಾಗಿ ಪಂಕಜ್ ಬಂದು ನೋಡಿ ಕೊನೆಗೆ ಅನುರಾಧಳನ್ನು ಮದುವೆಯಾಗುತ್ತಾನೆ.

ಇಲ್ಲಿ ಅನುರಾಧಳಿಗೆ ಕೆಲಸವಿಲ್ಲ, ಮದುವೆಯಾಗಿಲ್ಲ. ತಾಯಿ ಯಾವಾಗಲೂ ತುಂಬಾ ಬೇಜಾರಿನಿಂದ ಕೊರಗುತ್ತಾಳೆ. ಯಾವುದೇ ಗಂಡು ಬಂದರೂ ಅನುರಾಧಳನ್ನು ನೋಡಿ ವಾಪಸ್ಸು ಹೊರಟು ಹೋಗುತ್ತಾರೆ. ಇಲ್ಲಿ ಮದುವೆ ಆಗದೆ ಇರುವಂತಹ ಹೆಣ್ಣು ಎಂದರೆ ಇಡೀ ಲೋಕವೇ ಕೀಳಾಗಿ ನೋಡುತ್ತದೆ.

ಹೆಣ್ಣಿನ ಸಮಸ್ಯೆಗಳ ಉಗಮ ಮತ್ತು ಅವುಗಳ ವಿವಿಧ ಸ್ವರೂಪಗಳ ಅಧ್ಯಯನ ಮಾಡುವ, ಈ ಸಮಸ್ಯೆಗಳಿಗೆ ಕಾರಣವಾದ ಶಕ್ತಿಗಳನ್ನು ಗುರ್ತಿಸಿ, ಅವುಗಳ ವಿರುದ್ಧ ಹೋರಾಡಲು ಬೇಕಾದ ಸಿದ್ಧಾಂತವನ್ನು ಅನ್ವೇಷಿಸಲಾದ ಅಂಶಗಳನ್ನು ನೀಡಿದ್ದಾರೆ. ಕೃಷ್ಣನಿಗೆ

ಮೊರೆಯಿಟ್ಟು, ದ್ರೌಪದಿಯಂತೆ ರಾಮನಿಗೆ ಕಾಯುತ್ತಿದ್ದ. ಅಹಲ್ಯೆಯಂತೆ ಇಂದು ಹೆಣ್ಣು ಯಾವ ಯುಗ ಪ್ರವರ್ತಕನಿಗೂ ಮೊರೆಯಿಡುವುದರಿಂದ ಪ್ರಯೋಜನವಿಲ್ಲ. ತನ್ನ ವಿವೇಚನೆ ತನ್ನ ಕೈಯಲ್ಲೇ ಇವೆ ಎಂದು ಮನಗಂಡು ಸ್ತ್ರೀ ಶಕ್ತಿಯನ್ನು ನೆಚ್ಚಿಕೊಳ್ಳಬೇಕು ಎಂಬ ಸಂದೇಶವನ್ನು ಶಾರದಾ ವಿ.ಮೂರ್ತಿಯವರು ನೀಡಿದ್ದಾರೆ.

ಕಂದ ಬೇಕಮ್ಮ

ಚಿತ್ರ ಗರ್ಭವತಿಯಾಗಿರುತ್ತಾಳೆ. ಅವಳ ಅಮ್ಮ ಎಚ್ಚರಿಕೆಯ ಮಾತುಗಳನ್ನು ಹೇಳಿರುತ್ತಾಳೆ. ಚಿತ್ರನ ಕೈಗಳು ಅರಿವಿಲ್ಲದಂತೆ ನಯವಾಗಿ ಹೊಟ್ಟೆಯ ಮೇಲಾಡಿದವು. ಗರ್ಭದಲ್ಲಿರುವ ಕಂದ ಆರೋಗ್ಯದಿಂದ, ಚೆನ್ನಾಗಿ ಬೆಳೆಯಬೇಕು. ನೋಡಲು ಸುಂದರವಾಗಿರಬೇಕು. ಬಣ್ಣ ಛೇ ನಾನೇನೋ ಬಯಸುತ್ತಾ ಹೋದರೆ ದುರಾಸೆಯಾದೀತು! ಒಳಗಿರುವ ಕಂದ ಗಂಡೋ, ಹೆಣ್ಣೋ ? ಸಸ್ಪೆನ್ಸ್ !... ವಿವೇಕ ಎಚ್ಚರಿಸಿತು. ಆತುರ ಬೇಡ, ಕಾದು ನೋಡು, ಇನ್ನು ಆರೂವರೆ ತಿಂಗಳು ಮಾತ್ರ!.

ಇಪ್ಪತ್ತು ವರ್ಷಗಳ ನಂತರ ಬರಲಿರುವ ವಿಷವರ್ತುಲವನ್ನು ತಪ್ಪಿಸಲು ಹೆಣ್ಣು ಭ್ರೂಣಾವಸ್ಥೆಯಲ್ಲೇ ಹತವಾಗಬೇಕೆ ? ಇನ್ನೂ ಪ್ರಪಂಚವನ್ನೇ ಕಾಣದ ರಕ್ತ ಮಾಂಸದ ಆ ಭ್ರೂಣದ ತಪ್ಪಾದರೂ ಏನೂ ? ಇದು ಕ್ರೌರ್ಯದ ಪರಮಾವಧಿಯಲ್ಲವೆ?

ಚಿತ್ರಳ ಗಂಡ ಶೇಖರ್ ಇಂತಹ ಉದ್ಧಟತನ ಬೇಡ ಚಿತ್ರ. ದಿನಗಳು ಕಳೆದಂತೆ ಗರ್ಭಪಾತ ಮಾಡೋದು ಕಷ್ಟವಾಗುತ್ತಂತೆ. ಅದಕ್ಕೆ ಹೇಳ್ತಾ ಇರೋದು ಇದಕ್ಕೆ ನೀನು ಒಪ್ಪದೆ ಒಂದು ವೇಳೆ ನಿನಗೆ ಹೆಣ್ಣೇ ಹುಟ್ಟಿದರೆ ಮತ್ತೇ ನೀನು ಈ ಮನೆಗೆ ಬರಬೇಕಾಗಿಲ್ಲ ಎಂದು ಅಬ್ಬರಿಸಿ ಹೊರನಡೆದರು.

ರಕ್ಷಕನೇ ಭಕ್ಷಕನಾಗುತ್ತಿರುವ ಕಠೋರ ವಾಸ್ತವವನ್ನು ಜೀರ್ಣಿಸಿ ಕೊಳ್ಳವುದಾದರೂ ಹೇಗೆ? ತಂದೆಯಾಗಲಿರುವವರ ತಲೆಯಲ್ಲಿ ಇಂತಹ ಕೆಟ್ಟ ಹುಳು ಹೊಕ್ಕುದಾದರೂ ಹೇಗೆ? ಉತ್ತರ ಸ್ಪಷ್ಟವಾಗಿತ್ತು. ಅಂದರೆ ಹೆಣ್ಣಿಗೆ ಹೆಣ್ಣೇ ಶತ್ರು, ಅತ್ತೆಯ ಇನ್ನೊಂದು ಮುಖವನ್ನಾದರೂ ಅರಗಿಸಿಕೊಳ್ಳಲಾದೀತು.

ಚಿತ್ರ ತಾಯಿ ಮನೆಗೆ ಹೆರಿಗೆಗೆ ಬರುತ್ತಾಳೆ. ಬರುವಾಗ ಶೇಖರ್ ತನ್ನ ಮಾವನಿಗೆ ಗಂಡು ಮಗು ಆದರೆ ನಮಗೆ ತಿಳಿಸಿ ಇಲ್ಲದಿದ್ದರೆ ನಮಗೆ ಹೇಳಬೇಡಿ ಎಂದು ಹೇಳುತ್ತಾನೆ. ಆದರೆ ಹೆಣ್ಣು ಮಗು ಹುಟ್ಟುತ್ತದೆ. ಮಗು ಹುಟ್ಟಿ ನಾಲ್ಕು ದಿನ ಆದರೂ ಗಂಡ, ಅತ್ತೆ ಮಗುವನ್ನು ನೋಡುವುದಕ್ಕೆ ಬರುವುದಿಲ್ಲ. ಶಾಲಿನಿ ಬಂದು ಅಮ್ಮನನ್ನು ಮಗ ಸೊಸೆಯನ್ನು ದೂರ ಮಾಡಿದ್ರೆ ಆ ಮೇಲೆ ನೀನೇ ದು:ಖ ಅನುಭವಿಸಬೇಕಾಗುತ್ತೆ. ಅದು ನಿನಗೆ ಇಷ್ಟಾನಾ ! ನಾನು ಶುಭಕ್ಕ ಹೆಣ್ಣು ಮಕ್ಕಳೇ ಅಲ್ಲವಾ ! ಹಾಗಾದ್ರೆ ನಾವು ನಿನಗೆ ಬೇಡವಾ ? ಅಂತ ಕೇಳಿರುತ್ತಾಳೆ. ಆಗ ಅತ್ತೆ ಚಿತ್ರ ದಯವಿಟ್ಟು ನನ್ನನ್ನು ಕ್ಷಮಿಸಿಬಿಡು ನನ್ನ ಮೇಲಿನ ಕೋಪ ಕಡಿಮೆಯಾಗಿದ್ದರೆ ನನ್ನ ಮೊಮ್ಮಗಳನ್ನು ನನ್ನಕೈಗೆ ಕೊಡು ಚಿತ್ರ ಎಂದು ಮಗುವನ್ನು ನೋಡಿ ಸಂತೋಷ ಪಡುತ್ತಾಳೆ.

ಇಲ್ಲಿ ತಾಯಿಯಾಗಿ ಹೆಣ್ಣು ಬೇಕು, ಹೆಂಡತಿಯಾಗಿ ಹೆಣ್ಣು ಬೇಕು. ಆದರೆ ಮಗಳಾಗಿ ಮಾತ್ರ ಬೇಡ. ಇದರಿಂದ ಹೆಣ್ಣೇ ಹೆಣ್ಣಿಗೆ ಶತ್ರು ಎಂದು ಗೊತ್ತಾಗುತ್ತದೆ. ಗಂಡು ಮಗು ಆದರೆ ವರದಕ್ಷಿಣಿ ಬರುತ್ತದೆ. ಖರ್ಚು ಇರುವುದಿಲ್ಲ. ಆದರೆ ಹೆಣ್ಣು ಮಗು ಆದರೆ ತುಂಬಾ ಖರ್ಚು ಆಗುತ್ತದೆ. ವರಕ್ಷಿಣಿ ಕೊಟ್ಟು ಮದುವೆ ಮಾಡಬೇಕಾಗುತ್ತದೆ ಎಂದು ಯೋಚನೆ ಮಾಡುವಂತಹ ಜನ ಆದರೆ ಮನೆಗೆ ಹೆಣ್ಣೇ ಮಹಾಲಕ್ಷ್ಮೀ ಎಂಬುದನ್ನು ಮರೆತಿದ್ದಾರೆ. ಇನ್ನು ಆ ಮಗು ಹೊಟ್ಟೆಯಿಂದ ಆಚೆ ಬರುವ ಹಾಗಿಲ್ಲ. ಆಗಲೆ ಆ ಮಗುವಿನ ಪ್ರಾಣವನ್ನು ತೆಗೆಯುವುದರ ಬಗ್ಗೆ ಆಲೋಚನೆ ಮಾಡುತ್ತಾರೆ. ಹೆಣ್ಣು ಅಂದರೆ ಎಲ್ಲರಿಗೂ ಕೀಳಾಗಿ ಕಾಣಿಸುತ್ತದೆ. ಹೆಣ್ಣು ತನ್ನೆಲ್ಲಾ ನೋವು ಅಪಮಾನ, ಶೋಷಣೆ, ಕಾರ್ಯವನ್ನು ಎಲ್ಲಿಯತನಕ ಸಹಿಸಿಕೊಳ್ಳಲು ಸಾಧ್ಯ ಒಮ್ಮೆ ತಿರುಗಿ ನಿಲ್ಲಲೇಬೇಕಾದ ಅನಿವಾರ್ಯತೆ ಇದನ್ನೇ ಪ್ರತಿಭಟನೆ ಹೋರಾಟ ಎನ್ನುವ ನಿಟ್ಟಿನಲ್ಲಿ ಇಂದು ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದಾಳೆ.

ಅಧ್ಯಾಯ – 5

ಡಾ॥ ವಸುಂಧರಾ ಭೂಪತಿಯವರ ಕಥೆಗಳಲ್ಲಿ ಶೋಷಿತ ಸಮುದಾಯದ ಸ್ವರೂಪ

ಅಧ್ಯಾಯ – 5

ಡಾ॥ ವಸುಂಧರಾ ಭೂಪತಿಯವರ ಕಥೆಗಳಲ್ಲಿ ಶೋಷಿತ ಸಮುದಾಯದ ಸ್ವರೂಪ

ವಧು ಪರೀಕ್ಷೆ

ಲತಾ, ಇವತ್ತು ಸಂಜೆ ಮನೆಗೆ ಬೇಗ ಬಂದು ಬಿಡು. ನಿನ್ನನ್ನು ನೋಡಲು 'ವರ' ನ ಕಡೆಯವರು ಬರುತ್ತಿದ್ದಾರೆ ಎಂದು ಅಮ್ಮ ತನ್ನ ಮಗಳಿಗೆ ಹೇಳುತ್ತಾರೆ.

ನನ್ನ ಮದುವೆಯ ಹುಚ್ಚು ನಿನಗಿನ್ನೂ ಬಿಟ್ಟಿಲ್ಲವೇ 36 ವರ್ಷಗಳಾಗುತ್ತ ಬಂತು. ಈ ಮುಖಾನ ಯಾರು ತಾನೇ ಒಪ್ಪಿಕೊಳ್ಳುತ್ತಾರೆ ? ಸುಮ್ಮನೆ 'ವರ' ನ ಕಡೆಯವರು, ಬಂದು ನಾವು ಮಾಡಿದ್ದನೆಲ್ಲ ತಿಂದು ಹೋಗುತ್ತಾರಷ್ಟೇ. ಅಲ್ಲದೆ ಅವರ ಮುಂದೆ ಅಲಂಕಾರ ಮಾಡಿಕೊಂಡು ಕುಳಿತುಕೊಳ್ಳೋದು ನೆನೆಸಿಕೊಂಡರೆ ನನಗೆ ಅಸಹ್ಯ ಅನ್ಸುತ್ತೆ. ಹುಡುಗ ಬಾಂಬೆಯಲ್ಲಿ ಪ್ರೈವೇಟ್ ಕೆಲಸದಲ್ಲಿದ್ದಾನಂತೆ, ಹೆಂಡತಿ ಸತ್ತು ಒಂದು ವರ್ಷವಾಯಿತಂತೆ, ಮಕ್ಕಳಿಲ್ಲವಂತೆ ಬಿ.ಎ. ಓದಿದ್ದಾನಂತೆ. ಹುಡುಗನಿಗೆ 42 ವರ್ಷಗಳಂತೆ. ಹುಡುಗನ ಕಡೆಯವರು ಬಂದರು. ಲತಾ ರೂಮಿನ ಕಿಟಕಿಯಿಂದಲೇ ವರನನ್ನು ಗಮನಿಸಿದಳು. ತಲೆಯಲ್ಲಿ ಅರ್ಧ ಕೂದಲು ಉದುರಿ ಹೋಗಿವೆ. ಹಿಂದಿನ ಕೂದಲನ್ನೇ ಮುಂದೆ ಬಾಚಿಕೊಂಡು ತಲೆಗೊಂದು ನೆಟ್ ಹಾಕಿಕೊಂಡಿದ್ದ. ತೆಳ್ಳಗೆ ಒಳ್ಳೆ ಟಿ.ಬಿ. ಪೇಷಂಟ್ ತರಹ ಇದ್ದ. ಅವನ ಜೊತೆ ಬಂದವಳು ಅವನ ಅಕ್ಕ ಇರಬೇಕೇನೋ ಕಾಂಚಿವರಂ ರೇಷ್ಮೆ ಸೀರೆ ಉಟ್ಟು ಬಂದಿದ್ದಳು. ದಢೂತಿ ಹೆಂಗಸು ಇಬ್ಬರೂ ಸರ್ಕಸ್‌ನಲ್ಲಿನ ಬಫೂನುಗಳಂತೆ ಕಾಣುತ್ತಿದ್ದರು.

ಲತಾ ಕಾಫಿ, ತಿಂಡಿ ಎಲ್ಲರಿಗೂ ತಂದುಕೊಟ್ಟು ಅಲ್ಲೇ ಕುಳಿತುಕೊಂಡು ನನ್ನ ಸಂಬಳದಲ್ಲಿ ನಿಮಗೆ ಚಿಕ್ಕಾಸೂ ಸಿಗುವುದಿಲ್ಲ. ತಂಗಿಯರ ಮದುವೆಯ ಸಾಲ ಇನ್ನೂ ಸ್ವಲ್ಪ ತೀರಿಸಬೇಕು. ಅಮ್ಮನ ಔಷಧಿ ಖರ್ಚು ಇದ್ದೇ ಇರುತ್ತೆ. ಆಮೇಲೆ ಈ ಸಾಲವೆಲ್ಲ ತೀರಿದ ಮೇಲೆ ನಾನು

ವಾಲೆಂಟರಿ ರಿಟೈರ್‌ಮೆಂಟ್ ತೆಗೆದುಕೊಳ್ಳೋಣ ಅಂತಿದ್ದೀನಿ. ಇಲ್ಲಿ ನೀವು ಒಪ್ಪಿದರೆ ಈಗಲೇ ರಿಸೈನ್ ಮಾಡಿ ನಿಮ್ಮ ಜೊತೆಗೆ ಬಾಂಬೆಗೆ ಬಂದು ಬಿಡ್ತೀನಿ. ಹಾಯಾಗಿ ಗೃಹಿಣಿಯಾಗಿ ಸಂಸಾರ ಮಾಡಿಕೊಂಡಿರಬೇಕೆಂದು ನನಗಾಸೆಯಿದೆ.

ಅದಕ್ಕೆ ವರನು ನನಗೆ ತಂಗಿಯರ ಮದುವೆ, ಮುದಿ ತಂದೆ ತಾಯಿಗಳ ರಕ್ಷಣೆ ಎಲ್ಲದಕ್ಕೂ ನಿಮ್ಮ ಸಂಬಳದ ಹಣ ಸಹಾಯವಾಗುತ್ತೆ ಎನ್ನುವ ಕಾರಣಕ್ಕೆ ಒಪ್ಪಿಕೊಂಡಿದ್ದೆ. ಆದರೆ ಈಗ ನೋಡಿದ್ರೆ, ರೆಸೈನ್ ಮಾಡ್ತೀನಿ ಅಂತಿದ್ದೀರ ಮನೇಲಿ ಅಡುಗೆ, ಮನೆ ಕೆಲಸ ಮಾಡಿಕೊಂಡು ಬಿದ್ದಿರುವುದಕ್ಕೆ ನೀವೇ ಆಗ್ಬೇಕಾ ? ಯಾವುದಾದರೂ ಹೆಣ್ಣು ಸಿಕ್ಕುತ್ತಾಳೆ ಎಂದು ಹೇಳಿದಾಗ.

"ನೀವು ಒಪ್ಪಿರೋದು ನನ್ನ ಸಂಬಳವನ್ನೇ ಹೊರತು ನನ್ನನ್ನಲ್ಲ ಎನ್ನುವುದನ್ನು ತಿಳಿಸಿಯೇ ಬಿಟ್ಟಿರಲ್ಲ

ಎಂದಾಗ ಅವರು ಎದ್ದು ವಾಪಸ್ಸು ಹೊರಟು ಹೋದರು. ಅದಕ್ಕೆ ಮುಂಚೆ ಲತಾ ಯಾರನ್ನು ಪ್ರೀತಿ ಮಾಡಿದರು. ಪರವಾಗಿಲ್ಲ, ಅಡಿಗೆ ಮಾಡುವುದಕ್ಕೆ ಬರುವುದಿಲ್ಲ ಎಂದರು ಪರವಾಗಿಲ್ಲ. ಆದರೆ ಅವರಿಗೆ ಬೇಕಾಗಿರುವುದು ಬರಿ ಅವಳ ಸಂಪಾದನೆ ಮಾತ್ರ ಮುಖ್ಯ ಅವಳು ಯಾವಾಗ ಸಂಬಳ ಕೊಡಲ್ಲ ಎಂದಳೋ ಆಗಲೇ ಆ ವರನಿಗೆ ಈ ಮದುವೆ ಬೇಡವೆನಿಸಿಬಿಟ್ಟ. ಇಲ್ಲಿ ಹುಡುಗಿಗೆ ಬೆಲೆ ಇಲ್ಲ ಆದರೆ ಅವಳು ಸಂಪಾದನೆ ಮಾಡುವ ದುಡ್ಡಿಗೆ ಮಾತ್ರ ಬೆಲೆ.

ಇಂದು ಹೊಸ ಶತಮಾನದ ದಿನಗಳಲ್ಲಿ ಸ್ತ್ರೀ ಪುರುಷರೆಂಬ ಅಭೇಧದೊಳಗೂ ಒಂದೆಡೆ ಈ ಪುರುಷ ವರ್ಗ ಅವಳಿಗೆ ಎಲ್ಲಾ ಸೌಕರ್ಯ ಸವಲತ್ತುಗಳನ್ನು ನೀಡುವುದರೊಂದಿಗೆ ಸಮಾನ ಸ್ಥಾನವನ್ನು ಕಲ್ಪಿಸಿಕೊಟ್ಟಂತೆ ನಾಟಕವಾಡುತ್ತಿದೆ. ಜೊತೆಗೆ ಅವಳನ್ನು ಉನ್ನತೀಕರಿಸದ ಮಟ್ಟದಲ್ಲಿ ದೌರ್ಜನ್ಯೀಕರಿಸುವ ಅಧುನಿಕ ರೀತಿಯ ಆತಂಕಗಳನ್ನು ಅವಳಿಗೆ ಉಚಿತ ವಂತಿಕೆಯಾಗಿ ನೀಡುತ್ತಿವೆ.

ದಾರಿ

ದಿವ್ಯ ಒಂದು ಬಾರಿ ಆಫೀಸಿಗೆ ಹೋಗುವುದಕ್ಕೆ ಬಸ್ಸಿಗೆ ಕಾಯುತ್ತಿರುತ್ತಾಳೆ, ಬಸ್ಸು ಬಂದಿಲ್ಲ. ಅಲ್ಲಿ ಎದುರುಗಡೆ ಒಂದು ದೊಡ್ಡ ಮನೆ ಕಾಣಿಸಿತು. ಆ ಮನೆಯ ಕಿಟಕಿ ಸ್ವಲ್ಪ ತೆರೆದುಕೊಂಡಿತು. ಕಿಟಕಿಯಿಂದ ಒಬ್ಬ ಅಜ್ಜಿ ದಿವ್ಯಳನ್ನು ನೋಡಿ ಕರೆದಳು. ಅದನ್ನು ನೋಡಿ ದಿವ್ಯ ಆ ಮನೆಯ ಕಿಟಕಿ ಹತ್ತಿರ ಹೋದಾಗ ಆ ಅಜ್ಜ ಕಿಟಕಿಯಿಂದ ನೀನು ದಿವ್ಯ ಅಲ್ವೇನಮ್ಮಾ. ನೀವು ರಾಜಮ್ಮನವರಲ್ವೇ ? ನನಗೆ ಗುರುತೇ ಸಿಗಲಿಲ್ಲ. ಹೇಗಮ್ಮ ಗುರುತು ಹತ್ತುತ್ತೆ. ಸಾಯಲೂ ಆಗದೆ ಬದುಕಲೂ ಆಗದೇ ಭೂಮಿಗೆ ಭಾರವಾಗಿದ್ದೀನಿ.

ನಾನು ನತದೃಷ್ಟೆ ಕಣಮ್ಮ, ನನ್ನ ಮಗ, ಸೊಸೆ ನನ್ನನ್ನು ಒಳಗಡೆ ರೂಮಿನಲ್ಲಿ ಕೂಡಿ ಹಾಕಿ ಹೋಗ್ತಾರೆ. ಅವರು ಕೊಟ್ಟಿದ್ದನ್ನು ಮಾತ್ರ ತಿನ್ನಬೇಕು. ಈ ದಿನ ರೂಮಿನ ಬಾಗಿಲು ಹಾಕಿರಲಿಲ್ಲವಾದ್ದರಿಂದ ನಾನು ಹಾಲ್‌ನ ಕಿಟಕಿಗೆ ಬರುವ ಹಾಗಾಯ್ತು ಎಂದಾಗ ಮಧ್ಯಾಹ್ನ ತಿನ್ನಲೆಂದು ಒಂದು ಬಿಸ್ಕತ್ ಪ್ಯಾಕೇಟ್ ಇಟ್ಟುಕೊಂಡಿದ್ದು, ಅದನ್ನೇ ಅಜ್ಜಿಗೆ ಕೊಟ್ಟಳು.

ಇವರು ಮಗನಿಗೋಸ್ಕರ ಎಷ್ಟು ಕಷ್ಟಪಟ್ಟರು. ಚಿಕ್ಕವಯಸ್ಸಿನಲ್ಲಿಯೇ ಗಂಡನನ್ನು ಕಳೆದುಕೊಂಡು ಅವರಿವರ ಮನೆಯಲ್ಲಿ ಅಡುಗೆ ಕೆಲಸ ಮಾಡಿ ಮನೆಯಲ್ಲಿ ಹಪ್ಪಳ, ಉಪ್ಪಿನಕಾಯಿ ತಯಾರಿಸಿ ಅದನ್ನು ಮಾರಿ ಅರೆಹೊಟ್ಟೆ ಊಟ ಮಾಡಿ ಮಗನನ್ನು ಹಾಸ್ಟೆಲಿನಲ್ಲಿಟ್ಟು ಕಷ್ಟಗಳ ಅರಿವೇ ಬಾರದಂತೆ ಅವನನ್ನು ಬೆಳೆಸಿದ್ದಕ್ಕೆ, ಓದಿಸಿದ್ದಕ್ಕೆ, ಈ ಶಿಕ್ಷೆಯೇ ? ಅವನದೆಂಥ ಕಟುಕ ಮನಸ್ಸಿರಬಹುದು. ಸಾವಿರಾರು ಜನರಿಗೆ ರುಚಿರುಚಿಯಾದ ಅಡುಗೆ, ತಿಂಡಿ ಮಾಡಿ ಹಾಕಿದವರಿಗೆ ಇಷ್ಟೆಲ್ಲ ಶ್ರೀಮಂತಿಕೆ ಇದ್ದೂ, ಊಟಕ್ಕೆ ಗತಿಯಿಲ್ಲದೆ ಹೋಯಿತೆ? ಅವರ ಮಗ ಸೊಸೆಯರದು ಎಂಥದು ಹೀನ ಮನಸ್ಸಿರಬಹುದು ಎಂದುಕೊಂಡಾಗ.

ಅಜ್ಜಿಯು ನನ್ನ ಮಗನು ಒಂದು ಹುಡುಗಿಯನ್ನು ಪ್ರೀತಿಸಿ ಮದುವೆ ಮಾಡಿಕೊಂಡ, ಅವರಿಗೆ ದೇವರು ಭಕ್ತಿಯಿಲ್ಲ, ಮನೆಯಲ್ಲಿ ಗೆಳೆಯರ ಜೊತೆ ಪಾರ್ಟಿ ಮಾಡುತ್ತಾರೆ. ನನಗೆ ಅದೆಲ್ಲಾ ಇಷ್ಟ ಆಗದೆ ಬೇರೆ ಅಡಿಗೆ ಮಾಡಿಕೊಳ್ಳುತ್ತಿದ್ದೆ. ನನಗೆ ಕುತ್ತಿಗೆಯ ಹತ್ತಿರ ಇಸಬು ಇದೆ ಅದಕ್ಕೆ ಮೈಯೆಲ್ಲಾ ಹರಡುತ್ತದೆ, ನೋಡಲು ಅಸಹ್ಯವಾಗುತ್ತದೆ ನೀನು ನನ್ನ ಮುಟ್ಟಬೇಡ ಎಂದು

ರೂಮಿನಲ್ಲಿ ಕೂಡಿಹಾಕಿದ್ದಾರೆ ಎಂದರು. ನಂತರ ಇನ್ನೊಂದು ದಿನ ಹೋದಾಗ ಅಜ್ಜಿ ಸತ್ತು ಹೋಗಿದ್ದರು.

ಇಲ್ಲಿ ಹೆಣ್ಣಿಗೆ ಹೆಣ್ಣೇ ಶತ್ರು ಅಂದರೆ ಸೊಸೆಗೆ ಅತ್ತೆಯನ್ನು ನೋಡಿದರೆ ಆಗದೆ ಹೋಯಿತು. ಹೆಂಡತಿಯ ಮಾತನ್ನು ಕೇಳಿಕೊಂಡು ಗಂಡನು ಅಮ್ಮನನ್ನು ದೂರವಿಟ್ಟ. ಇಸಬು ಇದ್ದ ಕಾರಣ ಅದು ದೊಡ್ಡ ವ್ಯಾಧಿ ಎಂದು ತಿಳಿದು ಕೋಣೆಯೊಳಗೆ ಹಾಕಿದರು. ಒಬ್ಬ ತಾಯಿ ಎಷ್ಟು ಕಷ್ಟುಪಟ್ಟು ಮಕ್ಕಳನ್ನು ಸಾಕುತ್ತಾರೆ. ಆದರೆ ಆ ಎಲ್ಲಾ ಮಕ್ಕಳು ಸೇರಿ ಆ ತಾಯಿಯನ್ನು ಸಾಕುವುದಕ್ಕೆ ಆಗುವುದಿಲ್ಲ. ವಯಸ್ಸು ಆದ ಮೇಲೆ ಅವರನ್ನು ತುಂಬಾ ಶೋಷಣೆಗೆ ಒಳಪಡಿಸುತ್ತಾರೆ. ವೃದ್ಧಾಶ್ರಮಕ್ಕೆ ಸೇರಿಸುವುದು ಅನಾಥಾಶ್ರಮಕ್ಕೆ ಸೇರಿಸುವುದು. ತಂದೆ ತಾಯಿಗಳನ್ನು ನೋಡಿಕೊಳ್ಳುವ ಮಕ್ಕಳಿರಲ್ಲ. ಆಧುನಿಕ ಸೀತೆಯರ ಕಥೆ ಇಂತಹ ಕಥೆಗಳಿಗೆ ಅಂತಿಮ ವಿಧಾಯವನ್ನು ನೀಡುವುದು ಹೇಗೆ ಅದಕ್ಕೆ ಅಭಿವ್ಯಕ್ತಿ ಸ್ವಾತಂತ್ರ್ಯ ಪಡೆದುಕೊಳ್ಳುವುದು ಹೇಗೆಂದರೆ, ಸ್ತ್ರೀ ತನ್ನಷ್ಟಕ್ಕೆ ತಾನೇ ತನಗಾದ ಅನ್ಯಾಯದ ವಿರುದ್ಧ ಪ್ರತಿಭಟಿಸುವ ಆತ್ಮಸ್ಥೈರ್ಯವನ್ನು ಪಡೆದುಕೊಂಡಾಗ ಮತ್ತು ತಾನೂ ಹೆಣ್ಣು ಎಂಬ ಕೀಳರಿಮೆಯನ್ನು ಕಿತ್ತೆಸೆದು ಸಮಾಜದ ದುಷ್ಟ ಶಕ್ತಿಗಳ ವಿರುದ್ಧ ವಿಮುಖವಾಗಿ ನಿಲ್ಲುವಂತಹ ಧೈರ್ಯವನ್ನು ಕಂಡು ಕೊಂಡಾಗ ಮಾತ್ರ ಸಾಧ್ಯವಾಗುತ್ತದೆ.

ಎಲ್ಲಿಯವರೆಗೆ ಸ್ತ್ರೀ ತಾನು ಶೋಷಣೆಗೆ, ಅವಮಾನಕ್ಕೆ, ದೌರ್ಜನ್ಯಕ್ಕೆ ಹೆಸರುವಳೋ ಅಲ್ಲಿಯವರೆಗೆ ಸ್ತ್ರೀಯರನ್ನು ಶೋಷಿಸುವ ಜನರಿರುತ್ತಾರೆ ಎಂಬುದು ಕಟುಸತ್ಯವಾಗಿದೆ.

ವಿದಗ್ಧೆ

ಅಜ್ಜು ಮತ್ತು ನಿಶಾ ಪ್ರೀತಿಯ ಗೆಳೆಯರಾಗಿದ್ದರು. ನಿಶಾಳನ್ನು ಬೇರೆ ಕಡೆಗೆ ಕೊಟ್ಟು ಮದುವೆ ಮಾಡಿರುತ್ತಾರೆ. ಆದರೆ ನಿಶಾಳ ಗಂಡ ಸರಿ ಇರುವುದಿಲ್ಲ. ಯಾವಾಗಲೂ ಅಜ್ಜುನ ಬಗ್ಗೆ ಅನುಮಾನ ಪಡುತ್ತಾನೆ. ನಿಶಾಳನ್ನು ಕುಡಿಯುವುದು ಅಭ್ಯಾಸ ಮಾಡಿಕೋ ಎಂದು ಹೇಳುತ್ತಾನೆ. ನಿಶಾ ಗರ್ಭವತಿಯಾಗಿದ್ದಾಗ ಈಗಲೇ ಮಗು ಆದರೆ ಅಂದ ಕೆಟ್ಟು ಹೋಗುತ್ತದೆ ಮಗು ಬೇಡವೆಂದು ತೆಗೆಸುತ್ತಾನೆ. ಒಂದು ಸಲಿ ನಿಶಾಳನ್ನು ತನ್ನ ಸ್ನೇಹಿತನಾದ ಮಹೇಂದ್ರನ ಹತ್ತಿರ ಬಿಟ್ಟು ಬರುತ್ತಾನೆ. ಅದಕ್ಕೆ ಅವಳು ಮಹೇಂದ್ರನನ್ನು ಬೈದು ಮನೆಗೆ ಬಂದಾಗ ಗಂಡ

ಅವಳನ್ನು ಬೈದು ಸಿಗರೇಟಿನಿಂದ ಮೈಯೆಲ್ಲಾ ಸುಟ್ಟು ಹಾಕುತ್ತಾನೆ. ರಾಕ್ಷಸನಂತೆ ಕಚ್ಚುತ್ತಾನೆ. ನಂತರ ಹೋಗು ಮನೆಯಿಂದ ಎಲ್ಲಿಗೆ ಹೋಗುತ್ತೀಯೋ ಹೋಗು ಎಂದು ಹೊರ ತಳ್ಳುತ್ತಾನೆ. ಅಲ್ಲಿಂದ ನಿಶಾ ಅಜ್ಜುವಿನ ಸಹಾಯವನ್ನು ಕೇಳಿಕೊಂಡು ಬಂದು ಅಜ್ಜುವಿಗೆ ಎಲ್ಲಾ ವಿಷಯವನ್ನು ಹೇಳುತ್ತಾಳೆ. ನಿಶಾ ಅವರ ತಂದೆ ತಾಯಿ ಬಂದು ಅಜ್ಜುವನ್ನು ಮದುವೆ ಮಾಡಿಕೊ ಎಂದಾಗ ಅಜ್ಜು ನನಗೆ ಆಪ್ತ ಸ್ನೇಹಿತ ನಾನು ಸಂಸ್ಥೆ ಸ್ಥಾಪನೆ ಮಾಡುತ್ತೇನೆ. ನನ್ನಂತೆ ಗಂಡನಿಂದ ಹಿಂಸೆಗೊಳಗಾದ ಮಹಿಳೆಯರಿಗೆ, ಅನಾಥೆಯರಿಗೆ, ವಿಧವೆಯರಿಗೆ ಆಶ್ರಯ ಕೊಡ್ತೀನಿ ಎಂದಳು.

ಅಂದರೆ ಆ ಹೆಣ್ಣು ತಾನು ಪಟ್ಟಂತಹ ಕಷ್ಟ ಬೇರೆ ಯಾವ ಹೆಣ್ಣು ಪಡಬಾರದು ನನ್ನಂತೆ ಎಷ್ಟೋ ಜನ ಹೆಂಗಸರು ಇದೇ ರೀತಿ ಕಷ್ಟಕ್ಕೆ ಗುರಿಯಾಗಿರುತ್ತಾರೆ. ಅವರಿಗೆ ನನ್ನ ಕೈಯಲ್ಲಿ ಆಗುವ ಸಹಾಯವನ್ನು ಮಾಡಬೇಕು ಇಲ್ಲಿ ಗಂಡನಾದವನು ಹೆಂಡತಿಯನ್ನು ಅನುಮಾನಿಸುವುದು ಬೇರೆ ಗಂಡಸಿನ ಜೊತೆ ಬಿಡುವುದು ಸಿಗರೇಟಿನಿಂದ ಸುಡುವುದು, ಮಗು ಹುಟ್ಟುವುದಕ್ಕಿಂತ ಮುಂಚೇನೆ ಆ ಮಗುವನ್ನು ಸಾಯಿಸುವುದು. ಇದು ಮನುಷ್ಯನಲ್ಲಿರುವ ಮೃಗತ್ವ ಎಂದು ಹೇಳಬಹುದು. ಹಳೆಯ ಕಾಲದಿಂದಲೂ ಹೆಣ್ಣನ್ನು ಶೋಷಣೆಗೆ ಒಳಪಡಿಸುವುದೇ ಮುಖ್ಯ ಗುರಿಯಾಗಿದೆ. ಪ್ರಗತಿಪರ ಧೋರಣೆಗಳು ಆಲೋಚನೆಗಳಲ್ಲಿ ಮಾತ್ರ ಉಳಿದು ಹೋಗುವುದೋ ನಿತ್ಯ ಬದುಕಿನ ಸ್ವೀಕರಣೆಯಾಗಿ ಬಂದಾಗ ಹೆಣ್ಣಿನ ಆಯ್ಕೆ ಯಾವುದು ? ಹೆಣ್ಣಿನ ದಿಟ್ಟ ಹೆಜ್ಜೆಗಳ ಗುರುತುಗಳಿವೆ. ಸಹಿಷ್ಣುತೆ ಲಕ್ಷಣ ಹೊರಗಿನಿಂದ ಬಂದ ಒತ್ತಾಯವಾಗದೆ ಅವಳ ಜಾಯಿಮಾನದ ಬೇರುಗಳಲ್ಲೇ ಅಡಗಿಹೋಗಿದೆಯೇ ? ಕಡೆಗೆ ಸ್ತ್ರೀ ಅರ್ಥವಾಗದೆ ಪ್ರಶ್ನೆಯೇ ಆಗುತ್ತಾಳೆ. ಪುರುಷನಷ್ಟೇ ಅಲ್ಲದೇ ಸ್ತ್ರೀ ಕೂಡ ತಾನೇ ಏರ್ಪಡಿಸಿಕೊಂಡಿರುವ ವರ್ತುಲ ಬಂದಿದೆ. ತನ್ನ ಅಸ್ತಿತ್ವಕ್ಕಾಗಿ ಅವಿರತ ಹೋರಾಟ ನಡೆಸುತ್ತಲೇ ಇದ್ದಾಳೆ.

ಬಹಿಷ್ಕಾರ

ಯಂಕಮ್ಮನ ಮೊಮ್ಮಗಳು ಮನೆ ಬಿಟ್ಟು ಶೂದ್ರ ಹುಡುಗನನ್ನು ಕರೆದುಕೊಂಡು ಓಡಿ ಹೋಗಿರುತ್ತಾಳೆ.

ಆ ಊರಿನಲ್ಲೆಲ್ಲ ಬರೀ ಯಂಕಮ್ಮನ ಸುದ್ಧೀನೆ ಮಾತನಾಡಿಕೊಳ್ಳುತ್ತಿರುತ್ತಾರೆ.

ಯಂಕಮ್ಮ ದೇವಸ್ಥಾನಕ್ಕೆ ಬಂದಾಗ ಪ್ರತಿಯೊಬ್ಬರು ಅದರ ಬಗ್ಗೇನೆ ಮಾತನಾಡುತ್ತಿರುತ್ತಾರೆ. ಅಲ್ಲಿ ಪೂಜಾರಿಯು ಯಂಕಮ್ಮನಿಗೆ ನೋಡಿ ನಿಮ್ಮ ಮೊಮ್ಮಗಳನ್ನು

ಮತ್ತೆ ಮನೆಗೆ ಸೇರಿಸಿದರೆ ನೀವು ಯಾವತ್ತೂ ದೇವಸ್ಥಾನಕ್ಕೆ ಬರಬಾರದು ನಿಮ್ಮನ್ನು ಬಹಿಷ್ಕಾರ ಮಾಡುತ್ತೇವೆ ಎಂದು ಹೇಳಿದಾಗ ನಮಗೆ ಬಹಿಷ್ಕಾರ ಹಾಕಿದರೆ ಈ ಊರಿನ ಮುಕ್ಕಾಲು ಭಾಗ ಬ್ರಾಹ್ಮಣರಿಗೆ ಬಹಿಷ್ಕಾರ ಹಾಕಬೇಕು. ಯಾಕೆಂದರೆ ಜನಿವಾರ ಗೊಟಕ್ಕೆ ನೇತು ಹಾಕಿ ಮಾಂಸ ತಿಂದು ಬರೋದು, ಕುಡಿದು ಬರುವುದು, ಶೂದ್ರ ಹೆಂಗಸರ ಜೊತೆ ಸಂಬಂಧವನ್ನು ಇಟ್ಟುಕೊಂಡಿರುವವರು ವಿಧವೆಯನ್ನು ಬಸುರಿ ಮಾಡಿ ತನ್ನ ಆಸ್ತಿಯೆಲ್ಲಾ ಹೊಡೆದುಕೊಂಡಿರುವವರು ಇವರಿಗೆಲ್ಲಾ ಕೂಡ ಬಹಿಷ್ಕಾರ ಹಾಕಬೇಕು.

ಮನುಷ್ಯತ್ವನೇ ಮುಖ್ಯ ಅಲ್ವೇನ್ರಿ. ಜಾತಿ ತೆಗೆದುಕೊಂಡು ಏನು ಮಾಡುತ್ತೀರಾ ? ರಾಮ, ಕೃಷ್ಣ, ವಿಷ್ಣುವಿನ ಅವತಾರವೇ ಇರಬಹುದು. ಅವರು ಮಾಂಸ ತಿನ್ನುವುದಲಿಲ್ಲವೇನ್ರೀ ?

ಇಲ್ಲಿ ಜಾತಿ, ಕುಲ ಮುಖ್ಯವಾಗಿ ನೋಡುತ್ತಾರೆ. ಮೊದಲಿನಿಂದಲೂ, ಹಳೆಯ ಕಾಲದಿಂದಲೂ ಇದು ಬಂದಿರುವ ಸಂಪ್ರದಾಯ. ಮೇಲು ಕೀಳು ಎಂಬ ಭಾವನೆಗಳನ್ನು ಇಲ್ಲಿ ವ್ಯಕ್ತಪಡಿಸುತ್ತಾರೆ. ಕೆಳವರ್ಗದವರನ್ನು ಕೀಳಾಗಿ ನೋಡುವುದು. ಅವರನ್ನು ಶೋಷಣೆಗೆ ಒಳಪಡಿಸುವುದು ಮುಖ್ಯವಾಗಿ ಇಲ್ಲಿ ಮೇಲು ಕೀಳು ಎಂಬ ಭಾವನೆಯನ್ನು ತೆಗೆದು ಹಾಕಬೇಕು. ಎಲ್ಲರೂ ಒಂದೇ ಎಂಬ ಭಾವನೆಯನ್ನು ಪ್ರತಿಯೊಬ್ಬ ಮನುಷ್ಯನಲ್ಲಿಯೂ ಬರುವಂತೆ ಮಾಡಬೇಕು. ಆಗ ಈ ಜಾತಿ, ಕುಲ ಎಲ್ಲವೂ ಬಿಟ್ಟು ಹೋಗುತ್ತದೆ. ಎಲ್ಲರೂ ಸರಿ ಸಮಾನರು ಎಂದು ನೋಡುವಂತಹ ಕಾಲ ಬರುತ್ತದೆ.

ಅಧ್ಯಾಯ – 6

ಡಾ॥ ಬಿ.ಟಿ. ಲಲಿತಾನಾಯಕ್‌ರವರ ಕಥೆಗಳಲ್ಲಿ ಶೋಷಿತ ಸಮುದಾಯದ ನೆಲೆ

ಅಧ್ಯಾಯ – 6

ಡಾ॥ ಬಿ.ಟಿ. ಲಲಿತಾನಾಯಕ್‌ರವರ ಕಥೆಗಳಲ್ಲಿ ಶೋಷಿತ ಸಮುದಾಯದ ನೆಲೆ

ಉಪಚಾರ

ಅಜ್ಜಣ್ಣಿಯನ್ನು ಸೊಸೆ ಮತ್ತು ಮೊಮ್ಮಕ್ಕಳು ಆಚೆ ಇಟ್ಟಿರುತ್ತಾರೆ. ಅವರು ಊಟ ಮಾಡಿ ಉಳಿದ ಅನ್ನವನ್ನು ಅಜ್ಜಣ್ಣಿಗೆ ಕೊಡುತ್ತಿದ್ದರು. ಅಜ್ಜಣ್ಣಿ ಅದನ್ನೇ ತಿನ್ನುತ್ತಿದ್ದರು. ಒಂದು ದಿನ ಮೊಮ್ಮಕ್ಕಳು, ಅವರು ಊಟ ಮಾಡುವುದಕ್ಕಿಂತ ಮುಂಚೆ ಅಜ್ಜಣ್ಣಿಗೆ ಊಟ ತಂದು ಬಡಿಸಿದರು. ಅಜ್ಜಣ್ಣಿ ಊಟ ಮಾಡುತ್ತಿದ್ದಾಗ ಮೊಮ್ಮಕ್ಕಳು ಮಜ್ಜಿಗೆ ತಂದು ಬಡಿಸಿದರು. ಸೊಸೆ ಅಜ್ಜಣ್ಣಿ ತಲೆಯನ್ನು ಬಾಚಿದಳು.

ಅಜ್ಜಣ್ಣಿ ಯಾವಾಗಲೂ ಬೈಯ್ಯುತ್ತಿದ್ದ ಸೊಸೆ ಈವತ್ತು ತುಂಬಾ ಪ್ರೀತಿ ನನ್ನ ಮೇಲೆ ತೋರಿಸುತ್ತಿದ್ದಾಳೆ ಎಂದುಕೊಂಡಳು. ಮೊಮ್ಮಕ್ಕಳು ಅಜ್ಜಿ ತೊಡೆಯ ಮೇಲೆ ಕುಳಿತುಕೊಂಡು ಆಟ ಆಡುತ್ತಾ ಇದೇನು ಅಜ್ಜಿ ನನಗೆ ಕೊಡು ನಿನ್ನ ಕೈನಲ್ಲಿ ಇರುವ ಬೆಳ್ಳಿ ಕಡಗ ನಾನು ಆಲು ಗೆಜ್ಜೆ ಮಾಡಿಸಿಕೊಳ್ಳುತ್ತೇನೆ ಎಂದಾಗ, ಸೊಸೆ ಮಗಳನ್ನು ಬೈಯ್ಯುತ್ತಾಳೆ. ಅಜ್ಜಣ್ಣಿ ಎದುರಿಗೆ ನಾಟಕವಾಡಿ ಆಗ ಅಜ್ಜಿ ಕೊಡುತ್ತೇನೆ ಕಾಲುಚೈನು ಮಾಡುವವರು ಈ ಊರಿಗೆ ಬರಲಿ ಎಂದಾಗ ಸೊಸೆಯು ಅವರು ಈ ಊರಿಗೆ ಬಂದು ಮೂರು ದಿನ ಆಯಿತು ಕೊಟ್ಟರೆ ಮಾಡಿಕೊಡುತ್ತಾರಂತೆ ಎಂದಾಗ ಅಜ್ಜಿಗೆ ಇಷ್ಟೊತ್ತು ಇವರು ನನ್ನ ಮೇಲೆ ಏನಕ್ಕ ಇಷ್ಟು ಪ್ರೀತಿ ತೋರಿಸಿದರು ಎಂದು ಗೊತ್ತಾಗುತ್ತದೆ.

ಅಂದರೆ ಅಜ್ಜಿಯ ಹತ್ತಿರ ಇರುವ ಬೆಳ್ಳಿ ಕಡಗಗೋಸ್ಕರ ಅವರು ಪ್ರೀತಿಯ ನಾಟಕವನ್ನು ಮಾಡುತ್ತಾರೆ. ಅಂದರೆ ದುಡ್ಡು ಇದ್ದರೆ ಒಂದು ರೀತಿಯಾಗಿ ನಡೆದುಕೊಳ್ಳುವುದು, ದುಡ್ಡು ಇಲ್ಲದೆ ಇದ್ದರೆ ಒಂದು ರೀತಿಯಾಗಿ ನಡೆದುಕೊಳ್ಳುವುದು. ಇಲ್ಲಿ ಜನರಿಗಿಂತ ದುಡ್ಡಿಗೆ ಹೆಚ್ಚು ಪ್ರಾಮುಖ್ಯತೆ ಎಂದು ಗೊತ್ತಾಗುತ್ತವೆ. ವಯಸ್ಸಾದ ಮೇಲೆ ಅವರು ಏನೂ ಪ್ರಯೋಜನವಿಲ್ಲ ಎಂದು ನೋಡುವುದು. ಅವರನ್ನು ದೂರ ಮಾಡುವುದು ಅವರ ಹತ್ತಿರ ಏನಾದರೂ ಇದೆ ಎಂದು ತಿಳಿದರೆ ಮಾತ್ರ ಅವರನ್ನು ಹತ್ತಿರ ಸೇರಿಸಿಕೊಳ್ಳುವುದು ಇಲ್ಲಿ ಎಲ್ಲರನ್ನು ಗೌರವದಿಂದ ಕಾಣಬೇಕು ತಾಯಿ, ಅತ್ತೆ ಒಂದೇ ಎಂದು ನೋಡಿದರೆ ಸರಿ ಹೋಗುತ್ತದೆ.

ತಾಯಿ ಸಾಕೀಬಾಯಿ

ಸಾಕೀಬಾಯಿ ಸಂಕ್ರಾ, ದೇವಲ್ಯಾ ಇವರು ತಾಯಿ ಮತ್ತು ಮಕ್ಕಳು. ಸಂಕ್ರಾಗೆ ಮಲ ತಾಯಿ ಸಾಕೀಬಾಯಿ. ಸಾಕೀ ಬಾಯಿ ಗಂಡ ಸತ್ತ ಮೇಲೆ ಮುನಿ ಅನ್ನುವ ವ್ಯಕ್ತಿಯನ್ನು ಪ್ರೀತಿ ಮಾಡುತ್ತಾಳೆ. ಇದು ಸಂಕ್ರಾಗೆ ಗೊತ್ತಾಗಿ ಆ ಊರಿನಿಂದ ಬೇರೆ ಊರಿಗೆ ಹೋಗಿ ಮದುವೆ ಮಾಡಿಕೊಂಡು ಇರುತ್ತಾನೆ. ದೇವಲ್ಯಾನಿಗು ಮದುವೆ ಆಗುತ್ತೆ. ಆದರೆ ಇವರಿಬ್ಬರು ಸಾಕೀಬಾಯಿಗೆ ತುಂಬಾ ಕಷ್ಟವನ್ನು ಕೊಡುತ್ತಾರೆ. ತಾಯಿ ಬೇರೆ ಇದ್ದು ಹುಲ್ಲು ಕಟ್ಟಿಗೆ ತಂದು ಮಾರಿಕೊಂಡು ಜೀವನ ಮಾಡುತ್ತಾಳೆ. ಹೀಗಿದ್ದಾಗ ಒಂದು ದಿನ ಸಂಕ್ರಾ ಮನೆಗೆ ಬಂದಿರುತ್ತಾನೆ. ಸಾಕೀಬಾಯಿ ಆಚೆ ಹೋಗಿರುತ್ತಾಳೆ. ಆಗ ಅಲ್ಲಿ ಯಾರೋ ಸಂಕ್ರಾ ಬಂದಿರುವ ಮಾತನ್ನು ಮಾತಾಡುತ್ತಿರುವಾಗ ಅದನ್ನು ಕೇಳಿಸಿಕೊಂಡು ಸಾಕೀಬಾಯಿ ಅಲ್ಲೇ ಇರುತ್ತಾಳೆ. ಸಂಕ್ರಾನ ಹೆಂಡತಿ ಅಲ್ಲಿಗೆ ಬಂದು ಮುನಿಯನ್ನು ಕರೆದುಕೊಂಡು ಹೋಗಿ ಎಲ್ಲಾದರೂ ಬದುಕಿ ಎಂದು ಹೇಳಿ ನೂರು ರೂ. ಅನ್ನು ಕೊಟ್ಟು ಇಬ್ಬರನ್ನು ಜೊತೆ ಮಾಡಿಸಿ ಕಳುಹಿಸಿ ಮನೆಗೆ ಬರುತ್ತಾಳೆ. ಆದರೆ ಸಂಕ್ರಾ ಮತ್ತು ದೇವಲ್ಯಾ ಅವರಿಬ್ಬರನ್ನು ಸಾಯಿಸಿ ಮರಕ್ಕೆ ನೇಣು ಹಾಕಿ ಬರುತ್ತಾರೆ. ಮಾರನೇ ದಿನ ಬೆಳಿಗ್ಗೆ ಎಲ್ಲರ ಬಾಯಲ್ಲೂ ಇದೇ ಮಾತು ನೋಡಿದರೆ ಮುನಿಯ ಮತ್ತು ಸಾಕೀಬಾಯಿ ಮರಕ್ಕೆ ನೇಣು ಹಾಕಿಕೊಂಡಿರುತ್ತಾರೆ.

ಇಲ್ಲಿ ಸಂಕ್ರಾನೇ ದೇವಲ್ಯಾನಿಗೆ ಹೇಳಿಕೊಟ್ಟು ತಾಯಿಯನ್ನು ಸಾಯಿಸುತ್ತಾನೆ. ತಾಯಿ ತಪ್ಪು ಮಾಡಿದಳೆಂದು ತಂದೆಗೆ ಮೋಸ ಮಾಡಿದಳೆಂದು ತಂದೆ ಸತ್ತ ಮೇಲೆ ತಾನು ವಿಧವೆಯಾಗಿ ಇರಬೇಕೆ ವಿನ: ಬೇರೆ ಯಾರನ್ನು ತಲೆಯೆತ್ತಿ ನೋಡಬಾರದು. ಯಾರ ಜೊತೆನೋ ಮಾತನಾಡಬಾರದು ಎಂದು ತುಂಬಾ ಕಷ್ಟವನ್ನು ಕೊಟ್ಟು ಊಟ ಹಾಕದೆ, ಬಟ್ಟೆ ಕೊಡದೆ ಇರುವುದಕ್ಕೆ ಜಾಗ ಕೊಡದೆ ಹೊಡೆದು ಎಲ್ಲಾ ಮಾಡಿ ಕೊನೆಗೂ ಪ್ರಾಣವನ್ನೇ ತೆಗೆದು ಬಿಡುತ್ತಾರೆ.

ಅಂದರೆ ಇಲ್ಲಿ ಹೆಣ್ಣು ಗಂಡ ಸತ್ತ ಮೇಲೆ ಬೇರೆ ಯಾರನ್ನು ನೋಡುವ ಹಾಗಿಲ್ಲ. ಮದುವೆ ಮಾಡಿಕೊಳ್ಳುವ ಹಾಗಿಲ್ಲ. ಅದೇ ಗಂಡಸು ಆದರೆ ತನ್ನ ಹೆಂಡತಿ ಸತ್ತು ಹೋದ ಮೂರನೇ ದಿನಕ್ಕೆ ಬೇರೆ ಮದುವೆ ಮಾಡಿಕೊಳ್ಳುತ್ತಾನೆ. ಇಲ್ಲಿ ಸ್ತ್ರೀ ಮತ್ತು ಪುರುಷರ ಮಧ್ಯೆ

ತಾಯಿ ಸಾಕೀಬಾಯಿ

ಸಾಕೀಬಾಯಿ ಸಂಕ್ರಾ, ದೇವಲ್ಯಾ ಇವರು ತಾಯಿ ಮತ್ತು ಮಕ್ಕಳು. ಸಂಕ್ರಾಗೆ ಮಲ ತಾಯಿ ಸಾಕೀಬಾಯಿ. ಸಾಕೀ ಬಾಯಿ ಗಂಡ ಸತ್ತ ಮೇಲೆ ಮುನಿ ಅನ್ನುವ ವ್ಯಕ್ತಿಯನ್ನು ಪ್ರೀತಿ ಮಾಡುತ್ತಾಳೆ. ಇದು ಸಂಕ್ರಾಗೆ ಗೊತ್ತಾಗಿ ಆ ಊರಿನಿಂದ ಬೇರೆ ಊರಿಗೆ ಹೋಗಿ ಮದುವೆ ಮಾಡಿಕೊಂಡು ಇರುತ್ತಾನೆ. ದೇವಲ್ಯಾನಿಗು ಮದುವೆ ಆಗುತ್ತೆ. ಆದರೆ ಇವರಿಬ್ಬರು ಸಾಕೀಬಾಯಿಗೆ ತುಂಬಾ ಕಷ್ಟವನ್ನು ಕೊಡುತ್ತಾರೆ. ತಾಯಿ ಬೇರೆ ಇದ್ದು ಹುಲ್ಲು ಕಟ್ಟಿಗೆ ತಂದು ಮಾರಿಕೊಂಡು ಜೀವನ ಮಾಡುತ್ತಾಳೆ. ಹೀಗಿದ್ದಾಗ ಒಂದು ದಿನ ಸಂಕ್ರಾ ಮನೆಗೆ ಬಂದಿರುತ್ತಾನೆ. ಸಾಕೀಬಾಯಿ ಆಚೆ ಹೋಗಿರುತ್ತಾಳೆ. ಆಗ ಅಲ್ಲಿ ಯಾರೋ ಸಂಕ್ರಾ ಬಂದಿರುವ ಮಾತನ್ನು ಮಾತಾಡುತ್ತಿರುವಾಗ ಅದನ್ನು ಕೇಳಿಸಿಕೊಂಡು ಸಾಕೀಬಾಯಿ ಅಲ್ಲೇ ಇರುತ್ತಾಳೆ. ಸಂಕ್ರಾನ ಹೆಂಡತಿ ಅಲ್ಲಿಗೆ ಬಂದು ಮುನಿಯನ್ನು ಕರೆದುಕೊಂಡು ಹೋಗಿ ಎಲ್ಲಾದರೂ ಬದುಕಿ ಎಂದು ಹೇಳಿ ನೂರು ರೂ. ಅನ್ನು ಕೊಟ್ಟು ಇಬ್ಬರನ್ನು ಜೊತೆ ಮಾಡಿಸಿ ಕಳುಹಿಸಿ ಮನೆಗೆ ಬರುತ್ತಾಳೆ. ಆದರೆ ಸಂಕ್ರಾ ಮತ್ತು ದೇವಲ್ಯಾ ಅವರಿಬ್ಬರನ್ನು ಸಾಯಿಸಿ ಮರಕ್ಕೆ ನೇಣು ಹಾಕಿ ಬರುತ್ತಾರೆ. ಮಾರನೇ ದಿನ ಬೆಳಿಗ್ಗೆ ಎಲ್ಲರ ಬಾಯಲ್ಲೂ ಇದೇ ಮಾತು ನೋಡಿದರೆ ಮುನಿಯ ಮತ್ತು ಸಾಕೀಬಾಯಿ ಮರಕ್ಕೆ ನೇಣು ಹಾಕಿಕೊಂಡಿರುತ್ತಾರೆ.

ಇಲ್ಲಿ ಸಂಕ್ರಾನೇ ದೇವಲ್ಯಾನಿಗೆ ಹೇಳಕೊಟ್ಟು ತಾಯಿಯನ್ನು ಸಾಯಿಸುತ್ತಾನೆ. ತಾಯಿ ತಪ್ಪು ಮಾಡಿದಳೆಂದು ತಂದೆಗೆ ಮೋಸ ಮಾಡಿದಳೆಂದು ತಂದೆ ಸತ್ತ ಮೇಲೆ ತಾನು ವಿಧವೆಯಾಗಿ ಇರಬೇಕೆ ವಿನಃ ಬೇರೆ ಯಾರನ್ನು ತಲೆಯೆತ್ತಿ ನೋಡಬಾರದು. ಯಾರ ಜೊತೆನೋ ಮಾತನಾಡಬಾರದು ಎಂದು ತುಂಬಾ ಕಷ್ಟವನ್ನು ಕೊಟ್ಟು ಊಟ ಹಾಕದೆ, ಬಟ್ಟೆ ಕೊಡದೆ ಇರುವುದಕ್ಕೆ ಜಾಗ ಕೊಡದೆ ಹೊಡೆದು ಎಲ್ಲಾ ಮಾಡಿ ಕೊನೆಗೂ ಪ್ರಾಣವನ್ನೇ ತೆಗೆದು ಬಿಡುತ್ತಾರೆ.

ಅಂದರೆ ಇಲ್ಲಿ ಹೆಣ್ಣು ಗಂಡ ಸತ್ತ ಮೇಲೆ ಬೇರೆ ಯಾರನ್ನು ನೋಡುವ ಹಾಗಿಲ್ಲ. ಮದುವೆ ಮಾಡಿಕೊಳ್ಳುವ ಹಾಗಿಲ್ಲ. ಅದೇ ಗಂಡಸು ಆದರೆ ತನ್ನ ಹೆಂಡತಿ ಸತ್ತು ಹೋದ ಮೂರನೇ ದಿನಕ್ಕೆ ಬೇರೆ ಮದುವೆ ಮಾಡಿಕೊಳ್ಳುತ್ತಾನೆ. ಇಲ್ಲಿ ಸ್ತ್ರೀ ಮತ್ತು ಪುರುಷರ ಮಧ್ಯೆ

ಭೇಧ ಭಾವವನ್ನು ಮಾಡಲಾಗಿದೆ. ಇಲ್ಲಿ ಸ್ತ್ರೀಯರು ಮತ್ತು ಪುರುಷರು ಒಂದೇ ಎಂಬ ಭಾವನೆಯಿಂದ ನೋಡಿದರೆ ಈ ರೀತಿಯಾದಂತಹ ಅನಾಹುತಗಳು ನಡೆಯುವುದಿಲ್ಲ. ಎಲ್ಲರೂ ಒಂದೇ ಎಂದು ನೋಡಬೇಕು.

ಮರು ಮದುವೆ

ರಾಮಣ್ಣ ಮತ್ತು ಗೌರಿ ಗಂಡ ಹೆಂಡತಿಯರು. ಅವರಿಗೆ ಮದುವೆ ಆಗಿ ಹನ್ನೆರೆಡು ವರುಷಗಳಿಂದ ಸರಳವಾದ ಹಾದಿಯಲ್ಲಿ ಸಾಗಿ ಬಂದ ಅವಳ ಬಾಳ ಬಂಡಿ ಈಗ ಕಲ್ಲು - ಮುಳ್ಳು ತುಂಬಿದ ಕೊರಕಲು ದಾರಿ ಹಿಡಿದಿದೆ.

ಗೌರಿಗೆ ಮೊದಲು ಒಂದು ಹೆಣ್ಣು ಮಗು ಆಯಿತು. ಆ ಮಗುವಿಗೆ 9 ವರ್ಷ ಆದರು ಮತ್ತೆ ಮಗು ಆಗುವ ಲಕ್ಷಣ ಕಾಣಿಸಲಿಲ್ಲ. ಅದಕ್ಕೆ ವಂಶೋದ್ಧಾರಕ ಆಗಬೇಕು ಎಂದು ಮಗನಿಗೆ ಎರಡನೇ ಮದುವೆ ಮಾಡಬೇಕೆಂದು ಅತ್ತೆ, ಮಾವ ತೀರ್ಮಾನಿಸಿದರು.

ತನ್ನ ಗಂಡ ಮರು ಮದುವೆ ಮಾಡಿಕೊಳ್ಳುವನೆಂಬ ಸುದ್ದಿ ಕೇಳಿದ ಗೌರಿ ಭೂಮಿಗಿಳಿದು ಹೋದಳು. ತನ್ನ ಸ್ಥಾನವನ್ನು ಮತ್ತೊಬ್ಬಳಿಗೆ ಬಿಟ್ಟು ಕೊಟ್ಟು ತಾನು ಮೂಲೆ ಪಾಲಾಗಬೇಕಾಗಿ ಬಂದಿತೇ ಎಂದು ಹಲುಬಿದಳು.

ರಾಮಣ್ಣನು ಸಹ ಎರಡನೇ ಮದುವೆಗೆ ಒಪ್ಪಿದನು. ಮದುವೆಗೆಂದು ಹುಡುಗಿಯ ಊರ ಕಡೆಗೆ ಹೋಗುತ್ತಿದ್ದಾಗ ಅಲ್ಲಿ ಆ ಊರಿನ ಹುಡುಗರು ಅಡ್ಡ ಬಂದು ಆ ಹುಡುಗಿ ಬೇರೆ ಹುಡುಗನ ಜೊತೆ ಹೊರಟು ಹೋಗಿದ್ದಾಳೆ ಎಂದು ಹೇಳಿದಾಗ ರಾಮಣ್ಣ ತಬ್ಬಿಬ್ಬಾಗುತ್ತಾನೆ. ಮುಖ ಸಪ್ಪಗೆ ಆಗುತ್ತದೆ. ಮದುವೆ ತಪ್ಪಿ ಹೋಗುತ್ತದೆ.

ಇಲ್ಲಿ ಗೌರಿಗೆ ಗಂಡು ಮಗು ಆಗಿಲ್ಲ ಎಂದು ಎರಡನೇ ಮದುವೆ ಮಾಡುವುದಕ್ಕೆ ನೋಡುತ್ತಾರೆ. ಆದರೆ ರಾಮಣ್ಣ ಅದಕ್ಕೆ ಕಾರಣ ಎಂದು ಹೇಳುವುದಿಲ್ಲ. ಇಲ್ಲಿ ಮಕ್ಕಳು ಆಗಲಿಲ್ಲ ಎಂದರೆ ಅದಕ್ಕೆ ಹೆಣ್ಣೇ ಕಾರಣ ಎಂದು ಎರಡನೇ ಮದುವೆ ಮಾಡುತ್ತಾರೆ. ಗಂಡು ಮಗು ಆಗಿಲ್ಲ ಎಂದರು ಹೆಣ್ಣೇ ಕಾರಣ ಎನ್ನುತ್ತಾರೆ. ಎಲ್ಲದಕ್ಕೂ ಹೆಣ್ಣನ್ನು ದೂಷಿಸುತ್ತಾರೆ ವಿನಃ ಗಂಡನನ್ನು ಯಾರನ್ನು ದೂಷಿಸುವುದಿಲ್ಲ. ಅಂದರೆ ಇದು ಪಿತೃಪ್ರಧಾನ ರಾಷ್ಟ್ರವಾಗಿದೆ.

ಗಂಡಸರದೇ ಮೇಲುಗೈ ಎಂದು ಹೇಳುತ್ತಾರೆ. ಹೆಂಗಸರನ್ನು ಕಸಕ್ಕಿಂತ ಕೀಳಾಗಿ ನೋಡುತ್ತಾರೆ. ಮನೆಗೆ ಯಜಮಾನ ಗಂಡಸರೇ ಆಗಿರುತ್ತಾರೆ. ಹೆಂಗಸನ್ನು ಅಡುಗೆ ಮನೆಗೆ ಮಾತ್ರ ಸೀಮಿತ ಎಂದು ಹೇಳುತ್ತಾರೆ. ಇಬ್ಬರನ್ನು ಸರಿಸಮಾನರು ಎಂದು ಯಾರು ನೋಡುವುದಿಲ್ಲ. ಸ್ತ್ರೀ ಮತ್ತು ಪುರುಷರು ಒಂದೇ ಎಂದು ನೋಡಿದಾಗ ಮಾತ್ರ ಹೆಣ್ಣಿನ ಮೇಲಿನ ಶೋಷಣೆಗಳು ದೂರವಾಗುತ್ತದೆ. ಸ್ತ್ರೀಯು ಸಹ ಈ ಪ್ರಪಂಚದಲ್ಲಿ ಗೌರವಾನ್ವಿತವಾಗಿ ಬದುಕಿ ಬಾಳಬಹುದು.

<u>ಸುದ್ಧಿ</u>

ರಾಜಿಯ ತಾಯಿ ಎಲ್ಲರ ಮನೆಯ ವಿಷಯದಲ್ಲೂ ತಲೆ ಹಾಕುತ್ತಿದ್ದರು. ಒಂದು ಸಲ ಪಕ್ಕದ ಮನೆ ಸರೋಜಮ್ಮನ ಮಗಳು ಹೋದಾಗ ಎದುರಿನ ಮನೆ ವಿಜಯಮ್ಮನ ಹತ್ತಿರ ಹೋಗಿ ತಂದೆ ತಾಯಿಗೆ ಮರ್ಯಾದೆ ತೆಗೆದಳು. ಆದರೆ ಆ ಹುಡುಗನಿಗೆ ಮೊದಲೇ ಮದುವೆ ಆಗಿದೆಯಂತೆ ಅವನು ಒಡ್ಡರ ಜಾತಿಯಂತೆ, ಅವನು ಇವಳ ಜೊತೆ ಹೋದಂತೆ ಅವನ ಹೆಂಡತಿ ಬೇರೆಯವನ ಜೊತೆ ಹೋಗುತ್ತಾಳೆ. ಅವರ ಜಾತಿಗೆ ಮರ್ಯಾದೆ ಏನು ಇಲ್ಲ ಎನ್ನುತ್ತಾಳೆ.

ಮಾರನೇ ದಿನ ರಾಜಿ ಅವರ ತಂದೆ, ಹೆಂಡತಿಗೆ ರಾಜಿ ನೆನ್ನೆ ಯಾವನೋ ಜೊತೆ ಇದ್ದಳಂತೆ ಎಂದಾಗ ಅವಳು ಯಾರೋ ಸುಳ್ಳು ಹೇಳಿರುವುದು ನನ್ನ ಮಗಳು ಅಂತಹವಳಲ್ಲ ಎಂದು ಬೈಯ್ಯುತ್ತಾಳೆ.

ನಂತರ ರಾಜಿ ತಂದೆ ಮನೆಗೆ ಬಂದು ಹೆಂಡತಿಯನ್ನು ರಾಜಿ ಎಲ್ಲಿ ಎಂದು ಹುಡುಕಿದಾಗ ಎಲ್ಲೂ ಇರುವುದಿಲ್ಲ. ರಾಜಿ ಬೇರೆಯವನ ಜೊತೆ ರೈಲಿನಲ್ಲಿ ಹೊರಟು ಹೋದಳಂತೆ ಎಂದಾಗ ಅಳುತ್ತಾಳೆ.

ಇಲ್ಲಿ ತನ್ನ ಮಗಳ ವಿಷಯ ಬಂದಾಗ ಬೈಯ್ಯುತ್ತಾಳೆ. ಯಾರಿಗೂ ಹೇಳದೆ ಮುಚ್ಚಿಡುತ್ತಾಳೆ. ಆದರೆ ಬೇರೆಯವರ ಮನೆಯ ಹೆಣ್ಣು ಮಕ್ಕಳ ವಿಷಯ ಬಂದರೆ ಮಾತ್ರ ತಾನು ಸೇರಿ ಮಾಡುತ್ತಾಳೆ. ಇಲ್ಲಿ ದೊಡ್ಡ ಜಾತಿಗೆ ಸೇರಿದ ಮಕ್ಕಳಿಗೆ ಏನು ಅನ್ಯಾಯ ಆಗಬಾರದು ಆದರೆ ಕೆಳಜಾತಿಯವರಿಗೆ ಮಾತ್ರ ಅನ್ಯಾಯ ಅದರು ಪರವಾಗಿಲ್ಲ ಎಂದು ನೋಡುವ ಜನ ಎಲ್ಲಾ ಹೆಣ್ಣು ಮಕ್ಕಳು ಒಂದೇ ಎಂದು ನೋಡಿದರೆ ಯಾವ ಹೆಣ್ಣು ಮಗುವು ಸಹ ಶೋಷಣೆಗೆ ಒಳಪಡುವುದಿಲ್ಲ. ಇಲ್ಲಿ ಮೇಲು ಕೀಳು ಇರಬಾರದು. ಎಲ್ಲಾ ಹೆಣ್ಣು ಮಕ್ಕಳು ಒಂದೇ ಎಂದು ನೋಡಿದರೆ ಎಲ್ಲವೂ ಸರಿ ಹೋಗುತ್ತದೆ.

ಅಧ್ಯಾಯ – 7

ಸಮಾರೋಪ

ಅಧ್ಯಾಯ-7

ಸಮಾರೋಪ

"ನೋವು ಹಿಂಸೆ ತಾಳಿ ಕೊಂಡೆವು
ಕುಡಿತ ಹೊಡೆತ ಸಹಿಸಿ ಕೊಂಡೆವು
ಬೈಗುಳ ಅಪಮಾನದಲ್ಲಿ ದಹಿಸಿಕೊಂಡೆವು
ಸೀಮೆಎಣ್ಣೆ ಸುರಿದು ಬೆಂಕಿಯಿಟ್ಟಾಗ
ತಾಳದೆ ಝಳ ಕೂಗಿ ಕೊಂಡೆವು
ಆತ್ಮಗಳು ತಿರುಗಿ ನಿಂತು ಕೇಳಿದವು
ತಾಳೋದ್ರಂದೆ ಎಲ್ಲಿ ತನಕ"?

ಎನ್ನುವ ಕವಿತೆಯೆಂತೆ ಹೆಣ್ಣು ತನ್ನೆಲ್ಲಾ ನೋವು ಅಪಮಾನ, ಶೋಷಣೆ, ಕೌರ್ಯವನ್ನು ಎಲ್ಲಿಯತನಕ ಸಹಿಸಿಕೊಳ್ಳಲು ಸಾಧ್ಯ. ಒಮ್ಮೆ ತಿರುಗಿ ನಿಲ್ಲಲೇಬೇಕಾದ ಅನಿವಾರ್ಯತೆ ಇದೆ. ಪ್ರತಿಭಟನೆ ಹೋರಾಟ ಎನ್ನುವ ನಿಟ್ಟಿನಲ್ಲಿ ಇಂದು ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದಾಳೆ.

ಇಂದು ಹೊಸ ಶತಮಾನದ ದಿನಗಳಲ್ಲಿ ಸ್ತ್ರೀ –ಪುರುಷರೆಂಬ ಅಭೇದದೊಳಗೂ ಒಂದೆಡೆ ಈ ಪುರುಷ ವರ್ಗ ಅವಳಿಗೆ ಎಲ್ಲಾ ಸೌಕರ್ಯ ಸವಲತ್ತುಗಳನ್ನು ನೀಡುವುದರೊಂದಿಗೆ ಸಮಾನ ಸ್ಥಾನವನ್ನು ಕಲ್ಪಿಸಿಕೊಟ್ಟಂತೆ ನಾಟಕವಾಡುತ್ತಿದೆ. ಜೊತೆಗೆ ಅವಳನ್ನು ಉನ್ನತೀಕರಿಸಿದ ಮಟ್ಟದಲ್ಲೇ ದೌರ್ಜನ್ಯಕರಿಸುವ ಆಧುನಿಕ ರೀತಿಯ ಆತಂಕಗಳನ್ನು ಅವಳಿಗೆ ಉಚಿತ ವಂತಿಕೆಯಾಗಿ ನೀಡುತ್ತಿದೆ. ಬಾಹ್ಯವಾಗಿ ಅಲ್ಲದಿದ್ದರೂ ಆಂತರಿಕವಾಗಿ ಮಹಿಳೆ ದಿನದಿಂದ ದಿನಕ್ಕೆ ಆತಂಕದಲ್ಲೇ ಜೀವನ ಸಾಗಿಸುತ್ತಿದ್ದಾಳೆ. ಪಾವಿತ್ರ್ಯತೆ ನೀತಿ ಹೆಣ್ಣಿಗೆ ಮಾತ್ರ ಅನ್ವಯಿಸುತ್ತದೆಯೇ ಅದು ಹೆಣ್ಣಿನ ಚರ್ಮದಲ್ಲಿಯೇ ? ಡಾ. ಎಚ್.ಎಸ್. ಅನುಪಮಾ ಅವರ ತಾತ್ವಿಕ ಪ್ರಶ್ನೆಯಾಗಿದೆ.

12ನೇ ಶತಮಾನಕ್ಕಾಗಲೇ ಬಂಧನಗಳಾಚೆಗಿನ ಬದುಕಿನ ಅಮೂರ್ತ ಚೆನ್ನಮಲ್ಲಿಕಾರ್ಜುನನ ಹುಡುಕಾಟ, ನನ್ನ ಸಂಶೋಧನೆಯೂ ಹುಡುಕಾಟವು ಆಗಿದೆ. ಇಂತಹ ಪ್ರಗತಿಪರ ಧೋರಣೆಗಳು ಆಲೋಚನೆಗಳಲ್ಲಿ ಮಾತ್ರ ಉಳಿದು ಹೋಗದೇ ನಿತ್ಯ

ಬದುಕಿನಸ್ವೀಕರಣೆಯಾಗಿ ಬಂದಾಗ ಹೆಣ್ಣಿನ ಆಯ್ಕೆ ಯಾವುದು ? ಡಾ॥ ಶಾರದಾ ವಿ.ಮೂರ್ತಿರವರ ಲೇಖನಗಳಲ್ಲಿ ಹೆಣ್ಣಿನ ದಿಟ್ಟ ಹೆಜ್ಜೆಗಳ ಗುರುತುಗಳಿವೆ. 'ಸಹಿಷ್ಣುತೆ' ಲಕ್ಷಣ ಹೊರಗಿನಿಂದ ಬಂದ ಒತ್ತಾಯವಾಗದೆ ಅವಳ ಜಾಯಮಾನದ ಬೇರುಗಳಲ್ಲೇ ಅಡಗಿ ಹೋಗಿದೆ ಕಡೆಗೆ ಸ್ತ್ರೀ ಅರ್ಥವಾಗದೇ ಪ್ರಶ್ನೆಯೇ ಆಗುತ್ತಾಳೆ. ಪುರುಷನಷ್ಟೇ ಅಲ್ಲದೇ, ಸ್ತ್ರೀ ಕೂಡ ತಾನೇ ಏರ್ಪಡಿಸಿಕೊಂಡಿರುವ ತನ್ನ ಅಸ್ತಿತ್ವಕ್ಕಾಗಿ ಅವಿರತ ಹೋರಾಟ ನಡೆಸುತ್ತಲೇ ಇದ್ದಾಳೆ.

"ಈಗಲೂ ಇಲ್ಲಿ ಅದೇ ಕಥೆ
ನಡೆದಿದೆ ಸೀತೆ
ಬದಲೇನಾದರೂ ಆಗಿದ್ದರೆ
'ಸೀ' ಬದಲು 'ಗಿ' ಎಂಬುದಷ್ಟೆ.

ಅನುಬಂಧ

ಅನುಬಂಧ

ಡಾ. ಬಿ.ಟಿ. ಲಲಿತಾನಾಯಕ್‌ನವರೊಡನೆ ಒಂದು ಸಂದರ್ಶನ.

ಒಂದು ಸಾಹಿತ್ಯ ಕೃತಿಯನ್ನು ಅರ್ಥೈಸಿಕೊಳ್ಳಲು ಲೇಖಕರ ಸ್ವಯಂ ಅಭಿಪ್ರಾಯಗಳನ್ನು ಗಮನಿಸಬೇಕಾಗುತ್ತದೆ. ಕತೆಗಳನ್ನು ನಾವು ಓದಿದಾಗ ಕಂಡು ಬಂದ ವಿಚಾರಗಳು, ಸಾಹಿತಿಯ ಕಣ್ಣಿನಿಂದ ನೋಡುವುದಕ್ಕೂ ಒಂದು ಸೂಕ್ಷ್ಮ ಅಂತರ ಇದ್ದೇ ಇರುತ್ತದೆ. ಕತೆಯೊಂದು ಸೃಜಿಸುವಂತೆ ಮಾಡಿದ ಒತ್ತಡ ಸ್ಫೂರ್ತಿ, ಅನುಭಾವಿತನ ಲೇಖಕನ ಸ್ವಂತದ್ದಾಗಿರುತ್ತದೆ. ಓದುಗನ ಮೇಲೆ ಬೀರುವ ಪರಿಣಾಮ ಇನ್ನೊಂದು ಬದಿಯದು. ಕವಿಯ ಸ್ವಂತ ಚಿಂತನೆಗಳನ್ನು ಅವರ ಮಾತಿನಲ್ಲೇ ಕೇಳಿದಾಗ, ವಿಮರ್ಶೆಯ ಆಸಕ್ತಿ ಹೊರಳು ಮಾರ್ಗವನ್ನು ಹಿಡಿಯುತ್ತದೆ. ನನಗೆ ಅವರ ಕಥೆಗಳನ್ನು ಓದಿ ಅವರ ಮೂಲ ಅಭಿಪ್ರಾಯಗಳನ್ನು ಕೇಳಲೇಬೇಕೆಂಬ ಕುತೂಹಲ ಉಂಟಾಯಿತು.

ಸಂಶೋಧಕಿ: ನಿಮ್ಮ ಕತೆಗಳ ಸ್ತ್ರೀ ಪಾತ್ರಗಳು ಕೈಗೊಳ್ಳುವ ನಿರ್ಧಾರ, ವರ್ತನಾಶೀಲ ಬದುಕಿನಲ್ಲಿ ಸಾಧ್ಯವಿದೆಯೇ ?

ಲೇಖಕಿ: ನೋಡಿ, ನಾವೆಲ್ಲಾ ಒಂಥರಾ ಚೌಕಟ್ಟಿನೊಳಗೇ ಬದುಕುತ್ತಿದ್ದೇವೆ. ಸಮಾಜ ಕೂಡ ಒಂದು ಇಮೇಜ್ ಸೃಷ್ಟಿ ಮಾಡಿದೆ. ಹೆಣ್ಣು ಹೀಗೆ ಇರಬೇಕು; ಗಂಡು ಹಾಗೇ ಇರಬೇಕು, ಎಂದು ಅಂತಹ ಒತ್ತಾಯಗಳನ್ನು ನಾವು ಬಗ್ಗುಬಡಿಯಬೇಕು. ಹೆಣ್ಣೊಬ್ಬಳು ಮುಕ್ತವಾಗಿ ಮಾತನಾಡುವಂತಿಲ್ಲ. ಅದರಲ್ಲೂ ಲೈಂಗಿಕ ವಿಚಾರಗಳನ್ನು ವ್ಯಕ್ತ ಪಡಿಸುವಂತಿಲ್ಲ. ಹೆಣ್ಣಿನ ವಿಚಾರದಲ್ಲಿ ಗಂಡು ಕುರುಡನಾಗಿದ್ದಾನೆ. ಹೆಣ್ಣು ತನ್ನ 'ಬೇಕು ಬೇಡ' ಗಳನ್ನು ತಾನೇ ಪೂರೈಸಿಕೊಳ್ಳಬೇಕಾಗಿದೆ.

ನೋಡಿ, ಈ ಕಥೆ ಪರಂಪರೆಯೇ ಭಿನ್ನವಾಗಬೇಕಾಗಿದೆ! ನನ್ನ ಸುತ್ತ ಮುತ್ತ ಪರಿಸರದಲ್ಲಿ ನಾನೇ ಹೋಗಿ ಪ್ರಯತ್ನಿಸಿ, ವಿಚಾರಿಸಿ, ಮುಕ್ತ ಭೇಟಿ ಮಾಡಿ ಕತೆಯಾಗಿಸಿದ್ದೇನೆ. ನನ್ನ 'ಬೇಕು' ಗಳನ್ನು ನಾನು ಈಡೇರಿಸಿಕೊಂಡಿದ್ದೇನೆ.

ನಾನು ಹೇಳಿರುವ ಆಧುನಿಕ ಎನ್ನಿಸುವ ವಿಚಾರಗಳನ್ನು ಎಲ್ಲೂ ಓದಿರಲಿಲ್ಲ. ಯಾವ ಕತೆಗಳಲ್ಲೂ ಹಿಂದೆ ಓದಿಲ್ಲ"

ಪುರುಷ ಸಮಾಜದ ಒಪ್ಪಿಗೆ ನನಗೆ ಬೇಕಿಲ್ಲ. ಸರಿ, ತಪ್ಪು ನನಗೆ ಗೊತ್ತಿದೆ, ಔಟ್ ಆಫ್ ವೇ ಹೋಗಲು ನಾನು ಸಿದ್ಧ, ಬೇರೆಯವರಿಗೆ ಯಾಕೆ ಸಾಧ್ಯವಿಲ್ಲ? ನಾವು ಸಾಧ್ಯ ಮಾಡಬೇಕು.

ಕತೆಯ ಮೂಲಕ ಹೇಳಿರುವ ಸತ್ಯಗಳು ಕೇವಲ ಸಿದ್ಧಾಂತ ಆಗಕೂಡದು.

ಸಂಶೋಧಕಿ: ಆಧುನಿಕತೆ ಎಂಬ ಸ್ವರೂಪಕ್ಕೆ ನಿಮ್ಮ ವಿಶೇಷ ಅರ್ಥ ಏನು :
ಲೇಖಕಿ: ಈಗ ಪ್ರತಿಯೊಬ್ಬರ ಬಳಿ ಮೊಬೈಲ್ ಬಂದಿದೆ ಕಂಪ್ಯೂಟರ್ ಇದೆ. ಅದನ್ನು ಇಟ್ಕೊಂಡು ನಾವು ಏನ್ ಮಾಡ್ತೀವಿ ಹೇಳಿ ? ಅದೇ ಹಳೆ ಸಂಗತಿಗಳನ್ನು ಮಾತನಾಡುತ್ತೇವೆ. ಅವರ್ ಮನೇಲಿ ಹಾಗೆ; ಇವರ ಮನೇಲಿ ಹೀಗೆ.

ಬೆಲೆ ಬಾಳುವ ವಸ್ತುಗಳಿಂದ ಅಲ್ಲ, ನಮ್ಮ ಮೈಂಡ್ ಸೆಟ್ ಬದಲಾಗಬೇಕು, ಅದೇ ಆಧುನಿಕತೆ, ಬ್ಯಾಂಕ್ ಬ್ಯಾಲೆನ್ಸ್ ಮುಖ್ಯ ಅಲ್ಲ, ನಮ್ಮ ದೃಷ್ಟಿಕೋನ ಬದಲಾಗಬೇಕು. ಆಧುನಿಕತೆ ಎಂದರೆ, ಆಸೆಪಡೋದು ಅಲ್ಲ, ಇಚ್ಛಾಶಕ್ತಿಯನ್ನು ಕಾಪಾಡೋದು.

ಸಂಶೋಧಕಿ: ಮಹಿಳಾ ಸಾಹಿತ್ಯದ ಆಸಕ್ತಿ ಬಗ್ಗೆ ಒಲವು ಮೂಡಿದ್ದು ಹೇಗೇ ? ಯಾವ ಪ್ರೇರಣೆಯಿಂದ.
ಲೇಖಕಿ: ನನಗೆ ಮೊದಲು ಸಾಹಿತ್ಯದ ಆಸಕ್ತಿ ಹುಟ್ಟಿಸಿದವರು ನನ್ನ ತಂದೆ, ಆ ನಂತರ ನನ್ನ ಬೆಳವಣಿಗೆಯಲ್ಲಿ ಬಹುಪಾಲು ಕಾರಣರಾದವರು ನನ್ನ ಕಾಲೇಜು ಅಧ್ಯಾಪಕರು.

ನಾನು ಕನ್ನಡ ಸಾಹಿತ್ಯಕ್ಕೆ ಸಂಬಂಧಪಟ್ಟ ವೃತ್ತಿಯಲ್ಲಿ ತೊಡಗಲು ಬರವಣಿಗೆ ಮತ್ತು ಭಾಷಣಗಳಿಗೆ ಅವಕಾಶ ಕಲ್ಪಿಸಿದವರು ನನ್ನ ಗುರುಗಳೇ, ವಿದ್ಯಾಭ್ಯಾಸ ಮುಗಿದ ಮೇಲೆ ನಾನು ಮಹಿಳಾ ಸಂಘಟನೆ ಮತ್ತು ಚಳುವಳಿಯಲ್ಲಿ ತೀವ್ರವಾಗಿ ತೊಡಗಿಕೊಂಡಿದ್ದೆ. ಇದರ ಭಾಗವಾಗಿ ನಾನು ಕರ್ನಾಟಕ ಲೇಖಕಿಯರ ಸಂಪರ್ಕಕ್ಕೆ ಬಂದೆ. ಆ ಕಾಲ ಘಟ್ಟದ ನಾಡಿನ ಹಲವಾರು

ಲೇಖಕ, ಲೇಖಕಿಯರೊಡನೆ, ಒಡನಾಡುವ ಸದಾವಕಾಶ ಸಿಕ್ಕಿತು. ಈ ಸಂದರ್ಭದಲ್ಲಿ ಮಹಿಳಾ ಸಾಹಿತ್ಯ ನನ್ನನ್ನು ವಿಶೇಷವಾಗಿ ಆಕರ್ಷಿಸಿತು.

ಸಂಶೋಧಕಿ: ಮಹಿಳೆ ಕುರಿತ ಚಿಂತನೆ ನಿಮ್ಮಲ್ಲಿ ಸ್ವತ: ಅನುಭವದಿಂದ ಬಂದಿದ್ದ ಅಥವಾ ಜೀವನದ ಅನುಭವದಿಂದ ಬಂದಿರುವಂತಾದ್ದ?

ಲೇಖಕಿ: ಮಹಿಳಾ ಸಂಘಟನೆಯಲ್ಲಿ ಸಕ್ರಿಯವಾಗಿ ನಾನು ಅದರ ಸಂಪಾದಕಿಯಾಗಿ ಕೆಲಸ ಮಾಡಿದ್ದೆ.

ಹಳ್ಳಿ, ನಗರ, ಮಾಡರ್ನ್ ಸೊಸೈಟಿ, ಅರ್ಬನ್ ಸೊಸೈಟಿ ಎಲ್ಲವನ್ನು ಖುದ್ದು ನೋಡಿ ಬರೆದೆ, ದಲಿತರೊಳಗೆ ಇರಬಹುದಾದ ಸಂಗತಿಗಳನ್ನು ಬರೆದೆ. ಅದಕ್ಕೆ ವಿರೋಧವೂ ಬಂತು, ಸಮಾಜಕ್ಕೆ ನನ್ನ ಕತೆ ಸಂದೇಶ ಕೊಟ್ಟಿದೆ.

ಲೇಖಕಿ: ನನ್ನ ತಂಗಿಯು ಸಹ ಕತೆಗಳನ್ನು ತುಂಬಾ ಬರೆದಿದ್ದಾರೆ. ತುಂಬಾ ಚನ್ನಾಗಿ ಬರೆದಿದ್ದಾರೆ.

ಸಂಶೋಧಕಿ: ನಿಮ್ಮ ತಂಗಿಯ ಹೆಸರೇನು ?

ಲೇಖಕಿ: ನನ್ನ ತಂಗಿಯ ಹೆಸರು ಬಿ.ಟಿ. ಜಾಹ್ನವಿ.

ಅಭಿವ್ಯಕ್ತಿ ಸ್ವಾತಂತ್ರ್ಯ ಪಡೆದುಕೊಳ್ಳುವುದು ಹೇಗೆಂದರೆ ಸ್ತ್ರೀ ತನ್ನಷ್ಟಕ್ಕೆ ತಾನೇ ತನಗಾದ ಅನ್ಯಾಯದ ವಿರುದ್ಧ ಪ್ರತಿಭಟಿಸುವ ಆತ್ಮಸ್ಥೈರ್ಯವನ್ನು ಪಡೆದುಕೊಂಡಾಗ ಮತ್ತು ತಾನು ಹೆಣ್ಣು ಎಂಬ ಕೀಳರಿಮೆಯನ್ನು ಕಿತ್ತೆಸೆದು ಸಮಾಜದ ದುಷ್ಟ ಶಕ್ತಿಗಳ ವಿರುದ್ಧ ವಿಮುಖವಾಗಿ ನಿಲ್ಲುವಂತಹ ಧೈರ್ಯವನ್ನು ಕಂಡು ಕೊಂಡಾಗ ಮಾತ್ರ ಸಾಧ್ಯವಾಗುತ್ತದೆ.

ಎಲ್ಲಿಯವರೆಗೆ ಸ್ತ್ರೀ ತನ್ನನ್ನು ತಾನು ಶೋಷಣೆಗೆ, ಅವಮಾನಕ್ಕೆ ದೌರ್ಜನ್ಯಕ್ಕೆ ನಿಲ್ಲುವಳೋ ಅಲ್ಲಿಯವರೆಗೆ ಸ್ತ್ರೀಯರನ್ನು ಶೋಷಿಸುವ ಜನರಿರುತ್ತಾರೆ ಎಂಬುದು ಕಟ್ಟುಸತ್ಯವಾಗಿದೆ.

ಕಿಚ್ಚಿಲ್ಲದ ಬೇಗೆಯಲಿ ಬೆಂದೆನವ್ವ!
ಏರಿಲ್ಲದ ಘಾಯದಲಿ ನೊಂದೆವವ್ವ
ಸುಖವಿಲ್ಲದ ಧಾವ ಗೊಂಡೆನವ್ವ!

ಚೆನ್ನಮಲ್ಲಿಕಾರ್ಜುನ ದೇವಂಗೊಲಿದು

ಬಾರದ ಭವಂಗಳಲಿ ಬಂದೆನವ್ವ!

"ಪಾವಿತ್ರ್ಯತೆ ಎಂಬ ನೀತಿ ಹೆಣ್ಣಿಗೆ ಮಾತ್ರ ಅನ್ವಯಿಸುತ್ತದೆಯೇ, ಅದು ಹೆಣ್ಣಿನ ಚರ್ಮದಲ್ಲಿದೆಯೇ ?" ಡಾ. ಎಚ್.ಎಸ್. ಅನುಪಮಾ ಅವರ ತಾತ್ವಿಕ ಪ್ರಶ್ನೆ ಶಾರದಾ.ವಿ.ಮೂರ್ತಿಯವರ ಮೂಲಭೂತ ಪ್ರಶ್ನೆಯೂ ಆಗಿದೆ.

ಲೌಕಿಕದಿಂದ ವಿಮುಖಳಾಗಿ ಅಗಮ್ಯತೆಯತ್ತ ಹೊರಟ 'ಅಕ್ಕ' ಯಾವ ಚೆನ್ನಮಲ್ಲಿಕಾರ್ಜುನನ ಹುಡುಕಾಟಕ್ಕೆ ಪ್ರಯತ್ನಿಸಿದ್ದಳು? ಮಾಗುವಿಕೆ ಎಂದರೆ ಮೀರುವಿಕೆ ಎಂಬರ್ಥವೇ? ಎಲ್ಲ ಗಡಿಗಳಾಚೆ ಸಾವಿಲ್ಲದ, ಕೇಡಿಲ್ಲದ ಪುರುಷ ಸಂಬಂಧವನ್ನು ಪಡೆಯಲು ಪ್ರಯತ್ನಿಸಿದ್ದಳೇ? ಲೌಕಿಕತೆಯ 'ಕೇಡು' ಗಳನ್ನು ನಿರಾಕರಿಸಿ, ಸೀಮೆಯಿಲ್ಲದ ನಿಸ್ಸೀಮನನ್ನು ಹುಡುಕಿಕೊಳ್ಳುವ ಅವಳ ಮನ:ಸ್ಥಿತಿಯಲ್ಲಿ ಮಹಿಳೆಯರ ಸಮಸ್ಯೆಗೆ ಉತ್ತರವಿದೆ. ಪ್ಲೇಟೋನಿಕ್ ಅಥವಾ ಭ್ರಾಮಕತೆಯಲ್ಲಿ ಮಾನ್ಯ ಪುರುಷ, ಅಸ್ತಿತ್ವ ಅಡಗಿದೆಯೇ? ಸ್ತ್ರೀ – ಪುರುಷ ಸಂಬಂಧಗಳನ್ನು 'ಸ್ವಚ್ಚಂದತೆ'ಯ ಚೌಕಟಿನಲ್ಲಿ ನಿರೂಪಿಸಲು ಪ್ರಯತ್ನಿಸಿದ ಅವಳ ಹೋರಾಟದಲ್ಲಿ 'ಸ್ತ್ರೀ ಸ್ವಾತಂತ್ರ್ಯ'ದ ಎಳೆಗಳನ್ನು ಕಾಣಬಹುದಾಗಿದೆ.

ಅನುಬಂಧ–1

ಆಕರ ಗ್ರಂಥಗಳು

1. ಹಬ್ಬ ಮತ್ತು ಬಲಿ – ಬಿ.ಟಿ. ಲಲಿತಾನಾಯಕ್
2. ಪ್ರೀತಿ ಮತ್ತು ಇತರ ಕತೆಗಳು – ವಸುಂಧರಾ ಭೂಪತಿ
3. ಮೌಲ್ಯ ಮತ್ತು ಸಮಗ್ರ ಕಥಾ ಸಂಕಲನ – ಶಾರದಾ ವಿ.ಮೂರ್ತಿ

ಅನುಬಂಧ–2

ಪರಾಮರ್ಶನ ಗ್ರಂಥಗಳು

1. ಕಳೆದುಕೊಂಡವಳು ಮತ್ತು ಇತರ ಕತೆಗಳು – ಬಿ.ಟಿ. ಲಲಿತಾ ನಾಯಕ್
2. ಕಳ್ಳುಬಳ್ಳಿ ಸಮಗ್ರ ಕಥಾ ಸಂಕಲನ – ಬಿ.ಟಿ. ಜಾಹ್ನವಿ.
3. ಅಮ್ಮಚ್ಚಿಯೆಂಬ ನೆನಪು – ವೈದೇಹಿ
4. ಕತೆ ಕತೆ ಕಾರಣ – ವೈದೇಹಿ
5. ಕಂಬನಿ – ಪುಷ್ಪಲತ ಶಿವಪ್ಪ
6. ನವರತ್ನ – ಎಂ.ಕೆ.ಇಂದಿರಾ
7. ಶೋಧ – ಶಾರದಾ.ವಿ.ಮೂರ್ತಿ
8. ಬಾಂಧವ್ಯ – ಶಾರದಾ.ವಿ.ಮೂರ್ತಿ
9. ಬೇರು – ಶಾರದಾ.ವಿ.ಮೂರ್ತಿ
10. ಪ್ರೀತಿ – ವಸುಂಧರಾ ಭೂಪತಿ
11. ಮೌಲ್ಯ – ಶಾರದಾ ವಿ.ಮೂರ್ತಿ
12. ಕೊಡಗಿನ ಗೌರಮ್ಮ ಬರೆದ ಕಥೆಗಳು– ಕಾಳೇಗೌಡ ನಾಗವಾರ
13. ಸಫೀರಾ – ಭಾನು ಮುಸ್ತಾಕ್

ಅನುಬಂಧ–3

ಭಾವಚಿತ್ರಗಳು

ಡಾ: ಬಿ.ಟಿ.ಲಲಿತಾನಾಯಕ್



ಡಾ: ವಸುಂಧರಾ ಭೂಪತಿ

